ಅಧ್ಯಾಯ – ೫

# ಕೈಗಾರಿಕೆಗಳು

**ಉ**ಡುಪಿ ಜಿಲ್ಲೆಯು ೨೦೦೬–೧೧ರ ನೂತನ ಕೈಗಾರಿಕಾ ನೀತಿಯನ್ವಯ ಕೈಗಾರಿಕೆಯಲ್ಲಿ ಹಿಂದುಳಿದ ಜಿಲ್ಲೆಯಾಗಿದ್ದು, ವಲಯ–Iಕ್ಕೆ ಸೇರಿದೆ. ಒಟ್ಟು ೩,೩೧,೧೫೪ ಮಂದಿ ಕಾರ್ಮಿಕರು, ದ್ವಿತೀಯ ವಲಯವಾದ ಕೈಗಾರಿಕಾ ಕ್ಷೇತ್ರ ಹಾಗೂ ತೃತೀಯ ವಲಯ ಅಥವಾ ಸೇವಾ ಕ್ಷೇತ್ರವಾದ ರೈಲ್ವೆ, ಸಾರಿಗೆ, ಸಂಪರ್ಕ, ಸಂಗ್ರಹಣೆ, ವ್ಯಾಪಾರ, ಹೋಟೆಲ್ ಮತ್ತು ಉಪಹಾರಗಳು, ಬ್ಯಾಂಕ್ ಮತ್ತು ವಿಮೆ, ಸ್ಥಿರಾಸ್ತಿ ಮತ್ತು ವಸತಿಗೃಹಗಳ ಒಡೆತನ ಸಾರ್ವಜನಿಕ ಆಡಳಿತ ಹಾಗೂ ಇತರೆ ಸೇವೆಗಳು ಈ ಕ್ಷೇತ್ರಗಳಲ್ಲಿ ದುಡಿಯುತ್ತಿದ್ದರು.

ಜಿಲ್ಲೆಯಲ್ಲಿ ಕೈಗಾರಿಕಾಭಿವೃದ್ಧಿಗೆ ಬೇಕಾದ ಖನಿಜ ಸಂಪನ್ಮೂಲಗಳಾದ ಅಲ್ಯೂವಿಯಲ್ (Alluviual), ಜಂಬಿಟ್ಟಿಗೆ (Laterite), ಅಸಿಡ್ ವಾಲ್ಕಾನಿಕ್ಸ್ (Acid Volcanics), ಡೊಲರೈಟ್ ಮತ್ತು ಆಂಪಿಬೋಲೈಟ್ ಡೈಕ್ಸ್ (Dolerite and Amphibolite Dykes), ಮೆಟಾಬಸಾಲ್ಟ್ (Metabasalt), ಕ್ರಾಸ್ ಬೆಡ್ಡೆಡ್ ಕ್ವಾರ್ಟಝೈಟ್ (Crossbedded Quartzite) ಇತ್ಯಾದಿ ಲಭ್ಯವಿವೆ. ಉಡುಪಿ ಜಿಲ್ಲೆಯು ೮೦ಕಿ.ಮೀ. ಕರಾವಳಿ ಪ್ರದೇಶ, ಹಾಗೂ ೧,೦೦,೧೦೨ ಹೆಕ್ಟೇರ್ ಪ್ರದೇಶದಲ್ಲಿ, ವಿಶಾಲವಾದ ಸಂಪದ್ಭರಿತ ಅರಣ್ಯ ಪ್ರದೇಶವನ್ನು ಹೊಂದಿದ್ದು, ಇಲ್ಲಿ ತೆಂಗು, ಅಡಿಕೆ, ಗೇರು, ರಬ್ಬರ್, ಕೋಕೋ, ಬಾಳೆ, ಮಾವು ಮತ್ತಿತರ ತೋಟಗಾರಿಕೆ ಬೆಳೆಗಳು ಹಲವಾರು ಕೈಗಾರಿಕೆಗಳಿಗೆ ಬೇಕಾದ ಕಚ್ಚಾ ಸಂಪನ್ಮೂಲಗಳನ್ನು ಒದಗಿಸುತ್ತಿವೆ. ಮೀನುಗಾರಿಕೆಯು ಹಲವು ಮಂದಿಗೆ ಉದ್ಯೋಗ ಒದಗಿಸಿವೆ. ಈ ಕಸುಬು ಫಿಶ್‌ಕ್ಯೂರಿಂಗ್, ಫಿಶ್‌ಮೀಲ್ ಅಂಡ್ ಫಿಶ್‌ಆಯಿಲ್ ಮತ್ತಿತರ ಮೀನುಗಾರಿಕೆಗೆ ಸಂಬಂಧಿತ ಕೈಗಾರಿಕೆಗಳ ಬೆಳವಣಿಗೆಗೆ ಸಹಕಾರಿಯಾಗಿದೆ. ಇಲ್ಲಿ ಮಣಿಪಾಲ ಸೆಕ್ಯೂರಿಟಿ ಪ್ರಿಂಟರ್ಸ್, ಮಣಿಪಾಲ; ಕೆನರಾ ಸೆಕ್ಯೂರಿಟಿ ಪ್ರೆಸ್ ಮಣಿಪಾಲ; ಮಣಿಪಾಲ ಪವರ್ ಪ್ರೆಸ್ ಮಣಿಪಾಲ; ಮಣಿಪಾಲ ಪ್ರಿಂಟರ್ಸ್ ಅಂಡ್ ಪಬ್ಲಿಷರ್ಸ್, ಮಣಿಪಾಲ್; ಲ್ಯಾಮಿನಾ ಫೌಂಡ್ರೀಸ್, ನಿಟ್ಟೆ ; ಮಣಿಪಾಲ ಪ್ರಕಾಶನ (ಪ್ರೈ) ಲಿ. ; ದಕ್ಷಿಣ ಕನ್ನಡ ಸಹಕಾರಿ ಸಕ್ಕರೆ ಕಾರ್ಖಾನೆ ಬ್ರಹ್ಮಾವರ; ಬಾಳಿಗಾ ಎಕ್ಸ್‌ಪೋರ್ಟ್ ಪ್ರೈವೇಟ್ (ಲಿ); ಲೂಸಿ ಅಂಡ್ ಲೂಸಿ ಫಿಷರೀಸ್ ಪ್ರೈವೇಟ್ (ಲಿ) ಮಲ್ಪೆ; ಅಮಿತಾ ಜೂಲಿಯನ್ ಮೆರೈನ್ ಪ್ರೈವೇಟ್ (ಲಿ) ಹಿರಿಯಡ್ಕ; ಮೊದಲಾದ ೧೪ ಮಧ್ಯಮ ಪ್ರಮಾಣದ ಕೈಗಾರಿಕೆಗಳಿದ್ದು, ಅವುಗಳಲ್ಲಿ ರೂ. ೫,೬೦೮.೭೧ಲಕ್ಷ ಬಂಡವಾಳ ತೊಡಗಿಸಲಾಗಿದೆ. ಇವು ೨,೯೬೦ ಮಂದಿಗೆ ಉದ್ಯೋಗ ಒದಗಿಸಿವೆ. ಹಾಗೆಯೇ ಜಿಲ್ಲೆಯಲ್ಲಿ ೭,೧೮೩ ಸಣ್ಣ ಮತ್ತು ಅತೀ ಸಣ್ಣ ಕೈಗಾರಿಕೆಗಳಿದ್ದು, ಅವುಗಳಲ್ಲಿ ರೂ.೩೧,೧೮೯.೨೭ಲಕ್ಷ ಬಂಡವಾಳ ತೊಡಗಿಸಲಾಗಿದೆ. ಇವು ೪೪,೦೭೬ ಮಂದಿಗೆ ಉದ್ಯೋಗ

ಒದಗಿಸಿವೆ. ಈ ಆಧುನಿಕ ಉದ್ಯಮಗಳಿಂದಾಗಿ ಜಿಲ್ಲೆಯ ಎಲ್ಲಾ ಭಾಗಗಳಿಗೂ ಉತ್ತಮ ರಸ್ತೆ ಸಂಪರ್ಕ ಜಾಲವಿದೆ. 'ದಿ ವೆಸ್ಟ್‌ಕೊಸ್ಟ್ ಹೈವೇ', ಕೊಂಕಣ ರೈಲು ಮಾರ್ಗ ಹಾಗೂ ಮಲ್ಪೆ ಬಂದರು ಮುಂತಾದವು ಜಿಲ್ಲೆಯಲ್ಲಿ ಕೈಗಾರಿಕೆಗಳ ಅಭಿವೃದ್ಧಿಗೆ ಹಾಗೂ ಜಿಲ್ಲೆಯ ಸರ್ವತೋಮುಖ ಬೆಳವಣಿಗೆಗೆ ನಾಂದಿಯಾಗಿವೆ. ಜಿಲ್ಲೆಯಲ್ಲಿ ಎರಡು ಮೆಡಿಕಲ್ ಕಾಲೇಜ್‌ಗಳು, ಒಂದು ದಂತ ವೈದ್ಯ ಕಾಲೇಜ್, ಮೂರು ಇಂಜಿನಿಯರಿಂಗ್ ಕಾಲೇಜ್‌ಗಳು ಹಾಗೂ ನಾಲ್ಕು ಪಾಲಿಟೆಕ್ನಿಕ್ ಕಾಲೇಜ್‌ಗಳಿವೆ. ಅಲ್ಲದೆ ಹಲವಾರು ಕೈಗಾರಿಕೆ ತರಬೇತಿ ಕಾಲೇಜ್‌ಗಳಿದ್ದು, ಇವು ಒದಗಿಸುವ ತಾಂತ್ರಿಕ ಹಾಗೂ ವೃತ್ತಿಪರ ಶಿಕ್ಷಣದಿಂದಾಗಿ ಕೈಗಾರಿಕಾ ಬೆಳವಣಿಗೆಗೆ ಅನುಕೂಲವಾಗಿದೆ.

ಕರ್ನಾಟಕ ಕೈಗಾರಿಕಾಭಿವೃದ್ಧಿ ಪ್ರದೇಶ ಮಂಡಳಿಯು (KIADB) ಮಾರ್ಚ್ ೨೦೦೫ರ ಅಂತ್ಯಕ್ಕೆ ಉಡುಪಿ ತಾಲೂಕಿನ ಶಿವಳ್ಳಿಯಲ್ಲಿ ೯೦ ಏಕರೆ ಪ್ರದೇಶದಲ್ಲಿ ೭೨.೨೦ ಎಕರೆಯಲ್ಲಿ ೯೦ ನಿವೇಶನಗಳನ್ನು ರೂಪಿಸಿ ಹಂಚಲಾಗಿದೆ. ಇದೇ ತಾಲೂಕಿನ ನಂದಿಕೂರಿನಲ್ಲಿ ೧೭೫.೨೫ ಎಕರೆಯಲ್ಲಿ ಕೈಗಾರಿಕಾ ಪ್ರದೇಶವನ್ನು ಅಭಿವೃದ್ಧಿ ಪಡಿಸುತ್ತಿದೆ. ಅಲ್ಲದೆ ೨೦೦೬–೦೭ರಲ್ಲಿ ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕಾ ಅಭಿವೃದ್ಧಿ ಮಂಡಳಿಯು (KSSIDC) ೯.೯೭ ಎಕರೆ ವಿಸ್ತೀರ್ಣದಲ್ಲಿ ಮಣಿಪಾಲ ಕೈಗಾರಿಕಾ ಎಸ್ಟೇಟ್, ೧೦ ಎಕರೆ ವಿಸ್ತೀರ್ಣದಲ್ಲಿ ಕಾರ್ಕಳ ಕೈಗಾರಿಕಾ ಎಸ್ಟೇಟ್, ಹಾಗೂ ೬.೨ ಎಕರೆ ವಿಸ್ತೀರ್ಣದಲ್ಲಿ ಕೋಟೇಶ್ವರ ಕೈಗಾರಿಕಾ ಎಸ್ಟೇಟು ಅಭಿವೃದ್ಧಿಪಡಿಸಿ ಕೈಗಾರಿಕಾ ಶೆಡ್ಡುಗಳನ್ನು ವಿತರಿಸಿದೆ. ಜಿಲ್ಲೆಯಲ್ಲಿ ಬ್ಯಾಂಕಿಂಗ್ ಸೌಲಭ್ಯ ಅತ್ಯುತ್ತಮವಾಗಿದ್ದು, ೨೨೨ ವಾಣಿಜ್ಯ ಬ್ಯಾಂಕುಗಳು, ೧೧ ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳು, ೩೨ ನಗರ ಪ್ರದೇಶದ ಸಹಕಾರಿ ಬ್ಯಾಂಕುಗಳು, ೫೩ ಇತರೆ ಸಹಕಾರಿ ಬ್ಯಾಂಕುಗಳು, ಮೂರು ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕುಗಳು, ೧೯ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕುಗಳು ಹಾಗೂ ಮೂರು ಕರ್ನಾಟಕ ರಾಜ್ಯ ಕೃಷಿ ಸಹಕಾರ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕುಗಳಿದ್ದು, ಕೈಗಾರಿಕೆಗಳಿಗೆ ಬೇಕಾಗುವ ಅಲ್ಪಾವಧಿ, ಮಧ್ಯಮಾವಧಿ ಸಾಲ ನೀಡಲು ಸಮರ್ಥವಾಗಿವೆ. ರಾಜ್ಯ ಕೈಗಾರಿಕಾ ಇಲಾಖೆ, ಕರ್ನಾಟಕ ರಾಜ್ಯ ಹಣಕಾಸು ನಿಗಮ ಹಾಗೂ ರಾಷ್ಟ್ರೀಯ ಸಣ್ಣ ಕೈಗಾರಿಕೆಗಳ ನಿಗಮ ಮುಂತಾದವು ಕೈಗಾರಿಕೆಗಳಿಗೆ ಸಾಲ ನೀಡಲು ಸ್ಥಾಪನೆಯಾಗಿವೆ. ಆ ಅಂಶಗಳು ಜಿಲ್ಲೆಯಲ್ಲಿ ಕೈಗಾರಿಕಾ ಬೆಳವಣಿಗೆಗೆ ಸಹಕಾರಿಯಾಗಿವೆ.

## ಹೊಸ ಕೈಗಾರಿಕಾ ನೀತಿ

ಹೊಸ ಕೈಗಾರಿಕಾ ನೀತಿಯನ್ವಯ (೨೦೦೬–೧೧ರ) ಕೈಗಾರಿಕಾ ವಲಯದಲ್ಲಿ ಶೇಕಡಾ ೧೨ರ ಬೆಳವಣಿಗೆಯ ಗುರಿ ಹೊಂದಿದ್ದು, ಸುಮಾರು ೧೦ ಲಕ್ಷ ಜನರಿಗೆ ಉದ್ಯೋಗ ಒದಗಿಸಲು ಉದ್ದೇಶಿಸಲಾಗಿದೆ. ದೇಶದ ಒಟ್ಟು ರಫ್ತಿನಲ್ಲಿ ರಾಜ್ಯದ ಪಾಲನ್ನು ಶೇಕಡಾ ೧೫–೨೦ರಷ್ಟಕ್ಕೆ ಏರಿಸಲು ಪ್ರಸಕ್ತ ಕೈಗಾರಿಕಾ ನೀತಿಯಲ್ಲಿ ಉದ್ದೇಶಿಸಲಾಗಿದೆ.

ಹೊಸ ಕೈಗಾರಿಕಾ ನೀತಿಯನ್ವಯ ರಾಜ್ಯದ ೧೭೬ ತಾಲೂಕುಗಳನ್ನು ಕೈಗಾರಿಕಾ ಬೆಳವಣಿಗೆಯ ದೃಷ್ಟಿಯಿಂದ ಮೂರು ವಲಯಗಳಾಗಿ ವಿಂಗಡಿಸಲಾಗಿದೆ.

ವಲಯ-I ರಲ್ಲಿ ಡಾ॥ ಡಿ.ಎಂ.ನಂಜುಂಡಪ್ಪ ವರದಿಯಲ್ಲಿ ಸೂಚಿಸಿದ ರಾಜ್ಯದ ೭೯ ತಾಲೂಕುಗಳು ಅತೀ ಹೆಚ್ಚು / ಹೆಚ್ಚು ಹಿಂದುಳಿದ ತಾಲೂಕುಗಳ ಸಾಲಿಗೆ ಸೇರಿವೆ.

ವಲಯ–II ರಲ್ಲಿ ವಲಯ-I ಮತ್ತು ವಲಯ–IIIರಲ್ಲಿ ಸೇರದಿರುವ ರಾಜ್ಯದ 85 ತಾಲೂಕುಗಳು ಕೈಗಾರಿಕಾಭಿವೃದ್ಧಿಯಲ್ಲಿ ಹಿಂದುಳಿದ ತಾಲೂಕುಗಳಾಗಿವೆ. ಜಿಲ್ಲೆಯ ಉಡುಪಿ, ಕುಂದಾಪುರ ಹಾಗೂ ಕಾರ್ಕಳ ತಾಲೂಕುಗಳು ಸಹ ಈ ವಲಯದ ವ್ಯಾಪ್ತಿಗೆ ಸೇರಿವೆ.

ವಲಯ–IIIರಲ್ಲಿ ಬೆಂಗಳೂರು ನಗರ ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆಯ (ಪ್ರಸ್ತುತ ರಾಮನಗರ ಜಿಲ್ಲೆಯಲ್ಲಿರುವ ಮಾಗಡಿ ಮತ್ತು ಕನಕಪುರ ಹೊರತುಪಡಿಸಿ) ತಾಲೂಕುಗಳು, ಮೈಸೂರು ಜಿಲ್ಲೆಯ ಮೈಸೂರು ತಾಲೂಕು ಹಾಗೂ ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ತಾಲೂಕು ಸೇರಿದಂತೆ

ಒಟ್ಟು 12 ತಾಲೂಕುಗಳು ಕೈಗಾರಿಕೆಯಲ್ಲಿ ಅಭಿವೃದ್ಧಿ ಹೊಂದಿದ ತಾಲೂಕುಗಳಾಗಿದ್ದು, ಈ ವಲಯದ ವ್ಯಾಪ್ತಿಗೆ ಸೇರಿವೆ.

ಯಂತ್ರಗಳು ಮತ್ತು ಸ್ಥಾವರಗಳಲ್ಲಿ ರೂ. ೨೫ ಲಕ್ಷದವರೆಗೆ ಬಂಡವಾಳ ಹೂಡಿರುವ ಕೈಗಾರಿಕೆಗಳನ್ನು ಅತೀ ಸಣ್ಣ ಪ್ರಮಾಣದ ಕೈಗಾರಿಕೆಗಳೆಂದೂ, ರೂ.೧೦೦ ಲಕ್ಷಗಳಿಗಿಂತ ಕಡಿಮೆ ಬಂಡವಾಳ ಹೂಡಿರುವ ಕೈಗಾರಿಕೆಗಳನ್ನು ಸಣ್ಣ ಪ್ರಮಾಣದ ಕೈಗಾರಿಕೆಗಳೆಂದೂ ಹಾಗೂ ಅತೀಸಣ್ಣ, ಸಣ್ಣ ಕೈಗಾರಿಕೆಗಳೆಂದೂ ವರ್ಗೀಕರಿಸಲ್ಪಡದ ಎಲ್ಲಾ ಕೈಗಾರಿಕೆಗಳನ್ನು ಮಧ್ಯಮ ಮತ್ತು ಬೃಹತ್ ಪ್ರಮಾಣದ ಕೈಗಾರಿಕೆಗಳೆಂದು ಗುರುತಿಸಲಾಗಿದೆ.

## ಕೈಗಾರಿಕೆಗಳಿಗೆ ಲಭ್ಯವಿರುವ ಸವಲತ್ತುಗಳು

ಜಿಲ್ಲೆಯ ಉಡುಪಿ, ಕುಂದಾಪುರ ಹಾಗೂ ಕಾರ್ಕಳ ತಾಲೂಕುಗಳು ಕೈಗಾರಿಕೆಯಲ್ಲಿ ಹಿಂದುಳಿದ ತಾಲೂಕುಗಳಾಗಿದ್ದು, ವಲಯ–IIಕ್ಕೆ ಸೇರಿವೆ. ಈ ವಲಯದಲ್ಲಿ ಬರುವ ಕೈಗಾರಿಕೆಗಳು ಪಡೆಯುವ ಸವಲತ್ತುಗಳು ಹೀಗಿವೆ.

೧. ಬಂಡವಾಳ ಹೂಡಿಕೆಯಲ್ಲಿ ಸಹಾಯಧನ: ಸ್ಥಿರಾಸ್ಥಿ ಮೌಲ್ಯದ ಶೇಕಡಾ ೨೦% ರಷ್ಟು ಅಥವಾ ಗರಿಷ್ಠ ಮಿತಿ ಪ್ರತಿ ಘಟಕಕ್ಕೆ ೧೦ ಲಕ್ಷ ರೂ.ಗಳು ಮೀರದಂತೆ ಸಹಾಯಧನವನ್ನು ನೀಡಲಾಗುವುದು. ಇದಲ್ಲದೆ ಪರಿಶಿಷ್ಟ ಜಾತಿ, ಪಂಗಡ, ಅಂಗವಿಕಲರು, ಅಲ್ಪಸಂಖ್ಯಾತರು ಮತ್ತು ಮಾಜಿ ಯೋಧರು ಈ ವರ್ಗಕ್ಕೆ ಸೇರಿದ ಉದ್ಯಮಶೀಲರಿಗೆ ಸ್ಥಿರಾಸ್ಥಿ ಮೌಲ್ಯದ ಶೇಕಡಾ ೫ರಷ್ಟು ಹೆಚ್ಚುವರಿ ಸಹಾಯಧನ ಅಥವಾ ಗರಿಷ್ಠ ಮಿತಿ ಪ್ರತಿ ಘಟಕಕ್ಕೆ ರೂ.ಒಂದು ಲಕ್ಷಕ್ಕೆ ನಿಗದಿಗೊಳಿಸಲಾಗಿದೆ. ಮಹಿಳಾ ಉದ್ಯಮಶೀಲರಿಗೆ ಗರಿಷ್ಠಮಿತಿ ಪ್ರತಿ ಘಟಕಕ್ಕೆ ರೂ.ಐದು ಲಕ್ಷಗಳಾಗಿದೆ.

೨. ಛಾಪಾ ಕಾಗದ ಶುಲ್ಕದಲ್ಲಿ ವಿನಾಯ್ತಿ ಮತ್ತು ನೋಂದಣಿ ಶುಲ್ಕದಲ್ಲಿ ಕಡಿತ. ಹಣಕಾಸು ಸಂಸ್ಥೆಗಳು/ಬ್ಯಾಂಕ್‌ಗಳಿಂದ ಅವಧಿ ಸಾಲವನ್ನು ಪಡೆಯುವ ಸಂದರ್ಭದಲ್ಲಿ ಸಲ್ಲಿಸಲಾಗುವ ಲೋನ್ ಮತ್ತು ಕ್ರೆಡಿಟ್ ಡೀಡ್‌ಗಳಿಗೆ ಹಾಗೂ ಕೈಗಾರಿಕಾ ಭೂಮಿ/ನಿವೇಶನ ವಿತರಣೆ ಸಂದರ್ಭದಲ್ಲಿ ಕೆ.ಐ.ಎ.ಡಿ.ಬಿ./ಕೆ.ಎಸ್.ಎಸ್.ಐ.ಡಿ.ಸಿ.ಗೆ ಸಲ್ಲಿಸಲಾಗುವ ಲೀಸ್, ಲೀಸ್–ಕಂ–ಸೇಲ್ ಮತ್ತು ಶುದ್ಧಕ್ರಯ ಪತ್ರದ ಸಂದರ್ಭದಲ್ಲಿ ಶೇ.೭೫ರಷ್ಟು ರಿಯಾಯಿತಿ ಹಾಗೂ ರೂ.ಒಂದು ಸಾವಿರಕ್ಕೆ ಒಂದು ರೂಪಾಯಿಯಂತೆ ರಿಯಾಯಿತಿ ನೋಂದಣಿ ಶುಲ್ಕದಲ್ಲಿ ಕಡಿತಗೊಳಿಸಲಾಗುತ್ತದೆ.

೩. ಪರಿವರ್ತನಾ ಶುಲ್ಕ ಮನ್ನಾ: ಕೈಗಾರಿಕಾ ಬಳಕೆಗಾಗಿ ಪರಿವರ್ತನೆಯಾಗುವ ಭೂಮಿಯ ಮೇಲೆ (ಮೆಗಾ ಕೈಗಾರಿಕೆಗಳು, ಬೃಹತ್ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆಗಳು ಹಾಗೂ ಸಣ್ಣ ಪ್ರಮಾಣದ ಕೈಗಾರಿಕೆಗಳು ಸೇರಿದಂತೆ) ಶೇ.೭೫ರಷ್ಟು ಪರಿವರ್ತನಾ ಶುಲ್ಕ ಮನ್ನಾ ಮಾಡುತ್ತದೆ. ಗರಿಷ್ಠ ಮಿತಿ ಮೆಗಾ ಕೈಗಾರಿಕೆಗಳು ಹಾಗೂ ಬೃಹತ್ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆಗಳು ಪ್ರತಿ ಘಟಕಕ್ಕೆ ೨೫ ಎಕರೆ ಇದ್ದರೆ, ಸಣ್ಣ ಕೈಗಾರಿಕೆಗಳಿಗೆ ೧೦ ಎಕರೆ ವಿನಾಯ್ತಿ ಇರುತ್ತದೆ.

೪. ಕೈಗಾರಿಕಾ ಪ್ರದೇಶದ/ವಸಾಹತಿನ ಅಥವಾ ಸಿಂಗಲ್ ಯುನಿಟ್ ಕಾಂಪ್ಲೆಕ್ಸಿನ ಅಭಿವೃದ್ದಿಗಾಗಿ ಭೂಮಿಯನ್ನು ಸ್ವಾಧೀನಪಡಿಸುವ ಸಂದರ್ಭದಲ್ಲಿ ವಲಯ–I ಮತ್ತು IIರ ಪ್ರದೇಶಗಳಿಗೆ ಸ್ವಾಧೀನ ಶುಲ್ಕವನ್ನು ಶೇ.೧೦ರಷ್ಟು ವಿಧಿಸಲಾಗುವುದು.

೫. ಎಲ್ಲಾ ವಲಯಗಳಲ್ಲಿ ಎಲ್ಲಾ ವರ್ಗದ ಕೈಗಾರಿಕೆಗಳಿಗೆ ಇ.ಟಿ.ಪಿ.ಯ ವೆಚ್ಚದ ಶೇ.೫೦ರಷ್ಟನ್ನು ಒಮ್ಮೆಗೇ ಹೂಡು ಬಂಡವಾಳವಾಗಿ ನೀಡಲಾಗುವುದು. ಗರಿಷ್ಠ ಮಿತಿ ಪ್ರತಿ ಘಟಕಕ್ಕೆ ರೂ.೧೦೦ ಲಕ್ಷಗಳಾಗಿರುತ್ತದೆ.

೬. ಪ್ರವೇಶ ತೆರಿಗೆ ಮತ್ತು ವಿಶೇಷ ತೆರಿಗೆಯಲ್ಲಿ ವಿನಾಯಿತಿ: ವಲಯ–I ಮತ್ತು IIರಲ್ಲಿ ಯೋಜನೆಯ ಅನುಷ್ಠಾನ ಆರಂಭವಾದ ದಿನಾಂಕದಿಂದ ಪ್ರಾರಂಭಿಕ ಮೂರು ವರ್ಷಗಳ ಅವಧಿಗೆ ಪ್ಲಾಂಟ್ ಮತ್ತು ಮೆಷನರಿ ಹಾಗೂ ಕ್ಯಾಪಿಟಲ್ ಗೂಡ್ಸ್‌ಗೆ ಪ್ರವೇಶ ತೆರಿಗೆ ಮತ್ತು ವಿಶೇಷ ಪ್ರವೇಶ ತೆರಿಗೆಯಿಂದ ವಿನಾಯಿತಿ ನೀಡುವುದು, ಅಲ್ಲದೇ ಕಚ್ಚಾ ಪದಾರ್ಥಗಳಿಗೆ, ಇನ್‌ಪುಟ್‌ಗಳಿಗೆ ಕಾಂಪೋನೆಂಟ್ ಭಾಗಗಳು ಮತ್ತು ಬಳಕೆಯಾಗುವ ವಸ್ತುಗಳಿಗೆ (ಪೆಟ್ರೋಲಿಯಂ ಉತ್ಪನ್ನಗಳನ್ನು ಹೊರತುಪಡಿಸಿ) (ಎಲ್ಲಿ ಅನ್ವಯವಾಗುತ್ತದೋ ಅಲ್ಲಿ) ವಾಣಿಜ್ಯ ಉತ್ಪಾದನೆ ಆರಂಭವಾದ ದಿನಾಂಕದಿಂದ ಐದು ವರ್ಷಗಳವರೆಗೆ ಈ ಸೌಲಭ್ಯ ಲಭಿಸುತ್ತದೆ.

**ಮಾನವ ಸಂಪನ್ಮೂಲ ಅಭಿವೃದ್ಧಿ :** ನಿರ್ಧಿಷ್ಟ ಕ್ಷೇತ್ರದಲ್ಲಿ ತರಬೇತಿಗಾಗಿ ತರಬೇತಿ ಕೇಂದ್ರವನ್ನು ಸ್ಥಾಪಿಸಲು ಐದು ಎಕರೆವರೆಗೆ ಸರ್ಕಾರಿ ಜಮೀನನ್ನು ಅನುದಾನವಾಗಿ ನೀಡಲು ಪರಿಗಣಿಸಬಹುದು. ಇದರ ಜೊತೆಗೆ ಯೋಜನಾ ವೆಚ್ಚದ ಶೇ.೫೦ರಷ್ಟನ್ನು ಪ್ರತೀ ಕೇಂದ್ರಕ್ಕೆ ರೂ.ಎರಡು ಕೋಟಿಗಳನ್ನು ಸೀಮಿತಗೊಳಿಸಿ ಬಂಡವಾಳ ವಂತಿಗೆಯಾಗಿ ನಿರುದ್ಯೋಗಿ ವಿದ್ಯಾವಂತ ಯುವಜನರಿಗೆ ವೃತ್ತಿಪರ ತರಬೇತಿಯನ್ನು ವಿವಿಧ ವೃತ್ತಿಯಲ್ಲಿ ಕೈಗಾರಿಕೆ/ಸೇವಾ ಘಟಕಗಳ ಮೂಲಕ ನೀಡಲು ಸರ್ಕಾರವು ನೂತನ ಯೋಜನೆಯೊಂದನ್ನು ಜಾರಿಗೊಳಿಸಲಿದೆ. ಇದರ ಪ್ರಕಾರ ಪ್ರತಿ ವಿದ್ಯಾರ್ಥಿಗೆ, ತಿಂಗಳಿಗೆ ರೂ.೭೫೦ ರಂತೆ ವಿದ್ಯಾರ್ಥಿ ವೇತನವನ್ನು ತರಬೇತಿ ಸಂಸ್ಥೆಗಳ ಸೂಕ್ತ ಹೊಂದಾಣಿಕೆಯೊಂದಿಗೆ ನೀಡಲಾಗುವುದು. ತರಬೇತಿ ಸಂಸ್ಥೆಗಳನ್ನು ನಡೆಸಲು ತಗಲುವ ಆವರ್ತನಾ ವೆಚ್ಚಕ್ಕಾಗಿ ಪ್ರತಿಯೊಬ್ಬ ಅಭ್ಯರ್ಥಿಗೆ ತಿಂಗಳಿಗೆ ರೂ. ೭೫೦ರಂತೆ ನೀಡಲಾಗುವುದು. ಗರಿಷ್ಠ ಮಿತಿ ವರ್ಷಕ್ಕೆ ರೂ. ೧೫ಲಕ್ಷಗಳು, ಮೂರು ವರ್ಷಗಳ ಅವಧಿಗೆ ನೀಡಲಾಗುವುದು. ಅಲ್ಲದೆ ನಿರುದ್ಯೋಗಿ ವಿದ್ಯಾವಂತ ಯುವಜನರಿಗೆ ವೃತ್ತಿಪರ ತರಬೇತಿಯನ್ನು ವಿವಿಧ ವೃತ್ತಿಯಲ್ಲಿ ಕೈಗಾರಿಕಾ/ಸೇವಾಘಟಕಗಳ ಮೂಲಕ ನೀಡಲು ಸರ್ಕಾರವು ನೂತನ ಯೋಜನೆಯನ್ನು ಜಾರಿಗೊಳಿಸಲಿದೆ. ಇದರಂತೆ ಪ್ರತಿ ವಿದ್ಯಾರ್ಥಿಗೆ ತಿಂಗಳಿಗೆ ರೂ.೭೫೦ರಂತೆ ವಿದ್ಯಾರ್ಥಿವೇತನವನ್ನು ತರಬೇತಿ ಸಂಸ್ಥೆಗಳ ಸೂಕ್ತ ಹೊಂದಾಣಿಕೆಯೊಂದಿಗೆ ನೀಡಲಾಗುವುದು.

## ವಿದ್ಯುತ್

ಪ್ರಾರಂಭದಲ್ಲಿ ಉಡುಪಿಗೆ ಶ್ರೀ ಕೃಷ್ಣ ಪವರ್ ಹೌಸ್‌ನಿಂದ ವಿದ್ಯುತ್ ಪೂರೈಕೆಯಾಗುತ್ತಿತ್ತು. ೧೯೫೬ರ ನಂತರ ಜೋಗಿನಿಂದ ವಿದ್ಯುತ್ ಪೂರೈಕೆ ಮಾಡಲಾಯಿತು. ಆಗ ಮೈಸೂರು ರಾಜ್ಯ ವಿದ್ಯುಚ್ಛಕ್ತಿ ಮಂಡಳಿಯ ಮಂಗಳೂರು ವಿಭಾಗದಲ್ಲಿ ಉಡುಪಿ ಉಪವಿಭಾಗವು ಸೇರಿತ್ತು. ದಕ್ಷಿಣ ಕನ್ನಡ ಜಿಲ್ಲೆಯ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ ಮಂಗಳೂರು ವಿಭಾಗವನ್ನು ವಿಭಜನೆ ಮಾಡಿ ದಿನಾಂಕ:೨೦–೦೯–೧೯೭೩ರಲ್ಲಿ ಉಡುಪಿಯಲ್ಲಿ ನೂತನ ವಿಭಾಗವನ್ನು ಪ್ರಾರಂಭಿಸಲಾಯಿತು. ದಕ್ಷಿಣ ಕನ್ನಡ ಜಿಲ್ಲೆಯ ಎಂಟು ತಾಲೂಕುಗಳ ಪೈಕಿ ಮೂರು ತಾಲೂಕುಗಳನ್ನು ಉಡುಪಿ ವಿಭಾಗಕ್ಕೆ ಸೇರಿಸಲಾಯಿತು.

೧೬–೭–೧೯೯೭ರಲ್ಲಿ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯನ್ನು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ ಎಂಬುದಾಗಿ ಮರುನಾಮಕರಣ ಮಾಡಲಾಯಿತು. ೦೧–೦೬–೨೦೦೨ರಲ್ಲಿ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ ವಿತರಣಾ ವ್ಯವಸ್ಥೆಯನ್ನು ಬೆಸ್ಕಾಂ, ಹೆಸ್ಕಾಂ, ಗೆಸ್ಕಾಂ ಮತ್ತು ಮೆಸ್ಕಾಂಗಳೆಂಬ ನಾಲ್ಕು ಕಂಪನಿಗಳಾಗಿ ವಿಭಜಿಸಲಾಯಿತು. ಮತ್ತೆ ೦೧–೦೬–೨೦೦೫ರಲ್ಲಿ ಮೆಸ್ಕಾಂನ್ನು ಮಂಗಳೂರು ವಿದ್ಯುತ್ ಸರಬರಾಜು ಸಂಸ್ಥೆ (ನಿ) ಮತ್ತು ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ಸಂಸ್ಥೆ (ನಿ) ಎಂಬ ಎರಡು ಕಂಪನಿಗಳಾಗಿ ವಿಭಜಿಸಲಾಯಿತು. ಪ್ರಸ್ತುತ ಉಡುಪಿ ವಿಭಾಗದ ವ್ಯಾಪ್ತಿಯು ಉಡುಪಿ ಜಿಲ್ಲೆಯನ್ನು ಒಳಗೊಂಡಿದ್ದು, ಮೆಸ್ಕಾಂ ನಿಯಮಿತದ ಆಡಳಿತಕ್ಕೆ ಒಳಪಟ್ಟಿರುತ್ತದೆ. ಉಡುಪಿ, ಕಾರ್ಕಳ ಹಾಗೂ ಕುಂದಾಪುರ ತಾಲ್ಲೂಕುಗಳನ್ನು ಸೇರಿಸಿ ಆಡಳಿತಾತ್ಮಕ ದೃಷ್ಟಿಯಿಂದ ಉಡುಪಿ ಜಿಲ್ಲೆಯನ್ನು ದಿನಾಂಕ:೨೫–೦೮–೧೯೯೭ರಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಿಂದ ವಿಭಜಿಸಲಾಯಿತು.

ಉಡುಪಿ ಜಿಲ್ಲೆಗೆ ಅಗತ್ಯವಿರುವ ವಿದ್ಯುತ್‌ನ್ನು ವಾರಾಹಿ ಮತ್ತು ಶಿವಮೊಗ್ಗದಲ್ಲಿರುವ ಮುಖ್ಯ ವಿದ್ಯುತ್ ಸ್ವೀಕರಣಾ ಕೇಂದ್ರದಿಂದ ಪಡೆಯಲಾಗುತ್ತಿದೆ. ವಾರಾಹಿ ಯೋಜನಾ ಕೇಂದ್ರದಿಂದ ೨೨೦ ಕಿಲೋವ್ಯಾಟ್ ಲೈನ್ ಮೂಲಕ ಕೇಮಾರ್ ಕೇಂದ್ರಕ್ಕೆ ಸರಬರಾಜು ಮಾಡಿ ಅಲ್ಲಿಂದ ೧೧೦ ಕಿಲೋವ್ಯಾಟ್ ಲೈನ್ ಮೂಲಕ ಮರು ವಿತರಿಸಲಾಗುತ್ತಿದೆ. ಅದೇ ರೀತಿಯಲ್ಲಿ ಶಿವಮೊಗ್ಗದಲ್ಲಿರುವ ಮುಖ್ಯ ವಿದ್ಯುತ್ ಸ್ವೀಕರಣಾ ಕೇಂದ್ರದಿಂದ ೨೨೦ ಕಿಲೋ ವ್ಯಾಟ್ ಲೈನ್ ಮೂಲಕ ಹಾಲಾಡಿ ಕೇಂದ್ರಕ್ಕೆ ಸರಬರಾಜು ಮಾಡಿ ಅಲ್ಲಿಂದ ೧೧೦ ಕಿಲೋವ್ಯಾಟ್ ಲೈನ್ ಮೂಲಕ ಉಪಕೇಂದ್ರಗಳ ಮೂಲಕ ಮರು ವಿತರಿಸಲಾಗುತ್ತದೆ. ಹಿರಿಯಡ್ಕದಿಂದ ಮಣಿಪಾಲ ಮತ್ತು ಕುಂದಾಪುರಗಳಿಗೆ ವಿದ್ಯುತ್ ಸರಬರಾಜು ಮಾಡಲಾಗುತ್ತಿದೆ. ಮಣಿಪಾಲ ಉಪಕೇಂದ್ರದಿಂದ ೩೩ ಕಿಲೋವ್ಯಾಟ್ ಲೈನ್‌ಗೆ ಪರಿವರ್ತಿಸಿ ಇತರೆಡೆಗಳಿಗೆ ವಿತರಿಸಲಾಗುತ್ತಿದೆ. ಜಿಲ್ಲೆಯಲ್ಲಿ ಮಣಿಪಾಲ–ಎರಡು, ಕುಂದಾಪುರ–ಎರಡು, ಬ್ರಹ್ಮಾವರ–ಒಂದು ಹಾಗೂ ಕಾರ್ಕಳ–ಒಂದು,

**ಕೋಷ್ಟಕ ೫.೧ : ಉಡುಪಿ ಜಿಲ್ಲೆಯಲ್ಲಿ ೩೧–೩–೨೦೦೬ರಲ್ಲಿದ್ದ ಮಾಸ್ಟರ್ ಯುನಿಟ್/ಉಪಕೇಂದ್ರಗಳ ವಿವರ**

| ವಿತರಣಾ ಕೇಂದ್ರದ ಹೆಸರು | ಸಾಮರ್ಥ್ಯ | ಟ್ರಾನ್ಸ್ ಫಾರ್ಮರ್ ಗಳ ಸಂಖ್ಯೆ | ಟ್ರಾನ್ಸ್‌ಫಾರ್ಮರ್ ಸಾಮರ್ಥ್ಯ (ಎಂ.ವಿ.ಎ.) | ಒಟ್ಟು ಸಾಮರ್ಥ್ಯ (ಎಂ.ವಿ.ಎ.) |
|---|---|---|---|---|
| **ಉಡುಪಿ ತಾಲೂಕು** | | | | |
| **ಮಣಿಪಾಲ (೧೧೦/ ೩೩/೧೧) ಕೆ.ವಿ.** | ೧೧೦/೧೧ ಕೆ.ವಿ. | ೦೨ | ೧೦ | ೨೦ |
| | ೧೧೦/೩೩ ಕೆ.ವಿ. | ೦೧ | ೨೦ | ೨೦ |
| | | ೦೧ | ೧೦ | ೧೦ |
| **ಹಿರಿಯಡಕ(೧೧೦/ ೩೩/ ೧೧) ಕೆ.ವಿ.** | ೧೧೦/೧೧ ಕೆ.ವಿ. | ೦೧ | ೧೦ | ೧೦ |
| | ೧೧೦/೩೩ ಕೆ.ವಿ. | ೦೨ | ೧೦ | ೨೦ |
| **ನಿಟ್ಟೂರು (೧೧೦ / ೧೧) ಕೆ.ವಿ.** | ೧೧೦/೧೧ ಕೆ.ವಿ. | ೦೨ | ೧೦ | ೨೦ |
| **ಮಧುವನ (೧೧೦ / ೧೧) ಕೆ.ವಿ.** | ೧೧೦/೧೧ ಕೆ.ವಿ. | ೦೧ | ೨೦ | ೨೦ |
| **ಕುಂಜಿಬೆಟ್ಟು (೩೩ / ೧೧) ಕೆ.ವಿ.** | ೩೩/೧೧ ಕೆ.ವಿ. | ೦೨ | ೦೫ | ೧೦ |
| **ಶಿರ್ವ (೩೩ / ೧೧) ಕೆ.ವಿ.** | ೩೩/೧೧ ಕೆ.ವಿ. | ೦೨ | ೦೫ | ೧೦ |
| **ಬ್ರಹ್ಮಾವರ (೩೩ / ೧೧) ಕೆ.ವಿ.** | ೩೩/೧೧ ಕೆ.ವಿ. | ೦೨ | ೦೫ | ೧೦ |
| **ಕಾರ್ಕಳ ತಾಲೂಕು** | | | | |
| **ಕೇಮಾರ್(೨೨೦/ ೧೧೦೦/೧೧)ಕೆ.ವಿ.** | ೨೨೦/೧೧೦ಕೆ.ವಿ. | ೦೧ | ೧೦೦ | ೧೦೦ |
| | ೧೧೦/೧೧ ಕೆ.ವಿ. | ೦೨ | ೧೦ | ೨೦ |
| **ಕಾರ್ಕಳ (೩೩ / ೧೧) ಕೆ.ವಿ.** | ೩೩/೧೧ ಕೆ.ವಿ. | ೦೨ | ೦೫ | ೧೦ |
| **ಹೆಬ್ರಿ (೩೩ / ೧೧) ಕೆ.ವಿ.** | ೩೩/೧೧ ಕೆ.ವಿ. | ೦೧ | ೦೫ | ೦೫ |
| **ಕುಂದಾಪುರ ತಾಲೂಕು** | | | | |
| **ಕುಂದಾಪುರ(೧೧೦/೩೩/೧೧)ಕೆ.ವಿ.** | ೧೧೦/೩೩ ಕೆ.ವಿ. | ೦೧ | ೧೦ | ೧೦ |
| | ೧೧೦/೧೧ ಕೆ.ವಿ. | ೦೧ | ೧೦ | ೧೦ |
| **ಹಾಲಾಡಿ (೩೩ / ೧೧) ಕೆ.ವಿ.** | ೩೩/೧೧ ಕೆ.ವಿ. | ೦೧ | ೧೦ | ೧೦ |
| **ಬೈಂದೂರು (೩೩ / ೧೧) ಕೆ.ವಿ.** | ೩೩/೧೧ ಕೆ.ವಿ. | ೦೧ | ೦೫ | ೦೫ |
| **ತಲ್ಲೂರು (೩೩ / ೧೧) ಕೆ.ವಿ.** | ೩೩/೧೧ ಕೆ.ವಿ. | ೦೧ | ೦೫ | ೦೫ |

**ಕೋಷ್ಟಕ ೫.೨ : ತಾಲೂಕುವಾರು ಗ್ರಾಹಕರು ಉಪಯೋಗಿಸಿದ ವಿದ್ಯುತ್ ವಿವರ**

(ಲಕ್ಷ ಯೂನಿಟ್‌ಗಳಲ್ಲಿ)

| ತಾಲ್ಲೂಕು | ೨೦೦೧-೦೨ | ೨೦೦೨-೦೩ | ೨೦೦೩-೦೪ | ೨೦೦೪-೦೫ |
|---|---|---|---|---|
| ಉಡುಪಿ | ೧೩೮೦.೮೮ | ೧೦೮೦.೪೮ | ೧೭೨೩.೯೪ | ೧೮೦೩.೪೯ |
| ಕುಂದಾಪುರ | ೪೮೭.೯೨ | ೪೩೨.೯೪ | ೬೨೦.೩೩ | ೬೧೩.೫೦ |
| ಕಾರ್ಕಳ | ೩೫೮.೬೦ | ೨೫೦.೫೬ | ೪೧೭.೦೦ | ೪೭೬.೯೮ |
| **ಒಟ್ಟು** | **೨೨೨೭.೪೦** | **೧೭೬೩.೯೮** | **೨೭೬೧.೨೭** | **೨೮೯೩.೯೭** |

*ಆಧಾರ : ಜಿಲ್ಲಾ ಅಂಕಿ ಅಂಶಗಳ ನೋಟ, ಉಡುಪಿ*

**ಕೋಷ್ಟಕ ೫.೩ : ಜಿಲ್ಲೆಯಲ್ಲಿ ೩೧-೦೩-೨೦೦೬ರಲ್ಲಿದ್ದ ವಿದ್ಯುತ್ ಮಾರ್ಗ ಮತ್ತು ಪರಿವರ್ತಕಗಳ ವಿವರ**

| ಉಪವಿಭಾಗ | ಹೆಚ್.ಟಿ.ಲೈನ್ (ರೂಟ್ ಕಿ.ಮೀ.) | ಎಲ್.ಟಿ.ಲೈನ್ (ರೂಟ್ ಕಿ.ಮೀ.) | ಪರಿವರ್ತಕಗಳು (ಸಂಖ್ಯೆ) |
|---|---|---|---|
| **ಉಡುಪಿ ತಾಲೂಕು** | | | |
| **ಉಡುಪಿ** | ೫೩೨.೬೯ | ೨೧೭೪.೮೨ | ೯೯೧ |
| **ಬ್ರಹ್ಮಾವರ** | ೪೪೪.೫೯೨ | ೨೨೮೯.೨೫೧ | ೪೯೧ |
| **ಕಾಪು** | ೨೮೮.೯೩೮ | ೧೯೬೨.೮೪೯ | ೩೭೫ |
| **ಒಟ್ಟು** | **೧೨೬೬.೨೨** | **೬೩೪೬.೯೨** | **೧೮೫೭** |
| **ಕಾರ್ಕಳ ತಾಲೂಕು** | | | |
| **ಕಾರ್ಕಳ** | ೯೭೬.೧೫೭ | ೩೫೭೮.೯೪೧ | ೭೮೩ |
| **ಒಟ್ಟು** | **೯೭೬.೧೫೭** | **೩೫೭೮.೯೪೧** | **೭೮೩** |
| **ಕುಂದಾಪುರ ತಾಲೂಕು** | | | |
| **ಕುಂದಾಪುರ** | ೭೦೦.೧೭೯ | ೨೧೨೪.೩೭೯ | ೫೬೫ |
| **ಬೈಂದೂರು** | ೪೪೨.೬೫೪ | ೨೪೭೦.೦೬ | ೩೮೭ |
| **ಒಟ್ಟು** | **೧೧೪೨.೭೬೩** | **೪೫೯೪.೩೬೯** | **೯೫೨** |
| **ಜಿಲ್ಲೆಯ ಒಟ್ಟು** | **೩೩೮೫.೧೪** | **೧೪೫೨೦.೨೩** | **೩೫೯೨** |

ಆರು ಕೈಗಾರಿಕಾ ವಿದ್ಯುತ್ ಪೂರೈಕಾ ಘಟಕಗಳಿವೆ. ಜಿಲ್ಲೆಯಲ್ಲಿ ೨೦೦೬ರ ಮಾರ್ಚ್ ಅಂತ್ಯಕ್ಕೆ ಮಾಸ್ಟರ್ ಯೂನಿಟ್/ ವಿದ್ಯುತ್ ಉಪಕೇಂದ್ರಗಳ ವಿವರಗಳನ್ನು ಕೋಷ್ಟಕ ೫.೧ರಲ್ಲಿ ನೀಡಿದೆ.

ಜಿಲ್ಲೆಯಲ್ಲಿ ೨೦೦೧ರ ಜನಗಣತಿಯಂತೆ ೨೪೮ ಜನವಸತಿ ಗ್ರಾಮಗಳಿದ್ದು, ೨೦೦೫ರ ಮಾರ್ಚ್ ಅಂತ್ಯಕ್ಕೆ ಉಡುಪಿ ತಾಲೂಕಿನಲ್ಲಿ ೯೯, ಕಾರ್ಕಳ ತಾಲೂಕಿನಲ್ಲಿ ೫೦ ಹಾಗೂ ಕುಂದಾಪುರ ತಾಲೂಕಿನಲ್ಲಿ ೯೯ ಜನವಸತಿ ಗ್ರಾಮಗಳಿದ್ದು, ಶೇ.೧೦೦ರಷ್ಟು ವಿದ್ಯುತ್ ಸೌಲಭ್ಯ ಪಡೆದುಕೊಂಡಿದ್ದವು. ಆದರೆ, ಇದೇ ಅವಧಿಯಲ್ಲಿ ೩೪೭೬ ಉಪಗ್ರಾಮಗಳಿದ್ದು, ೨೫೪೧ ಉಪಗ್ರಾಮಗಳು ಮಾತ್ರ ವಿದ್ಯುತ್ ಸೌಲಭ್ಯ ಪಡೆದುಕೊಂಡಿದ್ದವು. ವಿದ್ಯುತ್ ಪಡೆದ ಉಪಗ್ರಾಮಗಳ ವಿವರ ಹೀಗಿದೆ. ಉಡುಪಿ ತಾಲೂಕಿನಲ್ಲಿ ೧೧೩೩ (೧೧೮೮), ಕಾರ್ಕಳ ೬೫೪ (೧೦೮೫) ಹಾಗೂ ಕುಂದಾಪುರ ತಾಲೂಕಿನಲ್ಲಿ ೭೫೪ (೧೨೦೩) ಆವರಣದಲ್ಲಿ ನೀಡಿರುವ ಅಂಕಿಅಂಶಗಳು ಆಯಾ ತಾಲೂಕುಗಳಲ್ಲಿದ್ದ ಉಪಗ್ರಾಮಗಳ ಸಂಖ್ಯೆಯನ್ನು ಸೂಚಿಸುತ್ತವೆ. ಕೋಷ್ಟಕ ೫.೪ರಲ್ಲಿ ಪ್ರವರ್ಗವಾರು ವಿದ್ಯುತ್ ಬಳಕೆಯ ವಿವರ ನೀಡಲಾಗಿದೆ.

## ಕೈಗಾರಿಕಾ ಎಸ್ಟೇಟ್ ಮತ್ತು ಕೈಗಾರಿಕಾ ಪ್ರದೇಶಗಳು

ಎರಡನೇ ಪಂಚವಾರ್ಷಿಕ ಯೋಜನೆ ಅನುಷ್ಠಾನದ ಅವಧಿಯಲ್ಲಿ ಸಣ್ಣ ಕೈಗಾರಿಕೆಗಳ ಅಭಿವೃದ್ಧಿಗೆ ಹಲವಾರು ಕಾರ್ಯಕ್ರಮಗಳನ್ನು ಪ್ರಾರಂಭಿಸಲಾಯಿತು. ಸಣ್ಣ ಕೈಗಾರಿಕೆಗಳಿಗೆ ಒಂದೇ ಸ್ಥಳದಲ್ಲಿ ವಿದ್ಯುತ್,

**ಕೋಷ್ಟಕ: ೫.೪ : ಜಿಲ್ಲೆಯಲ್ಲಿದ್ದ ಪ್ರವರ್ಗವಾರು ತಾಲೂಕುವಾರು ವಿದ್ಯುತ್ ಬಳಕೆದಾರರ ವಿವರ**

| ಪ್ರವರ್ಗ | ೨೦೦೧-೦೨ | | | ೨೦೦೩-೦೪ | | | ೨೦೦೪-೦೫ | | |
|---|---|---|---|---|---|---|---|---|---|
| | ಉಡುಪಿ | ಕುಂದಾಪುರ | ಕಾರ್ಕಳ | ಉಡುಪಿ | ಕುಂದಾಪುರ | ಕಾರ್ಕಳ | ಉಡುಪಿ | ಕುಂದಾಪುರ | ಕಾರ್ಕಳ |
| ಗೃಹ ಬಳಕೆ | ೯೮,೫೭೪ | ೪೪,೨೦೬ | ೨೯,೯೦೧ | ೯೯,೯೮೫ | ೪೬,೮೨೬ | ೨೯,೭೭೭ | ೧೦,೨೫೬ | ೫೦,೨೩೫ | ೩೧,೯೯೮ |
| ಕೈಗಾರಿಕಾ ಬಳಕೆ | ೩,೧೪೨ | ೧,೩೪೬ | ೮೩೯ | ೩,೨೬೪ | ೧,೪೧೩ | ೮೮೦ | ೨,೩೬೯ | ೧,೨೮೯ | ೬೪೫ |
| ವಾಣಿಜ್ಯ ಬಳಕೆ | ೧೪,೦೬೧ | ೫,೫೮೮ | ೩,೯೦೮ | ೧೪,೯೯೮ | ೬,೭೭೪ | ೪,೨೯೬ | ೧೫,೧೫೩ | ೭,೦೧೩ | ೪,೨೯೬ |
| ನೀರಾವರಿ ಐ.ಪಿ. ಸೆಟ್ಟುಗಳು | ೨೧,೯೮೯ | ೧೨,೪೭೨ | ೭,೫೫೮ | ೨೨,೪೮೨ | ೧೩,೦೨೧ | ೭,೫೬೮ | ೨೧,೯೨೧ | ೧೨,೮೭೦ | ೭,೪೮೨ |
| ದಾರಿ ದೀಪಗಳು | ೪,೫೬೬ | ೩,೪೩೧ | ೨,೨೭೨ | ೫,೫೭೪ | ೪,೧೧೦ | ೨,೪೨೮ | ೧೬೪ | ೧೮೨ | ೧೮೯ |
| ಭಾಗ್ಯ ಜ್ಯೋತಿ | ೫,೬೪೬ | ೩,೯೩೮ | ೩,೬೪೬ | ೩,೪೩೨ | ೪,೭೩೯ | ೩,೭೪೩ | ೩,೪೯೪ | ೪,೯೦೧ | ೩,೭೪೩ |

***ಆಧಾರ:*** *ಉಡುಪಿ ಜಿಲ್ಲೆಯ ಅಂಕಿ ಅಂಶಗಳ ನೋಟ*

ನೀರು, ಒಳಚರಂಡಿ, ರಸ್ತೆ, ಉಗ್ರಾಣ, ಅಂಚೆಕಛೇರಿ, ಬ್ಯಾಂಕು ಮುಂತಾದ ಎಲ್ಲಾ ಸೌಕರ್ಯಗಳನ್ನು ಒದಗಿಸುವ ಕೈಗಾರಿಕಾ ಎಸ್ಟೇಟುಗಳ ನಿರ್ಮಾಣ ಮಾಡಲಾಯಿತು. ಸಣ್ಣ ಕೈಗಾರಿಕೆಗಳ ತೀವ್ರ ಹಾಗೂ ಸಮನ್ವಯ ರೀತಿಯ ಅಭಿವೃದ್ಧಿಯೇ ಕೈಗಾರಿಕಾ ಎಸ್ಟೇಟುಗಳ ಪ್ರಮುಖ ಉದ್ದೇಶವಾಗಿದೆ. ಜಿಲ್ಲೆಯಲ್ಲಿ ೨೦೦೬-೦೭ರಲ್ಲಿ ಕೈಗಾರಿಕಾ ಎಸ್ಟೇಟ್‌ಗಳನ್ನು ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕಾ ಅಭಿವೃದ್ಧಿ ನಿಗಮವು ಅಭಿವೃದ್ಧಿಪಡಿಸಿ ಕೈಗಾರಿಕೋದ್ಯಮಿಗಳಿಗೆ ವಿತರಿಸಿದೆ. ಕೈಗಾರಿಕಾ ಎಸ್ಟೇಟು ಮತ್ತು ಪ್ರದೇಶಗಳ ವಿವರಗಳನ್ನು ಕೋಷ್ಟಕ ೫.೫ರಲ್ಲಿ ನೀಡಿದೆ. ಕೈಗಾರಿಕಾ ಎಸ್ಟೇಟುಗಳಲ್ಲಿರುವ ಶೆಡ್ಡುಗಳನ್ನು ಚದರ ಅಡಿಗಳ ಆಧಾರದ ಮೇಲೆ ವಿವಿಧ ಮಾದರಿಯವುಗಳೆಂದು ವಿಭಜಿಸಲಾಗಿದೆ. ವಿವರಗಳಿಗೆ ಕೋಷ್ಟಕ ೫.೬ ಹಾಗೂ ಕೋಷ್ಟಕ ೫.೭ ಅನ್ನು ನೋಡಿ.

**ಕೋಷ್ಟಕ ೫.೫ : ಜಿಲ್ಲೆಯಲ್ಲಿ ೨೦೦೬-೦೭ರಲ್ಲಿದ್ದಂತೆ ಕೆ.ಎಸ್.ಎಸ್.ಐ.ಡಿ.ಸಿ. ಕೈಗಾರಿಕಾ ಎಸ್ಟೇಟುಗಳ ವಿವರ**

| ಕ್ರ. ಸಂ. | ತಾಲ್ಲೂಕು | ಕೈಗಾರಿಕಾ ಎಸ್ಟೇಟು ಇರುವ ಪ್ರದೇಶ | ರಚಿಸಲಾದ ಶೆಡ್ಡುಗಳ ವಿವರ | | | | | ಒಟ್ಟು | ವಿತರಿಸಿರುವುದು | ಖಾಲಿ ಇರುವುದು | ಷರಾ |
|---|---|---|---|---|---|---|---|---|---|---|---|
| | | | ಬಿ | ಸಿ | ಡಿ | ಎಂ | ಎಸ್.ಎಂ | | | | |
| ೧ | ಉಡುಪಿ | ಮಣಿಪಾಲ | ೧೨ | ೧೬ | ೦೪ | ೧೪ | ೦೬ | ೫೬ | ೪೮ | ೮ | ಬಿ-೦೩<br>ಎಸ್.ಎಂ-೦೫ |
| ೨ | ಕಾರ್ಕಳ | ಕಾರ್ಕಳ | ೦೨ | - | ೦೮ | - | - | ೧೦ | ೦೭ | ೦೩ | ಡಿ-೦೩ |
| ೩ | ಕುಂದಾಪುರ | ಕೋಟೇಶ್ವರ | - | ೦೫ | ೦೩ | - | ೦೪ | ೧೨ | ೦೬ | ೦೬ | ಸಿ-೦೨ಡಿ-೦೧<br>ಎಸ್.ಎಂ.-೦೩ |

**ಕೋಷ್ಟಕ ೫.೬ : ಕೈಗಾರಿಕಾ ಎಸ್ಟೇಟುಗಳಲ್ಲಿರುವ ಶೆಡ್ಡುಗಳ ವಿಸ್ತಾರ**

| ಕ್ರ.ಸಂ. | ಮಾದರಿ | ನಿರ್ಮಿಸಿದ ಶೆಡ್ಡಿನ ಬಳಸಬಹುದಾದ ಜಾಗ (ಚ.ಅಡಿಗಳಲ್ಲಿ) | ಬೆಲೆ ಲಕ್ಷ ರೂ. ಗಳಲ್ಲಿ | ಮಾಸಿಕ ಕಂತು ರೂ.ಗಳಲ್ಲಿ |
|---|---|---|---|---|
| ೧ | ಬಿ | ೩,೦೦೦ | ೯.೦೦ | ೨೦,೦೦೦ |
| ೨ | ಸಿ | ೧,೫೦೦ | ೫.೫೦ | ೧೨,೦೦೦ |
| ೩ | ಡಿ | ೭೫೦ | ೩.೬೦ | ೮,೦೦೦ |
| ೪ | ಎಂ | ೨೩೦ | ೧.೦೦ | ೨,೨೦೦ |
| ೫ | ಎಸ್.ಎಂ | ೪೮೦ | ೧.೬೦ | ೩,೬೦೦ |

***ಆಧಾರ :*** *ಜಿಲ್ಲಾ ಕೈಗಾರಿಕಾ ಕೇಂದ್ರ, ಉಡುಪಿ*

**ಕೋಷ್ಟಕ ೫.೭ : ಕೈಗಾರಿಕಾ ಎಸ್ಟೇಟುಗಳಲ್ಲಿರುವ ಶೆಡ್ಡುಗಳ ವಿವರ**

| ಕ್ರ.ಸಂ. | ಸ್ಥಳದ ಹೆಸರು | ವಿಶೇಷ | ಪಿ | ಕ್ಯೂ | ಆರ್ | ಒಟ್ಟು | ವಿತರಿಸಲಾಗಿದ್ದು | ಖಾಲಿ |
|---|---|---|---|---|---|---|---|---|
| ೧ | ಮಣಿಪಾಲ(ಶಿವಳ್ಳಿ) | ೨೫ | ೧೧ | ೦೬ | ೦೫ | ೩೭ | ೨೪ | ೧೩ |
| ೨ | ಕಾರ್ಕಳ | – | – | – | – | – | – | – |
| ೩ | ಕೋಟೇಶ್ವರ | ೦೪ | ೦೬ | ೦೮ | ೦೫ | ೨೩ | ೧೮ | ೦೫ |

***ಆಧಾರ :*** *ಜಿಲ್ಲಾ ಕೈಗಾರಿಕಾ ಕೇಂದ್ರ, ಉಡುಪಿ*

**ಪಿ**–ಎಂದರೆ ೨೧ x ೪೫ ಮೀಟರ್ ಅಳತೆಯ, ೯೪೫ ಚ.ಮೀಟರ್ ವಿಸ್ತಾರ ಹಾಗೂ ಪ್ರತೀ ಚ.ಮೀಟರ್‌ಗೆ ರೂ.೨೦೦

**ಕ್ಯೂ** – ಎಂದರೆ ೨೧ x ೨೬ ಮೀಟರ್ ಅಳತೆಯ, ೫೪೬ ಚ.ಮೀಟರ್ ವಿಸ್ತಾರ ಹಾಗೂ ಚ.ಮೀಟರ್‌ಗೆ ರೂ.೧೦೦

**ಆರ್**– ಎಂದರೆ ೨೧ x ೧೮ ಮೀಟರ್ ಅಳತೆಯ, ೩೭೮ ಚ. ಮೀಟರ್ ವಿಸ್ತಾರ ಹಾಗೂ ಚ.ಮೀಟರ್‌ಗೆ ರೂ.೫೦

ಮಣಿಪಾಲದ ಕೈಗಾರಿಕಾ ಎಸ್ಟೇಟಿನಲ್ಲಿ ಮುದ್ರಣ, ಇಟ್ಟಿಗೆ, ನೆಲಹಾಸು, ರಾಸಾಯನಿಕ, ಪಿ.ವಿ.ಸಿ. ಪೈಪುಗಳು, ಪ್ಲಾಸ್ಟಿಕ್ ಚೀಲಗಳು, ರಟ್ಟಿನ ಪೆಟ್ಟಿಗೆಗಳು. ಪ್ಯಾಕೇಜಿಂಗ್ ವಸ್ತುಗಳು, ಪ್ಲಾಸ್ಟಿಕ್‌ನಿಂದ ತಯಾರಿಸಲಾದ ನೀರಿನ ಟ್ಯಾಂಕುಗಳು, ತಿಂಡಿ ತಿನಿಸು/ಬೇಕರಿ ಉತ್ಪನ್ನಗಳು ಮುಂತಾದ ವಸ್ತುಗಳನ್ನು ಉತ್ಪಾದಿಸುವ ಘಟಕಗಳಿವೆ. ಕಾರ್ಕಳದಲ್ಲಿ ಟಿನ್ ಡಬ್ಬಗಳು ಮತ್ತು ತರಕಾರಿ ಒಣಗಿಸಿ ಸಂಸ್ಕರಿಸುವ ಎರಡು ಘಟಕಗಳು ಮಾತ್ರ ಕಾರ್ಯನಿರ್ವಹಿಸುತ್ತಿವೆ. ಕೋಟೇಶ್ವರದಲ್ಲಿ ಬೇಕರಿ ಉತ್ಪನ್ನ, ಅಲ್ಯೂಮಿನಿಯಂ ವಾಹಕಗಳು, ಲೋಹದ ಕೆಲಸ, ಹುಲ್ಲೆಣ್ಣೆ, ಪಿ.ವಿ.ಸಿ. ಪೈಪು, ಪ್ಲಾಸ್ಟಿಕ್ ವಸ್ತು ಇತ್ಯಾದಿ ವಸ್ತುಗಳನ್ನು ಉತ್ಪಾದಿಸುವ ಘಟಕಗಳಿವೆ.

## ಮಧ್ಯಮ ಪ್ರಮಾಣದ ಕೈಗಾರಿಕೆಗಳು

ಅತಿಸಣ್ಣ, ಸಣ್ಣ ಪ್ರಮಾಣದ ಕೈಗಾರಿಕೆಗಳೆಂದು ವರ್ಗೀಕರಿಸಲ್ಪಡದ ಎಲ್ಲಾ ಕೈಗಾರಿಕೆಗಳನ್ನು ಬೃಹತ್ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆಗಳೆಂದು ವರ್ಗೀಕರಿಸಲಾಗಿದೆ. ಸ್ಥಿರಾಸ್ತಿಯಲ್ಲಿ ರೂ. ೧೦೦ ಕೋಟಿಗಳಿಗಿಂತ ಹೆಚ್ಚಿನ ಬಂಡವಾಳ ಹೂಡುವ ಯೋಜನೆಗೆ ಮೇಗಾ ಯೋಜನೆ ಎಂದು ಕರೆಯಲಾಗುತ್ತದೆ. ಜಿಲ್ಲೆಯಲ್ಲಿ ೧೪ ಮಧ್ಯಮ ಪ್ರಮಾಣದ ಕೈಗಾರಿಕೆಗಳಿದ್ದು, ಪ್ರಸ್ತುತ ೧೧ ಮಾತ್ರ ಕಾರ್ಯನಿರ್ವಹಿಸುತ್ತಿವೆ. ಒಟ್ಟು ಉದ್ದಿಮೆಗಳಲ್ಲಿ ಮೂರು ಉದ್ದಿಮೆಗಳು ಕಾರ್ಕಳ ತಾಲೂಕಿನಲ್ಲಿದ್ದು, ಒಂದು ಉದ್ಯಮ ಮುಚ್ಚಲ್ಪಟ್ಟಿದೆ. ಉಳಿದ ಹನ್ನೊಂದು ಉದ್ಯಮಗಳು ಉಡುಪಿ ತಾಲೂಕಿನಲ್ಲಿದ್ದು, ಎರಡು ಮುಚ್ಚಲ್ಪಟ್ಟಿವೆ. ಕುಂದಾಪುರ ತಾಲೂಕಿನಲ್ಲಿ ಮಧ್ಯಮ ಪ್ರಮಾಣದ ಯಾವುದೇ ಉದ್ದಿಮೆ ಇರುವುದಿಲ್ಲ. ಉಡುಪಿ ತಾಲೂಕಿನಲ್ಲಿರುವ ಒಟ್ಟು ಉದ್ದಿಮೆಗಳಲ್ಲಿ ಆರು ಉದ್ದಿಮೆಗಳು ಮಣಿಪಾಲದಲ್ಲಿ ಕೇಂದ್ರಿಕೃತವಾಗಿವೆ. ಮಣಿಪಾಲದಲ್ಲಿರುವ ಈ ಉದ್ದಿಮೆಗಳ ಹಿಂದೆ 'ಪೈ' ಕುಟುಂಬದ ಉದ್ಯಮಶೀಲತೆ ಇರುವುದನ್ನು ಗಮನಿಸಬಹುದು. ಉದ್ದಿಮೆಗಳ ಪ್ರಸರಣವನ್ನು ಗಮನಿಸಿದಾಗ ಉದ್ಯಮಶೀಲತೆ, ಹಣಕಾಸಿನ ಸೌಲಭ್ಯ ಹಾಗೂ ಮೂಲಭೂತ ಸೌಕರ್ಯ ಉತ್ತಮವಾಗಿರುವ ಕಡೆ ಉದ್ದಿಮೆಗಳು ಬೆಳೆಯುತ್ತಿರುವುದನ್ನು ಕಾಣಬಹುದು. ಕೈಗಾರಿಕೆಗಳನ್ನು ಹೆಚ್ಚು ಹೆಚ್ಚು ಪ್ರಾರಂಭಿಸಬೇಕು ಎನ್ನುವುದರೊಂದಿಗೆ ಕೈಗಾರಿಕೆಗಳು ಬೆಳೆಯಲು ಅಗತ್ಯವಿರುವ ಪರಿಸರವನ್ನು ನಿರ್ಮಿಸಬೇಕು ಎನ್ನುವ ವಾಸ್ತವವನ್ನು ತಿಳಿಯಬೇಕಿದೆ. ಕೋಷ್ಟಕ ೫.೮ರಲ್ಲಿ ಜಿಲ್ಲೆಯಲ್ಲಿರುವ ಮಧ್ಯಮ ಪ್ರಮಾಣದ ಕೈಗಾರಿಕೆಗಳ ಹೆಸರು ಹಾಗೂ ವಿಳಾಸ, ಪ್ರಾರಂಭವಾದ ವರ್ಷ, ಉತ್ಪನ್ನ, ತೊಡಗಿಸಿದ್ದ ಬಂಡವಾಳ ಹಾಗೂ ಉದ್ಯೋಗಿಗಳ ಸಂಖ್ಯೆಯನ್ನು ನೀಡಲಾಗಿದೆ.

**ಕೋಷ್ಟಕ ೫.೮ : ಜಿಲ್ಲೆಯಲ್ಲಿರುವ ಮಧ್ಯಮ ಪ್ರಮಾಣದ ಕೈಗಾರಿಕೆಗಳ ವಿವರ (೨೦೦೬ರ ಮಾರ್ಚ್ ಅಂತ್ಯದಲ್ಲಿದ್ದಂತೆ)**

| ಕ್ರ. ಸಂ. | ಕೈಗಾರಿಕೆಗಳ ಹೆಸರು | ಪ್ರಾರಂಭವಾದ ವರ್ಷ | ಉತ್ಪನ್ನ | ಹೂಡಿದ ಬಂಡವಾಳ (ಲಕ್ಷ ರೂ.ಗಳಲ್ಲಿ) | ಸೃಷ್ಟಿಯಾದ ಉದ್ಯೋಗ (ಸಂಖ್ಯೆಗಳಲ್ಲಿ) |
|---|---|---|---|---|---|
| ೧. | ಮಣಿಪಾಲ ಸೆಕ್ಯೂರಿಟಿ ಪ್ರಿಂಟರ್ಸ್, ಮಣಿಪಾಲ | ೧೯೮೪ | ಸುರಕ್ಷಿತ ಮುದ್ರಣ ವ್ಯವಹಾರಿ ಸಂಸ್ಥೆಗಳು ಬಳಸುವ ಉತ್ತಮ ಗುಣಮಟ್ಟದ ದಾಖಲೆಗಳ ಮುದ್ರಣ | ೭೬ | ೧೪೯ |
| ೨. | ಕೆನರಾ ಸೆಕ್ಯೂರಟಿ ಪ್ರೆಸ್, ಮಣಿಪಾಲ | ೧೯೮೪ | ಲಾಟರಿ ಟಿಕೇಟು / ಬ್ಯಾಂಕ್ ಚೆಕ್ ಪುಸ್ತಕಗಳ ಮುದ್ರಣ | ೩೯೪.೪ | ೧೨೫ |
| ೩. | ಮಣಿಪಾಲ ಪವರ್ ಪ್ರೆಸ್, ಮಣಿಪಾಲ | ೧೯೪೧ | ಮುದ್ರಣ | ೫೦೯.೦೦ | ೫೦೦ |
| ೪. | ಮಣಿಪಾಲ ಪ್ರಿಂಟರ್ಸ್ ಅಂಡ್ ಪಬ್ಲಿಷರ್ಸ್, ಮಣಿಪಾಲ | ೧೯೭೦ | ವೃತ್ತ ಪತ್ರಿಕೆ ಮುದ್ರಣ | ೨೫೨ | ೧೩೬ |
| ೫. | ಲ್ಯಾಮಿನಾ ಫೌಂಡ್ರೀಸ್ ನಿಟ್ಟೆ, ಕಾರ್ಕಳ ತಾಲ್ಲೂಕು | ೧೯೮೩ | ವಾಹನಗಳ ಬ್ರೇಕ್ ಡ್ರಮ್ | ೩೨೮ | ೨೨೦ |
| ೬. | ಇಂಡಿಯನ್ ಪ್ಲೈವುಡ್ ಮ್ಯಾನ್ಯುಫೇಕ್ಚರಿಂಗ್ ಕಂಪನಿ, ಹಂಗಾರ ಕಟ್ಟೆ, ಉಡುಪಿ ತಾಲೂಕು | – | ಪ್ಲೈವುಡ್ | ೪೩.೦೦ | ಮುಚ್ಚಿದೆ. |
| ೭. | ಮಣಿಪಾಲ ಪ್ರಕಾಶನ ಪ್ರೈವೇಟ್ ಲಿಮಿಟೆಡ್ | ೧೯೮೨ | ಮುದ್ರಣ | ೫೦೩.೦೦ | ೭೨ |
| ೮. | ದಕ್ಷಿಣ ಕನ್ನಡಜಿಲ್ಲೆಯ ಸಹಕಾರಿ ಸಕ್ಕರೆ ಕಾರ್ಖಾನೆ,ಬ್ರಹ್ಮಾವರ, ಉಡುಪಿ ಜಿಲ್ಲೆ | ೧೯೮೫ | ಸಕ್ಕರೆ ಉತ್ಪಾದನೆ | ೮೭೫.೦೦ | ಮುಚ್ಚಿದೆ. |
| ೯. | ಬಾಳಿಗಾ ಎಕ್ಸ್‌ಪೋರ್ಟ್ ಪ್ರೈ.ಲಿ., ಉಡುಪಿ. | ೧೯೮೫ | ನೈಲಾನ್ ಮೀನಿನ ಬಲೆ | ೧೭೩.೩೧ | ೩೫೦–೪೦೦ |
| ೧೦. | ಲೂಸಿ ಅಂಡ್ ಲೂಸಿ ಫಿಷರೀಸ್ ಪ್ರೈ.ಲಿ.,ಮಲ್ಪೆ, | – | ಮೀನುಗಾರಿಕೆ | ೧೫೨ | ಮುಚ್ಚಿದೆ. |
| ೧೧. | ಅಮಿತಾ ಜೂಲಿಯನ್ ಮೆರೈನ್ ಪ್ರೈ.ಲಿ.,ಹಿರಿಯಡ್ಕ | ೧೯೯೯ | ನೈಲಾನ್ ಫಿಗ್ ನೆಟ್ | ೬೫೬ | ೧೦೦ |
| ೧೨. | ಕೆಲ್‌ಟೆಕ್ ಎನರ್ಜೀಸ್ ಪ್ರೈವೇಟ್ ಲಿಮಿಟೆಡ್, | ೧೯೮೦ | ವಾಟರ್ ಜೆಲ್ ಎಕ್ಸ್ ಪ್ಲೆಸಿವ್ಸ್ | ೫೦೦ | ೮೫ |
| ೧೩. | ಸುಬೋಸಕಾ ಎ.ಐ.ವಿ. ಕಂಪನಿ ಪ್ರೈ.ಲಿ., ಮೀಯಾರ್, ಕಾರ್ಕಳ. | ೧೯೯೬ | ಗ್ರಾನೈಟ್ | ೨೪೭ | ೩೪ |
| ೧೪. | ಬೆಸ್ಟ್ ಸೆಲ್ಲರ್ಸ್, ಬಾಜಲ್ ಸ್ಟ್ರೀಟ್, ಮಣಿಪಾಲ | ೧೯೯೯ | ಸಿದ್ಧ ಉಡುಪುಗಳು | ೧೫೦೦ | ೯೦೦ |

## ಮಣಿಪಾಲ ಸೆಕ್ಯೂರಿಟಿ ಪ್ರಿಂಟರ್ಸ್ ಮತ್ತು ಮಣಿಪಾಲ ಪವರ್ ಪ್ರೆಸ್, ಮಣಿಪಾಲ

ಈ ಮೇಲಿನ ಎರಡೂ ಸಂಸ್ಥೆಗಳು ಜಿಲ್ಲೆಗೆ ಪೈ ಸಮುದಾಯಗಳ ಮಹತ್ತರ ಕೊಡುಗೆಗಳು, ಮಣಿಪಾಲ ಪವರ್ ಪ್ರೆಸ್ ಸ್ವಾತಂತ್ರ್ಯ ಪೂರ್ವದ ೧೯೪೧ರಲ್ಲೇ ಪ್ರಾರಂಭವಾಗಿದ್ದರೆ, ಮಣಿಪಾಲ ಸೆಕ್ಯೂರಿಟಿ ಪ್ರಿಂಟರ್ಸ್ ೧೯೮೪ನೇ ಏಪ್ರಿಲ್‌ನಲ್ಲಿ ಪ್ರಾರಂಭಗೊಂಡಿತು. ಶ್ರೀ ಸತೀಶ್ ಪೈ ಹಾಗೂ ಮೋಹನದಾಸ್ ಪೈಗಳು ಇದರ ಹಿಂದಿನ ರೂವಾರಿಗಳು, ಮಣಿಪಾಲ ಸೆಕ್ಯೂರಿಟಿ ಪ್ರಿಂಟರ್ಸ್ ಸುರಕ್ಷಿತ ಮುದ್ರಣ ಹಾಗೂ ವ್ಯವಹಾರಿ ಸಂಸ್ಥೆಗಳು ಬಳಸುವ ಉತ್ತಮ ಗುಣಮಟ್ಟದ ದಾಖಲೆಗಳ ಮುದ್ರಣ ಮಾಡುತ್ತಿದ್ದು, ಇದರಲ್ಲಿ

೭೬ ಲಕ್ಷ ರೂ.ಗಳನ್ನು ಬಂಡವಾಳ ತೊಡಗಿಸಿದ್ದು ೧೪೯ ಜನರಿಗೆ ಉದ್ಯೋಗ ಕಲ್ಪಿಸಿದೆ. ಮಣಿಪಾಲ ಪವರ್ ಪ್ರೆಸ್ ಕೂಡ ಅತ್ಯಾಧುನಿಕ ಮುದ್ರಣ ವ್ಯವಸ್ಥೆಯನ್ನು ಹೊಂದಿದ್ದು ಇದರಲ್ಲಿ ೫೮೯ ಲಕ್ಷ ರೂ.ಗಳ ಬಂಡವಾಳ ತೊಡಗಿಸಲಾಗಿದೆ. ಇಲ್ಲಿ ೫೦೦ ಜನ ಉದ್ಯೋಗಿಗಳು ಕೆಲಸ ಮಾಡುತ್ತಿದ್ದಾರೆ. ಈ ಎರಡೂ ಸಂಸ್ಥೆಗಳು ಜಿಲ್ಲೆಯ ಮುದ್ರಣಾ ವ್ಯವಸ್ಥೆಯಲ್ಲಿ ಅತ್ಯುನ್ನತ ಸ್ಥಾನಗಳಲ್ಲಿವೆ.

## ಕೆನರಾ ಸೆಕ್ಯೂರಿಟಿ ಪ್ರೆಸ್, ಮಣಿಪಾಲ

ಈ ಸಂಸ್ಥೆ ೧೯೮೪ನೇ ಏಪ್ರಿಲ್ ತಿಂಗಳಿನಲ್ಲಿ ಪ್ರಾರಂಭವಾಯಿತು. ಕರ್ನಾಟಕ ರಾಜ್ಯ ಸರಕಾರದ ಲಾಟರಿಗಳು ಹಾಗೂ ಬ್ಯಾಂಕ್ ಚೆಕ್‍ಗಳ ಸುರಕ್ಷಿತ ಮುದ್ರಣ ಇದರ ಕೆಲಸ. ಈ ಉದ್ದಿಮೆಯಲ್ಲಿ ೩೯೪.೪ ಲಕ್ಷ ರೂ.ಗಳಷ್ಟು ಬಂಡವಾಳ ತೊಡಗಿಸಲಾಗಿದ್ದು ೧೨೫ ಮಂದಿಗೆ ಉದ್ಯೋಗವನ್ನು ನೀಡಿದೆ.

## ಮಣಿಪಾಲ ಪ್ರಿಂಟರ್ಸ್ ಅಂಡ್ ಪಬ್ಲಿಷರ್ಸ್, ಮಣಿಪಾಲ

ಇದು ೧೯೭೦ನೇ ಇಸವಿಯಲ್ಲಿ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯ ಮಣಿಪಾಲದಲ್ಲಿ ಶ್ರೀ ಉಪೇಂದ್ರ ಪೈಗಳ ದೂರದರ್ಶಿತ್ವದಡಿಯಲ್ಲಿ ಪ್ರಾರಂಭವಾಯಿತು. ಕರಾವಳಿ ಜಿಲ್ಲೆಗಳಿಗೆ ಪ್ರತ್ಯೇಕವಾದ ನಮ್ಮದೇ ಪತ್ರಿಕೆ ಇರಬೇಕೆಂಬುದು ಅವರ ಕನಸಾಗಿತ್ತು. ಸ್ಥಳೀಯ ಜನತೆಯ ಆಶೋತ್ತರಗಳಿಗೆ ಸ್ಪಂದನೆ ಹಾಗೂ ವೇದಿಕೆಯನ್ನು ಇದು ನೀಡಬೇಕೆಂಬುದು ಅವರ ಆಶಯವಾಗಿತ್ತು. ನಂತರದ ದಿನಗಳಲ್ಲಿ ಇದು ತನ್ನ ವ್ಯಾಪ್ತಿಯನ್ನು ವಿಸ್ತರಿಸಿ 'ಸುಗ್ರಾಮ ಯೋಜನೆ' 'ದತ್ತು ಗ್ರಾಮ' ಎಂಬ ಇತ್ಯಾದಿ ಯೋಜನೆಗಳನ್ನು ಪ್ರಥಮವಾಗಿ ಜಿಲ್ಲೆಯಲ್ಲಿ ಪತ್ರಿಕೋದ್ಯಮದ ಮುಖಾಂತರ ಹುಟ್ಟು ಹಾಕಿತು.

'ಕರ್ನಾಟಕ ಕರಾವಳಿಯ ಸುಂದರ ಕನ್ನಡ ದೈನಿಕ' ಎಂಬ ಆಶಯ ವಾಕ್ಯದೊಂದಿಗೆ ಇಂದು 'ಉದಯವಾಣಿ' ಪತ್ರಿಕೆ ಜಿಲ್ಲೆಯಲ್ಲಿ ಅತ್ಯಧಿಕ ಸಂಖ್ಯೆಯಲ್ಲಿ ಪ್ರಸಾರವಾಗುತ್ತಿದೆ. ಇದರಲ್ಲಿ ೨೫೨ ಲಕ್ಷ ರೂಪಾಯಿಗಳನ್ನು ಬಂಡವಾಳ ತೊಡಗಿಸಲಾಗಿದ್ದು, ೧೩೬ ಉದ್ಯೋಗಿಗಳಿಗೆ ಜೀವನಾಧಾರವಾಗಿದೆ. ಸುಮಾರಾಗಿ ೨ ಲಕ್ಷಕ್ಕೂ ಮೀರಿ ಪ್ರಸಾರವನ್ನು ಹೊಂದಿದ ಈ ಪತ್ರಿಕೆ ರಾಷ್ಟ್ರದ ಮೂರು ಕಡೆಗಳಿಂದ ಏಕಕಾಲದಲ್ಲಿ (ಮಣಿಪಾಲ, ಬೆಂಗಳೂರು ಮತ್ತು ಬೊಂಬಾಯಿ) ಮುದ್ರಣಗೊಳ್ಳುತ್ತಿದೆ. ಅತ್ಯಾಧುನಿಕವಾದ ಮುದ್ರಣ ಯಂತ್ರವನ್ನು ಹೊಂದಿದ ಈ ಸಂಸ್ಥೆ ಇಂದು ಜಿಲ್ಲೆಯ ಕೈಗಾರಿಕಾ ಬೆಳವಣಿಗೆ ದೃಷ್ಟಿಯಿಂದ ಹೆಮ್ಮೆಯ ವಿಷಯ. ಪ್ರಸ್ತುತ ಇದು 'ಮಣಿಪಾಲ ಮೀಡಿಯಾ ನೆಟ್‍ವರ್ಕ್' ಎಂಬುದಾಗಿ ಪ್ರಚಲಿತದಲ್ಲಿದ್ದು ಬೆಳವಣಿಗೆ ಹೊಂದುತ್ತಿದೆ. ಇದರೊಡನೆ ಈ ಸಮೂಹ ಸಂಸ್ಥೆಗಳು ಜಿಲ್ಲೆಯ ಜನರ ಆಶೋತ್ತರಗಳಿಗೆ ಸ್ಪಂದಿಸುತ್ತಾ ಬಂದಿದೆ. ಇದರ ಫಲವಾಗಿ ೧೯೭೬ರಲ್ಲಿ 'ತುಷಾರ' ಮಾಸಿಕ ಪತ್ರಿಕೆಯನ್ನು ತಂದಿತು. ಈ ಮಾಸಿಕ ಪತ್ರಿಕೆ ಪ್ರಸ್ತುತ ತಿಂಗಳಿಗೆ ೨೦,೦೦೦ ಪ್ರತಿಗಳು ಮಾರಾಟವಾಗುತ್ತಿವೆ. ಹಾಗೆಯೇ ೧೯೭೬ ರಿಂದ 'ರೂಪತಾರಾ' ಪಾಕ್ಷಿಕ ಪತ್ರಿಕೆಯನ್ನು ಹೊರತರಲಾಗುತ್ತಿದ್ದು, ೫೦,೦೦೦ ಪ್ರತಿಗಳು ಮಾರಾಟವಾಗುತ್ತಿವೆ. ೧೯೮೧ ರಿಂದ 'ತರಂಗ' ವಾರಪತ್ರಿಕೆಯನ್ನು ಹೊರತರಲಾಗುತ್ತಿದ್ದು, ೮೦,೦೦೦ ಪ್ರತಿಗಳು ಮಾರಾಟಗೊಳ್ಳುತ್ತಿದೆ. ೧೯೯೯ ರಿಂದ 'ತುಂತುರು' ಪಾಕ್ಷಿಕ ಹೊರಬರುತ್ತಿದ್ದು, ಸು. ೨೫,೦೦೦ ಪ್ರತಿಗಳು ಪ್ರಸಾರಗೊಳ್ಳುತ್ತಿದೆ.

## ಲ್ಯಾಮಿನಾ ಫೌಂಡ್ರೀಸ್, ನಿಟ್ಟೆ

ಕಾರ್ಕಳ ತಾಲೂಕಿನ ನಿಟ್ಟೆಯಂತಹ ಗ್ರಾಮೀಣ ಪ್ರದೇಶದಲ್ಲಿ ಲ್ಯಾಮಿನಾ ಫೌಂಡ್ರೀಸ್ ೧೯೮೩ರಲ್ಲಿ ಪ್ರಾರಂಭಗೊಂಡು ಅಕ್ಟೋಬರ್ ತಿಂಗಳಲ್ಲಿ ಉತ್ಪಾದನೆ ಆರಂಭಿಸಿದ ಸಂಸ್ಥೆ ಈಗ ದೇಶ ವಿದೇಶಗಳಲ್ಲಿ ಪ್ರಸಿದ್ಧಿ ಪಡೆದಿದೆ. ಇಲ್ಲಿ ವಾಹನಗಳಲ್ಲಿ ಬಳಸುವ ಬ್ರೇಕ್ ಡ್ರಮಗಳನ್ನು ಉತ್ಪಾದಿಸಲಾಗುತ್ತಿದೆ. ಈ ಕೈಗಾರಿಕೆಯಲ್ಲಿ ೩೨೮ ಲಕ್ಷ ರೂಪಾಯಿ ಬಂಡವಾಳ ಹೂಡಲಾಗಿದ್ದು, ೨೨೦ ಜನರಿಗೆ ಉದ್ಯೋಗ ಕಲ್ಪಿಸಲಾಗಿದೆ.

## ದಕ್ಷಿಣ ಕನ್ನಡ ಸಹಕಾರಿ ಸಕ್ಕರೆ ಕಾರ್ಖಾನೆ, ನಿಯಮಿತ

ಈ ಕಾರ್ಖಾನೆಯು ಆರ್. ಸಿ. ಎಸ್. ೨೭೫೬/೭೩–೭೪ರಲ್ಲಿ ನೋಂದಣಿಗೊಂಡಿದ್ದು, ದಿನಾಂಕ: ೨೨–೦೧–೧೯೮೫ ರಿಂದ ವಾಣಿಜ್ಯ ಉತ್ಪಾದನಾ ಕಾರ್ಯಾರಂಭ ಮಾಡಿರುತ್ತದೆ. ಇದು

ದಿನಕ್ಕೆ ೧೨೫೦ ಟನ್ ಕಬ್ಬು ಅರೆಯುವ ಸಾಮರ್ಥ್ಯ ಹೊಂದಿದ್ದು, ಉಡುಪಿ ಹಾಗೂ ದಕ್ಷಿಣ ಕನ್ನಡ ಜಿಲ್ಲೆಗಳು, ಉತ್ತರ ಕನ್ನಡ ಜಿಲ್ಲೆಯ ಭಟ್ಕಳ ಹಾಗೂ ಶಿವಮೊಗ್ಗ ಜಿಲ್ಲೆಯ ಹೊಸನಗರ ತಾಲೂಕು ಪ್ರದೇಶಗಳನ್ನು ತನ್ನ ವ್ಯಾಪ್ತಿಯಲ್ಲಿ ಹೊಂದಿದ್ದು, ಈ ಪ್ರದೇಶಗಳಿಂದ ಕಾರ್ಖಾನೆಗೆ ಕಬ್ಬು ಪೂರೈಕೆಯಾಗುತ್ತಿತ್ತು. ಈ ಉದ್ದಿಮೆಯಲ್ಲಿ ೮೭೫ ಲಕ್ಷ ರೂ.ಗಳ ಬಂಡವಾಳ ತೊಡಗಿಸಲಾಗಿದೆ. ಈ ಉದ್ಯಮವು ೧೭೬ ಮಂದಿಗೆ ಉದ್ಯೋಗ ಒದಗಿಸಿದ್ದು, ಅವರಲ್ಲಿ ೧೬೦ ಮಂದಿ ಖಾಯಂ, ೧೬ ಮಂದಿ ಅರೆಕಾಲಿಕ ಉದ್ಯೋಗಿಗಳಾಗಿದ್ದರು. ಈ ಉದ್ಯಮವು ಆರ್ಥಿಕವಾಗಿ ನಷ್ಟಕ್ಕೆ ಒಳಗಾಗಿದ್ದು, ೨೦೦೩–೦೪ರಲ್ಲಿ ೪೩೮೭.೭೩ ಲಕ್ಷ ರೂ.ಗಳ ನಷ್ಟ ಅನುಭವಿಸಿತ್ತು. ಅಂತಿಮವಾಗಿ ಮೇ–೨೦೦೩ರಲ್ಲಿ ಕಬ್ಬು ಅರೆಯುವುದನ್ನು ಸ್ಥಗಿತಗೊಳಿಸಿತು. ಕಾರ್ಖಾನೆಯು ತನ್ನ ಉತ್ಪಾದನೆಯನ್ನು ಆರಂಭಿಸಿದಂದಿನಿಂದ ಸ್ಥಗಿತಗೊಳ್ಳುವವರೆಗೂ ಒಟ್ಟು ಅರೆದ ಕಬ್ಬು ಉತ್ಪಾದನೆಯಾದ ಸಕ್ಕರೆ ಹಾಗೂ ಸಕ್ಕರೆ ಇಳುವರಿಯನ್ನು ಕೋಷ್ಟಕ ೫.೯ರಲ್ಲಿ ನೀಡಲಾಗಿದೆ.

**ಕೋಷ್ಟಕ ೫.೯ : ೧೯೮೫–೨೦೦೩ರವರೆಗೆ ಅರೆದ ಕಬ್ಬು ಹಾಗೂ ಸಕ್ಕರೆ ಉತ್ಪಾದನೆ ವಿವರ**

| ವರ್ಷಗಳು | ಒಟ್ಟು ಅರೆದ ಕಬ್ಬು | ಉತ್ಪಾದನೆಯಾದ ಸಕ್ಕರೆ | ಸಕ್ಕರೆ ಇಳುವರಿ (ಶೇ.) |
|---|---|---|---|
| ೧೯೮೫–೮೬ | ೯೨೮೫.೯೯೦ | ೬೭೧೯ | ೬.೭೬ |
| ೧೯೮೬–೮೭ | ೩೦೪೮೫.೧೯೦ | ೨೫೨೭೧ | ೭.೮೫ |
| ೧೯೮೭–೮೮ | ೪೯೫೯೫.೨೬೦ | ೩೮೭೭೯ | ೮.೧೮ |
| ೧೯೮೮–೮೯ | ೫೬೮೮೯.೩೭೦ | ೫೨೫೮೧ | ೯.೧೦ |
| ೧೯೮೯–೯೦ | ೨೩೮೨೪.೮೩೦ | ೨೧೫೫೫ | ೯.೨೮ |
| ೧೯೯೦–೯೧ | ೨೬೦೦೧.೦೨೦ | ೨೪೮೧೮ | ೯.೨೮ |
| ೧೯೯೧–೯೨ | ೪೮೮೮೯.೫೧೦ | ೪೧೩೦೦ | ೮.೯೨ |
| ೧೯೯೨–೯೩ | ೫೦೨೩೭.೮೮೦ | ೩೭೦೭೧ | ೭.೪೬ |
| ೧೯೯೩–೯೪ | ೫೩೭೩೭.೩೭೦ | ೫೦೪೫೦ | ೮.೭೦ |
| ೧೯೯೪–೯೫ | ೯೫೧೦೧.೨೫೦ | ೮೧೪೬೬ | ೮.೬೦ |
| ೧೯೯೫–೯೬ | ೧೪೩೦೦೮.೧೦೦ | ೧೨೦೧೨೦ | ೮.೪೦ |
| ೧೯೯೬–೯೭ | ೭೬೩೦೯.೧೫೭ | ೬೯೦೧೫ | ೮.೮೮ |
| ೧೯೯೭–೯೮ | ೬೧೯೯೩.೮೦೦ | ೫೦೫೮೬ | ೭.೪೬ |
| ೧೯೯೮–೯೯ | ೭೮೭೩೬.೧೩೮ | ೭೫೨೩೨ | ೯.೫೫ |
| ೧೯೯೯–೨೦೦೦ | ೭೬೬೭೪.೫೬೯ | ೭೧೯೭೦ | ೯.೪೦ |
| ೨೦೦೦–೦೧ | ೫೮೧೭೬.೭೧೭ | ೫೩೦೫೦ | ೯.೧೦ |
| ೨೦೦೧–೦೨ | ೫೫೩೨೦.೭೪೦ | ೪೯೩೦೦ | ೮.೯೩ |
| ೨೦೦೨–೦೩ | ೫೬೭೯೫.೬೦೦ | ೩೯೨೫೦ | ೭.೦೫ |

## ಬಾಳಿಗಾ ಎಕ್ಸ್‌ಪೋರ್ಟ್ ಪ್ರೈವೇಟ್ ಲಿಮಿಟೆಡ್, ಉಡುಪಿ

ಜಿಲ್ಲೆಯ ಮೀನುಗಾರಿಕಾ ಕ್ಷೇತ್ರದಲ್ಲಿ ಬಾಳಿಗಾ ಎಕ್ಸ್‌ಪೋರ್ಟ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆಯು ಉನ್ನತ ಹಾಗೂ ಗಣನೀಯ ಸ್ಥಾನಮಾನ ಪಡೆದಿದ್ದು, ಒಳ್ಳೆಯ ಹೆಸರನ್ನು ಗಳಿಸಿದೆ. ಒಂದನೇ ನವೆಂಬರ್ ೧೯೮೫ರಲ್ಲಿ ಶ್ರೀಯುತ ರಮಾನಂದ ಬಾಳಿಗಾರವರ ನೇತೃತ್ವದಲ್ಲಿ ಹುಟ್ಟಿಕೊಂಡ ಈ ಸಂಸ್ಥೆ ಇಂದು ದೇಶ ವಿದೇಶಗಳ ಮಾರುಕಟ್ಟೆಗಳಲ್ಲಿ ತನ್ನ ಕಾರ್ಯಕ್ಷೇತ್ರವನ್ನು ವಿಸ್ತರಿಸಿಕೊಂಡಿದೆ.

ಕರಾವಳಿ ಕರ್ನಾಟಕದ ನೈಸರ್ಗಿಕ ಕಸುಬಾದ ಮೀನುಗಾರಿಕೆಗೆ ಉತ್ತೇಜನಕಾರಿಯಾಗಿ ಮತ್ತು ಈ ಪ್ರದೇಶದಿಂದ ಹೊರದೇಶಗಳಿಗೆ ನೇರ ಸಂಪರ್ಕಕ್ಕಾಗಿ ಜಲಮಾರ್ಗವನ್ನು ಅಭಿವೃದ್ಧಿಪಡಿಸುವ ಸಲುವಾಗಿ, ವೈಜ್ಞಾನಿಕ ರೀತಿಯಲ್ಲಿ ಜಿಲ್ಲೆಯ 'ಮಲ್ಪೆ' ಎಂಬಲ್ಲಿ ಹಡಗುಗಳ ನೆಲೆ–ಬಂದರನ್ನು ಸ್ಥಾಪಿಸಲಾಯಿತು. ಹಾಗೆಯೇ ಇಲ್ಲಿ ದೋಣಿ ನಿರ್ಮಾಣ ಘಟಕಗಳೂ ಹುಟ್ಟಿಕೊಂಡವು. ಈ ರೀತಿಯಾಗಿ ಮಲ್ಪೆ ಆಧುನಿಕ ತಂತ್ರಜ್ಞಾನಗಳಿಂದ ಮೀನುಗಾರಿಕೆಗೆ ಹಾಗೂ ಮೀನಿನ ರಫ್ತಿಗಾಗಿ ತೆರೆದಿಟ್ಟ ಸ್ಥಳ ಎಂದು ಅಧಿಕೃತವಾಗಿ ಘೋಷಣೆಯಾಯಿತು. ಆಗ ಮಲ್ಪೆ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಮೀನುಗಾರಿಕೆಗೆ ಬೇಕಾದ ನೈಲಾನ್ ಬಲೆಗಳ ಅವಶ್ಯಕತೆಯೂ ಹೆಚ್ಚಾಗತೊಡಗಿತು. ಅಲ್ಲದೇ ಆ ಸಮಯದಲ್ಲಿ ಇಡೀ ದೇಶದಲ್ಲಿಯೇ ಈ ಬಲೆಗಳ ಕೊರತೆ ಕಂಡುಬಂದಿತ್ತು. ಇಂತಹ ಸಂದರ್ಭದಲ್ಲಿ ಜಿಲ್ಲೆಯ ಮೀನುಗಾರರ ಅವಶ್ಯಕತೆಗಳನ್ನು ಮನಗಂಡು ಒಂದು ಕೋಟಿ ರೂಪಾಯಿಯ ಆರಂಭದ ಬಂಡವಾಳದೊಂದಿಗೆ ಈ ಉದ್ಯಮ ಸ್ಥಾಪನೆಗೊಂಡಿತು. ಪ್ರಾರಂಭದ ದಿನಗಳಲ್ಲಿ ಇದರ ಕಾರ್ಯಚಟುವಟಿಕೆಗಳಿಗೆ ಸಂಬಂಧಿಸಿದಂತೆ ಮೀನುಗಾರಿಕಾ ಇಲಾಖೆ ಹಾಗೂ ಸರಕಾರದಿಂದ ಸಹಾಯಧನ ದೊರಕುತ್ತಿತ್ತು. ಆದರೆ ಪ್ರಸ್ತುತ ಯಾವುದೇ ಸಹಾಯಧನವನ್ನೂ ಈ ಸಂಸ್ಥೆ ಪಡೆಯುತ್ತಿಲ್ಲ. ಇಂದು ಸುಮಾರು ೩೫೦ ರಿಂದ ೪೦೦ ಮಂದಿ ಕಾರ್ಮಿಕರು ದುಡಿಯುತ್ತಿದ್ದು, ಬಹುತೇಕರು ಸ್ಥಳೀಯರಾಗಿದ್ದು, ಹೊರಪ್ರದೇಶಗಳಿಂದ ಬಂದಂತಹ ಕಾರ್ಮಿಕರಿಗೆ ಉಳಿದುಕೊಳ್ಳುವ ವ್ಯವಸ್ಥೆ ಹಾಗೂ ಊಟ–ತಿಂಡಿಗಳ ಪೂರೈಕೆಯ ಜವಾಬ್ದಾರಿಯನ್ನು ಸಂಸ್ಥೆಯು ಅಚ್ಚುಕಟ್ಟಾಗಿ ನಿರ್ವಹಿಸುತ್ತಿದೆ. ಪ್ರಸ್ತುತ ಈ ಉದ್ದಿಮೆಯಲ್ಲಿ ರೂ. ೧೭೩.೩೧ ಲಕ್ಷ ಬಂಡವಾಳ ತೊಡಗಿಸಲಾಗಿದೆ.

ಪ್ರಮುಖವಾಗಿ ನೈಲಾನ್ ಮೀನಿನ ಬಲೆ (Fish Net) ಗಳನ್ನು ಉತ್ಪಾದಿಸುವ ಈ ಸಂಸ್ಥೆ ಗಲ್ಫ್, ಆಫ್ರಿಕಾ ಹಾಗೂ ಶ್ರೀಲಂಕಾ ದೇಶಗಳಿಗೆ ತನ್ನ ಉತ್ಪನ್ನಗಳನ್ನು ರಫ್ತು ಮಾಡುತ್ತಿದೆ. ಅಲ್ಲದೇ ಈ ಬಲೆಗಳ ಗುಣಮಟ್ಟಕ್ಕೆ ಮನಸೋತು ಯುರೋಪಿನ ಹಲವಾರು ದೇಶಗಳು ಸಂಸ್ಥೆಗೆ ಬೇಡಿಕೆ ಸಲ್ಲಿಸಿವೆ ಮತ್ತು ಆ ದೇಶಗಳೊಡನೆ ಈಗ ಒಡಂಬಡಿಕೆಗೆ ವ್ಯವಸ್ಥೆಯನ್ನೂ ಮಾಡಲಾಗುತ್ತಿದೆ. ಸರಕಾರದ ಉದಾರೀಕರಣ ಹಾಗೂ ಜಾಗತೀಕರಣ ನೀತಿಗಳಿಂದಾಗಿ ಕಾರ್ಖಾನೆಯ ಉತ್ಪನ್ನಗಳಿಗೆ ಅಂತರಾಷ್ಟ್ರೀಯ ಬೇಡಿಕೆ ಹೆಚ್ಚಿದೆ. ಉತ್ಪನ್ನಗಳ ತಯಾರಿಕೆಗೆ ಬೇಕಾದ ಶೇ. ೮೦ರಷ್ಟು ಕಚ್ಚಾವಸ್ತುಗಳನ್ನು ಯುರೋಪ್ ಹಾಗೂ ಆಗ್ನೇಯ ರಾಷ್ಟ್ರಗಳಿಂದ ಆಮದುಮಾಡಿಕೊಂಡರೆ, ಉಳಿದ ಶೇ. ೨೦ರಷ್ಟನ್ನು ಸ್ಥಳೀಯವಾಗಿ ಪೂರೈಸಿಕೊಳ್ಳಲಾಗುತ್ತಿದೆ. ಹೀಗೆ ಜಿಲ್ಲಾ ವ್ಯಾಪ್ತಿಯನ್ನು ಹೊರತುಪಡಿಸಿ ಅಂತರಾಷ್ಟ್ರೀಯ ಮಾರುಕಟ್ಟೆಗೆ ತನ್ನ ಉತ್ಪನ್ನಗಳ ಗುಣಮಟ್ಟದ ಮುಖಾಂತರ ಲಗ್ಗೆ ಹಾಕಿದ ಈ ಸಂಸ್ಥೆ, ಪ್ರಸ್ತುತ ಸುಮಾರು ರೂ. ೨೬ ಕೋಟಿ ವಾರ್ಷಿಕ ವಹಿವಾಟನ್ನು ನಡೆಸುತ್ತಿದೆ. ಹಾಗೆ ಕಳೆದ ಎರಡು ದಶಕಗಳಿಂದ ಮೀನುಗಾರರ ಜೀವನಾಡಿಯಾದ ನೈಲಾನ್ ಬಲೆಗಳ ಪೂರೈಕೆ ಮಾಡುತ್ತಿರುವ ಈ ಸಂಸ್ಥೆ ಜಿಲ್ಲೆಯ ಕೈಗಾರಿಕಾ ಕ್ಷೇತ್ರದಲ್ಲೂ ತನ್ನದೇ ಆದ ಛಾಪನ್ನು ಒತ್ತಿ ಅಭಿವೃದ್ಧಿಯತ್ತ ಸಾಗುತ್ತಿದೆ.

### ಅಮಿತಾ ಜೂಲಿಯನ್ ಮೆರೈನ್ ಪ್ರೈವೇಟ್ ಲಿಮಿಟೆಡ್, ಮಣಿಪಾಲ

ಈ ಉದ್ಯಮವು ೧೯೯೯ರಲ್ಲಿ ಕಚೇರಿಯನ್ನು ಮಣಿಪಾಲದ ಕೈಗಾರಿಕಾ ಬಡಾವಣೆಯಲ್ಲಿ ಆರಂಭಿಸಿದ್ದು, ಹಿರಿಯಡ್ಕದಲ್ಲಿ ತನ್ನ ಶಾಖೆಯನ್ನೂ ಹೊಂದಿದೆ. ಈ ಸಂಸ್ಥೆಯು ನೈಲಾನ್ ಫಿಷ್‌ನೆಟ್‌ಗಳನ್ನು ತಯಾರಿಸುತ್ತಿದ್ದು, ಇದಕ್ಕೆ ಬೇಕಾದಂತಹ ಕಚ್ಚಾವಸ್ತುಗಳನ್ನು ಆಂತರಿಕವಾಗಿ ಬೊಂಬಾಯಿ, ಚೆನ್ನೈ ಹಾಗೂ ಬೆಂಗಳೂರು ನಗರಗಳಿಂದ ತರಿಸಿಕೊಳ್ಳುತ್ತಿದೆ.

ತನ್ನ ಉತ್ಪನ್ನಗಳಾದ 'ನೈಲಾನ್ ಫಿಷ್‌ನೆಟ್‌ಗಳನ್ನು ಹೆಚ್ಚಾಗಿ ಹೊರದೇಶಗಳಾದ ಜಪಾನ್, ಶ್ರೀಲಂಕಾ, ಬಾಂಗ್ಲಾದೇಶ, ನೈಜೀರಿಯಾ ಹಾಗೂ ಆಫ್ರಿಕನ್ ದೇಶಗಳಿಗೆ ರಫ್ತು ಮಾಡುತ್ತಿದೆ. ಸ್ಥಳೀಯವಾಗಿ ಸುಮಾರು ೧೦೦ ಕಾರ್ಮಿಕರಿಗೆ ಉದ್ಯೋಗ ನೀಡುತ್ತಿರುವ ಈ ಸಂಸ್ಥೆ ಸರಕಾರದ ಯಾವುದೇ ಸಹಾಯಧನಗಳನ್ನು ಈವರೆಗೆ ಪಡೆದುಕೊಂಡಿಲ್ಲ. ಸ್ಥಳೀಯ ಹಾಗೂ ಅಂತರರಾಷ್ಟ್ರೀಯವಾಗಿ ಮಾರುಕಟ್ಟೆಯನ್ನು ವಿಸ್ತರಿಸಿಕೊಂಡ ಈ ಸಂಸ್ಥೆಯು ಪ್ರಾರಂಭದ ದಿನಗಳಲ್ಲಿ ಸುಮಾರು ೬೫೬ ಲಕ್ಷ ರೂಪಾಯಿಗಳನ್ನು ಬಂಡವಾಳವಾಗಿ

ತೊಡಗಿಸಿಕೊಂಡಿದೆ. ಮೀನುಗಾರರ ಬೇಡಿಕೆಗಳಿಗೆ ಪೂರಕವಾಗಿ ಸ್ಪಂದಿಸಿ ಸ್ಥಳೀಯವಾಗಿ ಉದ್ಯೋಗ ಸೃಷ್ಟಿಸಿದ ಈ ಸಂಸ್ಥೆ ಇಂದು ಕೇರಳ, ಆಂಧ್ರಪ್ರದೇಶ ಹಾಗೂ ತಮಿಳುನಾಡುಗಳ ಉದ್ಯೋಗಾಕಾಂಕ್ಷಿಗಳನ್ನು ತನ್ನತ್ತ ಸೆಳೆಯುತ್ತಿದೆ. ಈ ರೀತಿಯಾಗಿ ಜಿಲ್ಲೆಯ ಮೀನುಗಾರಿಕಾ ಕ್ಷೇತ್ರದ ಬೆಳವಣಿಗೆಗೆ ಸಂಬಂಧಿಸಿದಂತೆ 'ಅಮಿತಾ ಜೂಲಿಯನ್ ಸಂಸ್ಥೆ' ತನ್ನ ಮಹತ್ತರ ಕೊಡುಗೆಯನ್ನು ನೀಡಿದೆ.

## ಕೆಲ್‌ಟೆಕ್ ಎನರ್ಜಿ ಪ್ರೈವೇಟ್ ಲಿಮಿಟೆಡ್

ಕಾರ್ಕಳ-ಹೆಬ್ರಿ ಮಾರ್ಗದಲ್ಲಿರುವ ವರಂಗದಲ್ಲಿ ೧೯೮೦ರಲ್ಲಿ ಈ ಉದ್ಯಮ ಪ್ರಾರಂಭವಾಯಿತು. ಚೌಗುಲೆ ಸಂಸ್ಥೆಯ ಪ್ರಾಯೋಜಕತ್ವದಲ್ಲಿ ಆರಂಭವಾದ ಈ ಕಂಪನಿಯಲ್ಲಿ ಸಹಭಾಗಿತ್ವವು ಕೂಡ ಇದೆ. ಅಮೇರಿಕದ ಡ್ಯೋಪ್‌ಚಿಟ್ ಕಂಪನಿ ಈ ಉದ್ಯಮಕ್ಕೆ ತಾಂತ್ರಿಕ ಸಹಕಾರವನ್ನು ಒದಗಿಸಿದೆ. ಸಾಂಪ್ರದಾಯಿಕ ಸ್ಫೋಟಕಗಳಿಂದ ಭಿನ್ನವಾಗಿರುವ ಸ್ಫೋಟಕಗಳನ್ನು ಇಲ್ಲಿ ಉತ್ಪಾದಿಸಲಾಗುತ್ತದೆ. ರೂ. ೫೦೦ ಲಕ್ಷಗಳಷ್ಟು ಬಂಡವಾಳ ಹೂಡಿರುವ ಈ ಉದ್ಯಮದಲ್ಲಿ ೮೫ ಜನರಿಗೆ ಉದ್ಯೋಗ ಒದಗಿಸಲಾಗಿದೆ.

## ಸುಬೋಸಕಾ ಎ.ಐ.ವಿ. ಕಂಪನಿ

ಸುಬೋಸಕಾ ಎನ್ನುವುದು ಜಪಾನ್ ದೇಶದಲ್ಲಿರುವ ಒಂದು ಊರಿನ ಹೆಸರು. ಇಲ್ಲಿ ಹೆಸರಾಂತ ಬುದ್ಧ ದೇವಾಲಯವಿದೆ. ಈ ದೇವಾಲಯದ ಆಡಳಿತ ನಡೆಸುವ ಸಂಸ್ಥೆ ಬೌದ್ಧ ವಿಹಾರಗಳ ರಚನೆಗೆ ಅಗತ್ಯವಿರುವ ಶಿಲಾ ಹಲಗೆ, ಶಿಲಾ ವಿಗ್ರಹ ಇತ್ಯಾದಿಗಳ ಉತ್ಪಾದನೆ ಮಾಡಲು ಉದ್ಯಮ ಆರಂಭ ಮಾಡಿತು. ಆ ಸಂಸ್ಥೆಯೇ ಜಪಾನ ದೇಶದ ಫೊನಿಹ ಎ.ಐ.ವಿ. ಕಂಪನಿ. ಜಪಾನ್ ದೇಶದ ಫೊನಿಹ ಎ.ಐ.ವಿ. ಕಂಪನಿಯ ಅಧೀನ ಕಂಪನಿಯಾಗಿ ೧೯೯೬ರಲ್ಲಿ ಸುಬೋಸಕಾ ಎ. ಐ. ವಿ. ಕಂಪನಿ ಕಾರ್ಕಳದ ಸಮೀಪ ಉತ್ಪಾದನೆ ಆರಂಭಿಸಿದೆ. ಸುಮಾರು ೨೪೭ ಲಕ್ಷ ರೂಪಾಯಿ ಬಂಡವಾಳ ಹೂಡಿರುವ ಈ ಉದ್ಯಮದಲ್ಲಿ ಮೂವತ್ನಾಲ್ಕು ಜನ ಉದ್ಯೋಗಿಗಳಿದ್ದಾರೆ. ಕಾರ್ಕಳದ ಸುತ್ತಮುತ್ತ ಇರುವ ಶಿಲಾ ಸಮೂಹ ಈ ಉದ್ಯಮದಲ್ಲಿ ಬಳಕೆಯಾಗುವ ಮೂಲಸಾಮಗ್ರಿ. ಈ ಶಿಲೆಯಿಂದ ದೇವಸ್ಥಾನಗಳು-ಗುಮ್ಮಟಗಳಲ್ಲಿ ಉಪಯೋಗಿಸುವ ಶಿಲಾ ಚಪ್ಪಡಿ ಹಾಗೂ ವಿಗ್ರಹಗಳನ್ನು ಇಲ್ಲಿ ತಯಾರಿಸಲಾಗುತ್ತದೆ.

## ಬೆಸ್ಟ್ ಸೆಲ್ಲರ್ಸ್, ಬಾಜಲ್ ಸ್ಟ್ರೀಟ್, ಮಣಿಪಾಲ್

ಜಿಲ್ಲೆಯ ಕೈಗಾರಿಕಾ ರಂಗಕ್ಕೆ ಮಣಿಪಾಲದ 'ಪೈ' ಸಮೂಹಗಳ ಮತ್ತೊಂದು ಕೊಡುಗೆ ಬೆಸ್ಟ್ ಸೆಲ್ಲರ್ಸ್. ಮಣಿಪಾಲದ ಹೃದಯ ಭಾಗದ ಬಾಜಲ್ ಸ್ಟ್ರೀಟ್‌ನಲ್ಲಿರುವ ಈ ಸಿದ್ಧ ಉಡುಪುಗಳ ತಯಾರಿಕಾ ಕಂಪನಿಯಲ್ಲಿ ಪ್ರಸ್ತುತ ೯೦೦ಕ್ಕಿಂತಲೂ ಅಧಿಕ ಮಹಿಳೆಯರು ದುಡಿಯುತ್ತಿದ್ದಾರೆ. ಈ ಸಂಸ್ಥೆಯಲ್ಲಿ ರೂ. ೧೫೦೦ ಲಕ್ಷ ಬಂಡವಾಳ ತೊಡಗಿಸಲಾಗಿದೆ. ಸ್ಥಳೀಯ ಜನತೆಗೆ ಶೇಕಡಾ ೧೦೦ರಷ್ಟು ಉದ್ಯೋಗ ನೀಡುತ್ತಿರುವುದು ಈ ಕಂಪನಿಯ ವಿಶೇಷತೆ. ಈ ಮೂಲಕ ಮಣಿಪಾಲದ ಸುತ್ತಮುತ್ತಲಿನ ಸುಮಾರು ೧೦ಕಿ.ಮೀ. ವ್ಯಾಪ್ತಿಯ ಕುಟುಂಬಕ್ಕೆ ಇದು ಜೀವನಾಧಾರವಾಗಿದೆ. ೨೦೦೦ನೇ ಇಸವಿಯಲ್ಲಿ ಪ್ರಾರಂಭವಾದ ಈ ಸಂಸ್ಥೆ 'ಸಿದ್ಧ ಉಡುಪು'ಗಳನ್ನು ತಯಾರಿಸುತ್ತಿದ್ದು, ಸಂಪೂರ್ಣವಾಗಿ ಹೊರದೇಶಗಳಿಗೆ ತನ್ನ ಉತ್ಪನ್ನಗಳನ್ನು ರಫ್ತು ಮಾಡುತ್ತಿದೆ. ಅಧಿಕೃತ ರೀತಿಯಲ್ಲಿ ಸ್ಥಳೀಯವಾಗಿ ಈ ಉತ್ಪನ್ನಗಳು ಮಾರುಕಟ್ಟೆಯನ್ನು ಹೊಂದಿಲ್ಲ. ಅವಿಭಜಿತ ಜಿಲ್ಲೆಯಲ್ಲಿ ಸಿದ್ಧ ಉಡುಪುಗಳ ಯಾವುದೇ ಕಾರ್ಖಾನೆಗಳಿಲ್ಲದ ಸಂದರ್ಭವನ್ನು ಅರಿತು ಸ್ಥಳೀಯವಾಗಿ ಉದ್ಯೋಗವನ್ನು ಕಲ್ಪಿಸಲು ಈ ಸಂಸ್ಥೆಯನ್ನು ಪ್ರಾರಂಭಿಸಲಾಯಿತು. ಅಲ್ಲದೇ ಈ ಸಂಸ್ಥೆಯು ಸ್ಥಳೀಯವಾಗಿ ಉದ್ಯೋಗವನ್ನು ಕಲ್ಪಿಸಿಕೊಡುವುದರೊಟ್ಟಿಗೆ ವಿದ್ಯೆ ಹಾಗೂ ಜ್ಞಾನವನ್ನು ನೀಡುತ್ತದೆ.

ಸ್ಥಳೀಯ ವ್ಯಕ್ತಿಗಳಿಗೆ ಈ ಸಂಸ್ಥೆಯೇ ತರಬೇತಿಗಳನ್ನು ಪ್ರಾಯೋಜಿಸಿ ನಂತರದ ದಿನಗಳಲ್ಲಿ ಅವರನ್ನು ಸಂಸ್ಥೆಗೆ ನೇಮಕಮಾಡಿಕೊಳ್ಳುವ ಮುಖಾಂತರ ಸಿದ್ಧ ಉಡುಪುಗಳ ತಯಾರಿಕೆಯಲ್ಲಿ ಗುಣಮಟ್ಟವನ್ನು ಹಾಗೂ ದಕ್ಷತೆಯನ್ನು ಕಾಯ್ದುಕೊಂಡಿದೆ. ತನ್ನ ಸಿದ್ಧ ಉಡುಪುಗಳಿಗೆ ಅಂತರರಾಷ್ಟ್ರೀಯ ಮಾರುಕಟ್ಟೆಗಳನ್ನೇ ಆಯ್ದುಕೊಂಡ ಈ ಕೈಗಾರಿಕಾ ಸಂಸ್ಥೆ ಇಂದು ಇಂಗ್ಲೆಂಡ್, ಜರ್ಮನ್, ಇಟಲಿ ಹಾಗೂ ಅಮೇರಿಕಾ

ದೇಶಗಳಿಗೆ ರಫ್ತು ಮಾಡುತ್ತಿದೆ. ಬೇಕಾದಂತಹ ಕಚ್ಚಾ ಸಾಮಗ್ರಿಗಳನ್ನು ಆಂತರಿಕವಾಗಿ ಅಂದರೆ ಬೊಂಬಾಯಿ ಹಾಗೂ ಬೆಂಗಳೂರಿನಿಂದ ತರಿಸಿಕೊಳ್ಳುವ ಈ ಸಂಸ್ಥೆ ಪ್ರಸ್ತುತ ೧೫ ರಿಂದ ೨೦ ಕೋಟಿ ರೂ. ವಾರ್ಷಿಕ ವಹಿವಾಟನ್ನು ನಡೆಸುತ್ತಿದೆ. ಈ ಸಂಸ್ಥೆ ಇಂದು ಬೃಹದಾಕಾರವಾಗಿ ಬೆಳೆದು ಲಾಭದತ್ತ ಮುನ್ನುಗುತ್ತಿದೆ. ತನ್ಮೂಲಕ ಸಿದ್ಧ ಉಡುಪುಗಳ ತಯಾರಿಕೆಯಲ್ಲಿ ಸ್ಪರ್ಧಾತ್ಮಕವಾಗಿ ಜಿಲ್ಲೆಯನ್ನು ಉನ್ನತ ಮಟ್ಟಕ್ಕೆ ಕೊಂಡು ಹೋದ ಕೀರ್ತಿ ಈ ಸಂಸ್ಥೆಗೆ ಸಲ್ಲುತ್ತದೆ.

## ಮಾಹಿತಿ ತಂತ್ರಜ್ಞಾನ ಆಧಾರಿತ ಕೈಗಾರಿಕೆಗಳು

ಶೈಕ್ಷಣಿಕ ಕ್ಷೇತ್ರದಲ್ಲಿ ಉತ್ತಮ ಸಾಧನೆ ಮಾಡಿರುವ ಉಡುಪಿ ಜಿಲ್ಲೆಯಲ್ಲಿ ಶ್ರೀಮಂತ ಮಾನವ ಸಂಪನ್ಮೂಲವಿದೆ. ಜಿಲ್ಲೆಯ ಉದ್ಯಮಶೀಲ ಜನರಿಗೆ ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ಅವಕಾಶಗಳು ಒದಗಿಬರುತ್ತಿವೆ. ಬೌದ್ಧಿಕ ಬಂಡವಾಳವನ್ನು ಬಯಸುವ ಮಾಹಿತಿ ತಂತ್ರಜ್ಞಾನ ಆಧಾರಿತ ಉದ್ಯಮಗಳು ಕಾರ್ಯಾರಂಭ ಮಾಡಿರುವುದನ್ನು ಕಾಣಬಹುದು. ಈಗಾಗಲೇ ನಾಲ್ಕು ಉದ್ದಿಮೆಗಳು ಆರಂಭವಾಗಿದ್ದು ಉತ್ತಮ ರೀತಿಯಲ್ಲಿ ಬೆಳೆದು ಬಂದಿವೆ.

ಉಡುಪಿ ಜಿಲ್ಲಾ ಕೇಂದ್ರಕ್ಕೆ ಹತ್ತಿರವಿರುವ ಕಲ್ಯಾಣಪುರದಲ್ಲಿ ರೋಬೋಸಾಫ್ಟ್ ಖಾಸಗಿ ನಿಯಮಿತ ಕಂಪನಿ ೧೯೯೬ರಲ್ಲಿ ರೋಹಿತ್ ಭಟ್ ಎನ್ನುವ ಯುವ ಉದ್ಯಮಿಯೊಬ್ಬರಿಂದ ಆರಂಭವಾಗಿದೆ. ೩೧-೦೩-೨೦೦೭ರ ಅಂತ್ಯಕ್ಕೆ ಈ ಉದ್ದಿಮೆಯು ಸುಮಾರು ೧೫ ಕೋಟಿ ರೂಪಾಯಿ ಬಂಡವಾಳ ಹೂಡಿದ್ದು, ವಾರ್ಷಿಕ ೧೨ ಕೋಟಿ ರೂಪಾಯಿಯ ವಹಿವಾಟು ನಡೆಸಿದೆ. ಸದ್ಯ ಕಂಪನಿಯಲ್ಲಿ ೪೦೦ ಉದ್ಯೋಗಿಗಳಿದ್ದು, ೨೦೦೭ರ ವರ್ಷಾಂತ್ಯಕ್ಕೆ ಇನ್ನೂ ೪೦೦ಕ್ಕೂ ಹೆಚ್ಚಿನ ಉದ್ಯೋಗ ಸೃಷ್ಟಿಸುವ ಗುರಿ ಹೊಂದಿದೆ.

ಕಂಪನಿಯ ಪ್ರಮುಖ ಉತ್ಪನ್ನ 'ಭೌದ್ಧಿಕ ಆಸ್ತಿಯ' ರೂಪದಲ್ಲಿದ್ದು, ಕಂಪ್ಯೂಟರ್ ಕಾರ್ಯನಿರ್ವಹಣೆಯಲ್ಲಿ ಉಪಯೋಗಿಸುವ ಸಾಫ್ಟ್‌ವೇರ್ ಪ್ರಮುಖವಾಗಿ 'ವಿಂಡೋಸ್' ಮತ್ತು 'ಮ್ಯಾಕ್' ಆಪರೇಟಿಂಗ್ ಸಿಸ್ಟಂಗಳಲ್ಲಿ ಬಳಕೆಗೆ ಬರುವ 'ಪ್ಲಾಟ್‌ಫಾರಂ'ಗಳನ್ನು ಉದ್ದಿಮೆಯು ಅಭಿವೃದ್ಧಿಪಡಿಸುತ್ತಿದೆ. ಈ ಉದ್ದಿಮೆ ಉತ್ಪಾದಿಸುವ ಮತ್ತು ಅಭಿವೃದ್ಧಿಪಡಿಸಿದ ಉತ್ಪನ್ನದ ಕಾರಣದಿಂದ 'ವಿಂಡೋಸ್' ಹಾಗೂ 'ಮ್ಯಾಕ್' ಆಪರೇಟಿಂಗ್ ಸಿಸ್ಟಂಗಳ ಕಾರ್ಯದಕ್ಷತೆ ಮತ್ತು ಅನ್ವಯಿಕತೆಯಲ್ಲಿ ಉತ್ತಮ ಪ್ರಗತಿಯುಂಟಾಗುತ್ತದೆ. ಅನ್ವಯಿಕತೆ ಮತ್ತು ಕಾರ್ಯದಕ್ಷತೆಯನ್ನು ಸರಿಯಾದ ದಿಸೆಯಲ್ಲಿ ಮತ್ತು ಪ್ರಮಾಣದಲ್ಲಿ ಅಂದಾಜಿಸುವ ಮೂಲಕ ಮತ್ತು ಗ್ರಾಹಕರ ಅನುಕೂಲಕ್ಕೆ ತಕ್ಕ ರೀತಿಯಲ್ಲಿ ಈ ಕೆಲಸವನ್ನು ನಿರ್ವಹಿಸಿದ್ದರ ಕಾರಣದಿಂದ ಸಂಸ್ಥೆಯು ತ್ವರಿತಗತಿಯಲ್ಲಿ ಬೆಳೆಯುತ್ತಿದೆ. ಗ್ರಾಹಕರು ಈ ಉತ್ಪನ್ನಗಳನ್ನು ತಮ್ಮ ಕಾರ್ಯ ವ್ಯವಸ್ಥೆಯಲ್ಲಿ ಅಳವಡಿಸಿಕೊಂಡ ನಂತರ ಕಾಲದಿಂದ ಕಾಲಕ್ಕೆ ಉತ್ಪನ್ನವನ್ನು ಗ್ರಾಹಕರ ಸಂಸ್ಥೆಯೊಳಗಿನ ಆಂತರಿಕ ಅಗತ್ಯಗಳಿಗೆ ಸರಿಹೊಂದುವ ರೀತಿಯಲ್ಲಿ ಮೇಲ್ದರ್ಜೆಗೆ ಏರಿಸಿಕೊಡುವುದು, ಕಾರ್ಯ ನಿರ್ವಹಣೆಯಲ್ಲಿ ಏನಾದರೂ ವ್ಯತ್ಯಯಗಳುಂಟಾದಾಗ ಸಮಸ್ಯೆಗಳನ್ನು ಪರಿಹರಿಸಿಕೊಡುವುದು, ತಾಂತ್ರಿಕ ನೈಪುಣ್ಯಗಳಿಸುವ ದಿಸೆಯಲ್ಲಿ ಸೂಕ್ತ ತರಬೇತಿ ನೀಡುವುದು ಮುಂತಾದ ವಿಶಿಷ್ಟ ಸೇವೆಗಳನ್ನು ಗ್ರಾಹಕರಿಗೆ ನೀಡಿರುವ ಕಾರಣದಿಂದ ರೋಬೋಸಾಫ್ಟ್ ತಂತ್ರಜ್ಞಾನ ಉದ್ಯಮ ವಲಯದಲ್ಲಿ ಬಹುಬೇಗ ಬೇರೂರಲು ಸಾಧ್ಯವಾಗಿದೆ. ಇದುವರೆಗೂ ಈ ಸಂಸ್ಥೆ ಸುಮಾರು ನೂರು ಉತ್ಪನ್ನಗಳನ್ನು ಅಭಿವೃದ್ಧಿಪಡಿಸಿ ವಿಶ್ವದಾದ್ಯಂತ ೨೮ ಉದ್ದಿಮೆಗಳಿಗೆ ಪೂರೈಸಿದೆ.

ಸಂಶೋಧನಾತ್ಮಕ ದೃಷ್ಟಿಯಿಂದ ಅಭಿವೃದ್ಧಿಪಡಿಸಲಾದ ಉತ್ಪನ್ನಗಳು, ನವೀನ ಮಾದರಿಯಲ್ಲಿದ್ದು, ತಾಂತ್ರಿಕ ಪ್ರಾವಿಣ್ಯ, ಮಾರುಕಟ್ಟೆ ನಿರ್ವಹಣಾ ಚಾತುರ್ಯದಿಂದಾಗಿ ಎಲ್ಲರ ಗಮನ ಸೆಳೆದಿದೆ. ತ್ವರಿತಗತಿಯಲ್ಲಿ ಕಾರ್ಯನಿರ್ವಹಿಸಬಲ್ಲ ಅಂತರ್ಜಾಲ ವ್ಯವಸ್ಥೆ, ತಂತ್ರಜ್ಞಾನ ವಲಯದಲ್ಲಿ ಉತ್ಕೃಷ್ಟ ಗುಣಮಟ್ಟದ ಮಾನವ ಸಂಪನ್ಮೂಲ, ಆಡಳಿತ ವರ್ಗದ ಉದ್ಯಮಶೀಲ ಮನೋಧರ್ಮದ ಫಲವಾಗಿ ರೋಬೋಸಾಫ್ಟ್ ಪ್ರಮುಖ ಉದ್ದಿಮೆಯಾಗಿ ಗುರುತಿಸಲ್ಪಟ್ಟಿದೆ. ಈ ಉದ್ದಿಮೆಯು ತಂತ್ರಜ್ಞಾನ ಜಗತ್ತಿನಲ್ಲಿ ಹೆಸರುವಾಸಿಯಾಗಿರುವ

Adobe Solution Network, Apple Premier Developer Program ಮತ್ತು MSDN Professional Network ನಂತಹ ಸಂಸ್ಥೆಗಳೊಂದಿಗೆ ಸಂಯೋಜನೆ ಹೊಂದಿದೆ.

ಮಣಿಪಾಲ ಮಾಹಿತಿ ತಂತ್ರಜ್ಞಾನ, ತಲಾಶ್ ಟೆಕ್ನಾಲಜಿ, ಝೀಟಾ ಸೈಬರ್ ಸಲ್ಯುಷನ್ಸ್ ಮಣಿಪಾಲ್ ಡಾಟ್‌ನೆಟ್, ಪ್ರೈ. ಲಿಮಿಟೆಡ್ ಎನ್ನುವ ಉದ್ದಿಮೆಗಳೂ ಮಾಹಿತಿ ತಂತ್ರಜ್ಞಾನ ಆಧಾರಿತ ಉದ್ದಿಮೆಗಳಾಗಿದ್ದು, ಮುಂದಿನ ದಿನಗಳಲ್ಲಿ ದೊಡ್ಡಪ್ರಮಾಣದಲ್ಲಿ ಬೆಳೆಯುವ ನಿರೀಕ್ಷೆ ಇದೆ. ಜಿಲ್ಲೆಯಲ್ಲಿನ ಮಾಹಿತಿ ತಂತ್ರಜ್ಞಾನ ಸಂಸ್ಥೆಗಳು ನಡೆಸಿದ ರಫ್ತು ವಹಿವಾಟಿನ ವಿವರಗಳು ಈ ಕೆಳಗಿನಂತಿದೆ.

| ಆರ್ಥಿಕ ವರ್ಷ | ಸಂಸ್ಥೆಯ ಹೆಸರು | ರಫ್ತು ವಹಿವಾಟು (ಲಕ್ಷರೂ.ಗಳಲ್ಲಿ) |
|---|---|---|
| ೨೦೦೬–೦೭ | ೧. ರೋಬೋಸಾಫ್ಟ್ ಟೆಕ್ನಾಲಜೀಸ್ | ೧೧೮೯.೧೦ |
| ೨೦೦೦–೦೧ | ೨. ಮಣಿಪಾಲ ಡಾಟ್‌ನೆಟ್ | ೮೩.೯೮ |
| ೨೦೦೦ | ೩. ಝೀಟಾ ಸೈಬರ್ ಸಲ್ಯೂಷನ್ಸ್ | ೧೫೧.೩೭ |
| ೨೦೦೦ | ೪. ಮಣಿಪಾಲ ಮಾಹಿತಿ ತಂತ್ರಜ್ಞಾನ ಸಂಸ್ಥೆ | ೪೮೯.೪೮ |

## ರಫ್ತು ಆಧಾರಿತ ಉದ್ಯಮ

ಜಿಲ್ಲೆಯಲ್ಲಿ ವ್ಯವಹಾರ ನಡೆಸುತ್ತಿರುವ ಬಹಳಷ್ಟು ಉದ್ದಿಮೆಗಳು ತಮ್ಮ ಉತ್ಪನ್ನಗಳನ್ನು ವಿದೇಶಗಳಿಗೆ ರಫ್ತು ಮಾಡುವ ಮೂಲಕ ಅಮೂಲ್ಯವಾದ ವಿದೇಶಿ ವಿನಿಮಯ ಗಳಿಸಿ, ಜಿಲ್ಲೆಯ ಆರ್ಥಿಕ ಬೆಳವಣಿಗೆಗೆ ಸಹಕಾರಿಯಾಗಿದೆ. ಇಲ್ಲಿಯ ಉದ್ದಿಮೆಗಳು ತಯಾರಿಸಿದ ಉತ್ಪನ್ನ ಮತ್ತು ಅವುಗಳನ್ನು ರಫ್ತು ಮಾಡಲಾದ ವಿದೇಶಿ ಮಾರುಕಟ್ಟೆಯ ಬಗೆಗಿನ ವಿವರಗಳು ಕೋಷ್ಟಕ ೫.೧೦ರಲ್ಲಿ ನೀಡಿದೆ.

**ಕೋಷ್ಟಕ ೫.೧೦**

| ಉದ್ದಿಮೆಯ ಹೆಸರು | ಉತ್ಪನ್ನ | ರಫ್ತು ಮಾಡಲಾದ ವಿದೇಶದ ಹೆಸರುಗಳು |
|---|---|---|
| **ಬೆಲ್–ಓ–ಸೀಲ್ಸ್, ಉಡುಪಿ** | ಪೈಪು ವಾಲ್ವ್ | ಇಂಡೋನೇಶಿಯಾ, ಮಲೇಶಿಯಾ, ದಕ್ಷಿಣ ಆಫ್ರಿಕಾ, ತೈವಾನ್, ಜಪಾನ್, ಇಟಲಿ, ಥೈಲ್ಯಾಂಡ್, ಅರಬ್ ರಾಷ್ಟ್ರಗಳು |
| **ಬಾಳಿಗಾ ಎಕ್ಸ್‌ಪೋರ್ಟ್ ಪ್ರೈ ಲಿ., ಉಡುಪಿ** | ನೈಲಾನ್‌ಫಿಶನೆಟ್ಸ್ | ಅರಬ್ ರಾಷ್ಟ್ರಗಳು |
| **ಮಹಾಲಸಾ ಎಕ್ಸ್‌ಪೋರ್ಟ್ಸ್, ಹಿರಿಯಡ್ಕ, ಉಡುಪಿ** | ಗೇರುಬೀಜ | ಜಪಾನ್, ಬ್ರಿಟನ್, ಅಮೇರಿಕಾ, ಗ್ರೀಸ್, ರೋಟರ್ ಡ್ಯಾಂ, |
| **ಝೀಟಾ ಸೈಬರ್ ಸೊಲ್ಯೂಷನ್ ಪ್ರೈ. ಲಿ., ಮಣಿಪಾಲ** | ಸಾಫ್ಟ್‌ವೇರ್ ಡೆವಲಪ್‌ಮೆಂಟ್ | ಅಮೇರಿಕಾ (USA), ಬ್ರಿಟನ್ (UK) |
| **ಸಿಂಧು ಪ್ಲಾಸ್ಟಿಕ್ಸ್, ಮಣಿಪಾಲ** | ಪಿ.ವಿ.ಸಿ. ಫ್ಲೆಕ್ಸಿಬಲ್ | ಶ್ರೀಲಂಕಾ, ಮಧ್ಯಪೂರ್ವ ಸಕ್ಷನ್ ಪೈಪ್ ದೇಶಗಳು |
| **ಶ್ರೀ ವಿನಾಯಕ ಕ್ಯಾಶ್ಯೂ ಎಕ್ಸ್‌ಪೋರ್ಟ್, ಕಾರ್ಕಳ** | ಗೇರುಬೀಜ | ಜಪಾನ್, ಇಂಗ್ಲೆಂಡ್, ಅಮೇರಿಕಾ, ಕೆನಡಾ, ಆಸ್ಟ್ರೇಲಿಯಾ |
| **ಬೋಳ ರಾಘವೇಂದ್ರ ಕಾಮತ್ ಮತ್ತು ಮಕ್ಕಳು** ಕಾರ್ಕಳ | ಗೇರುಬೀಜ, ಗೇರುಎಣ್ಣೆ | ಜಪಾನ್, ಇಂಗ್ಲೆಂಡ್, ಅಮೇರಿಕಾ, ದಕ್ಷಿಣ, ಆಫ್ರಿಕಾ, ಕೆನಡಾ, ವೆಸ್ಟ್‌ಇಂಡೀಸ್, ಕೆನ್ಯಾ, |

| ಉದ್ದಿಮೆಯ ಹೆಸರು | ಉತ್ಪನ್ನ | ರಫ್ತು ಮಾಡಲಾದ ವಿದೇಶದ ಹೆಸರುಗಳು |
|---|---|---|
| **ಮೆ. ಗಾಯತ್ರಿ ಎಕ್ಸ್‌ಪೋರ್ಟ್ಸ್, ಕಾರ್ಕಳ** | ಗೇರುಬೀಜ | ಜಪಾನ್, ಇಂಗ್ಲೆಂಡ್, ಯು.ಎಸ್.ಎ |
| **ಮೆ. ಸಾಣಾರು ಕ್ಯಾಶ್ಯೂಸ್, ಕಾರ್ಕಳ** | ಗೇರುಬೀಜ | ಜಪಾನ್, ಇಂಗ್ಲೆಂಡ್ |
| **ಮೆ. ಲಾಮಿನಾ ಫೌಂಡ್ರೀಸ್, ನಿಟ್ಟೆ, ಕಾರ್ಕಳ** | ಮೋಟಾರು ವಾಹನದ ಬ್ರೇಕ್, ಡ್ರಮ್ಸ್,ಎಲೆಕ್ಟ್ರೀಕಲ್ ಮೋಟಾರ್ ಬಾಡಿ | ಜರ್ಮನಿ |
| **ಮೆ. ಸುಬೋಸಕಾ ಎ.ಐ.ವಿ ಕಾರ್ಕಳ** | ಗ್ರಾನೈಟ್ ಹಲಗೆ | ಜಪಾನ್ |
| **ಜಯಲಕ್ಷ್ಮೀ ಎಕ್ಸ್‌ಪೋರ್ಟ್ಸ್, ಕಾರ್ಕಳ** | ಗೇರುಬೀಜ | ಅಮೇರಿಕಾ |
| **ಮಹಮಾಯ ಎಕ್ಸ್‌ಪೋರ್ಟ್ಸ್, ಕುಕ್ಕುಂದೂರು, ಕಾರ್ಕಳ** | ಗೇರುಬೀಜ | ಜಪಾನ್, ಇಂಗ್ಲೆಂಡ್, ಯು.ಎಸ್.ಎ. |
| **ಸೌರಭ್ ಓವರ್‌ಸೀಸ್ ಟ್ರೇಡರ್ಸ್, ಕುಂದಾಪುರ,** | ಸಿದ್ಧ ಉಡುಪು | ಮಧ್ಯ ಪ್ರಾಚ್ಯ ದೇಶಗಳು |
| **ಗಜಾನನ ಕ್ಯಾಶ್ಯೂ ಇಂಡಸ್ಟ್ರೀಸ್, ಹೆಬ್ರಿ, ಕಾರ್ಕಳ** | ಗೇರುಬೀಜ | ಜಪಾನ್, ಇಂಗ್ಲೆಂಡ್, ಯು.ಎಸ್.ಎ. |
| **ಭಂಡಾರಿ ಪವರ್ ಲೈನ್ಸ್ ಪ್ರೈ. ಲಿ. ಮಣಿಪಾಲ** | ವಿದ್ಯುತ್ ವಾಹಕಗಳು | ಮಧ್ಯ ಪ್ರಾಚ್ಯ |
| **ಚಿತ್ರಾ ಕ್ಯಾಶ್ಯೂಸ್, ಮಂದರ್ತಿ, ಉಡುಪಿ** | ಗೇರುಬೀಜ | ಇಂಗ್ಲೆಂಡ್, ಅಮೇರಿಕಾ |
| **ಜೂಲಿಯಾನಾ ಫಿಶ್‌ನೆಟ್ ಲಿ. ಮಣಿಪಾಲ** | ಫಿಶ್‌ನೆಟ್ | ಮಧ್ಯ ಪ್ರಾಚ್ಯ |
| **ಮಣಿಪಾಲ ಇನ್‌ಫಾರ್ಮೆಟರ್ಸ್, ಮಣಿಪಾಲ,** | ಹೊರಗುತ್ತಿಗೆ ಕೇಂದ್ರ | ಯು.ಎಸ್.ಎ. |
| **ಝೀಟಾ ಇನ್‌ಫೋಟೆಕ್ ಮಣಿಪಾಲ** | ಸಾಫ್ಟ್‌ವೇರ್ ಅಭಿವೃದ್ಧಿ | ಯು.ಎಸ್.ಎ. |
| **ರೋಬೊಸಾಫ್ಟ್ ಟೆಕ್ನಾಲಜಿ ಮತ್ತು ತಲಾಶ್ ಟೆಕ್ನಾಲಜಿ, ಉಡುಪಿ** | ಸಾಫ್ಟ್‌ವೇರ್ ಅಭಿವೃದ್ಧಿ | ಯು.ಎಸ್.ಎ. |
| **ಸುರೇಂದ್ರ ಕಾಮತ್ ಎಂಡ್ ಬ್ರದರ್ಸ್ ಕೆದಿಂಜೆ, ಕಾರ್ಕಳ** | ಗೇರುಬೀಜ | ಯು.ಎಸ್.ಎ., ಇಂಗ್ಲೆಂಡ್, ಮಧ್ಯಪ್ರಾಚ್ಯ, ಜಪಾನ್, ಕೆನಡಾ, ದಕ್ಷಿಣ ಆಫ್ರಿಕಾ |

ಜಿಲ್ಲೆಯ ಬಹಳಷ್ಟು ಜನ ಮಧ್ಯಪ್ರಾಚ್ಯ ದೇಶಗಳಲ್ಲಿ ದುಡಿಯುತ್ತಿರುವುದರಿಂದ ಇಲ್ಲಿಂದ ಆಹಾರ ಪದಾರ್ಥ, ದಿನಬಳಕೆ ವಸ್ತು, ಉಡುಪಿ–ಮಲ್ಲಿಗೆ ಇತ್ಯಾದಿ ವಸ್ತುಗಳು ಅಲ್ಲಿನ ಮಾರುಕಟ್ಟೆಗೆ ವಿವಿಧ ರೂಪದಲ್ಲಿ ಸರಬರಾಜು ಆಗುತ್ತಿವೆ.

## ಅತೀ ಸಣ್ಣ ಮತ್ತು ಸಣ್ಣ ಪ್ರಮಾಣದ ಕೈಗಾರಿಕೆಗಳು

ಸ್ಥಾವರ ಮತ್ತು ಯಂತ್ರೋಪಕರಣಗಳಲ್ಲಿ ರೂ. ೨೫ ಲಕ್ಷಗಳಿಗಿಂತ ಕಡಿಮೆ ಬಂಡವಾಳ ಹೂಡಿರುವಂತಹ ಕೈಗಾರಿಕೆಗಳಿಗೆ ಅತೀ ಸಣ್ಣ ಪ್ರಮಾಣದ ಕೈಗಾರಿಕೆ ಎಂತಲೂ, ಸ್ವಂತವಾಗಿ ಅಥವಾ ಲೀಸ್‌ನ ಮೇಲೆ ಅಥವಾ ಹೈರ್‌ಪರ್ಚೇಸ್ ಷರತ್ತಿನಲ್ಲಿ ಹೊಂದಿರುವ ಸ್ಥಾವರ ಮತ್ತು ಯಂತ್ರೋಪಕರಣಗಳಲ್ಲಿ ರೂ. ೧೦೦ ಲಕ್ಷಗಳಿಗಿಂತ ಕಡಿಮೆ ಬಂಡವಾಳ ಹೂಡಿರುವಂತಹ ಕೈಗಾರಿಕೆಗೆ ಸಣ್ಣ ಪ್ರಮಾಣದ ಕೈಗಾರಿಕೆ ಎಂತಲೂ ಕರೆಯಲಾಗುತ್ತದೆ.

ಜಿಲ್ಲೆಯಲ್ಲಿ ಸಣ್ಣ ಮತ್ತು ಅತಿ ಸಣ್ಣ ಪ್ರಮಾಣದ ಉದ್ಯಮಗಳು ಅತ್ಯಂತ ಮಹತ್ವದ ಪಾತ್ರ ವಹಿಸಿರುವುದು ಅಂಕಿ ಅಂಶಗಳಿಂದ ತಿಳಿದು ಬರುತ್ತದೆ. ಜಿಲ್ಲೆಯಲ್ಲಿ ೭,೧೮೩ ಅತೀ ಸಣ್ಣ ಹಾಗೂ ಸಣ್ಣ ಪ್ರಮಾಣದ ಉದ್ದಿಮೆಗಳಿದ್ದು, ೪೪,೦೭೬ ಜನರಿಗೆ ಉದ್ಯೋಗಾವಕಾಶ ಕಲ್ಪಿಸಿವೆ. ಸುಮಾರು ೩೧೨ ಕೋಟಿ ರೂಪಾಯಿ ಬಂಡವಾಳ ತೊಡಗಿಸಿರುವ ಈ ಉದ್ದಿಮೆಗಳಲ್ಲಿ ಬಹುಪಾಲು ಉದ್ದಿಮೆಗಳು ನೇರ ಅನುಭೋಗಕ್ಕೆ ಸಂಬಂಧಿಸಿದ ಚಟುವಟಿಕೆಯಲ್ಲಿ ತೊಡಗಿರುವುದು ಕಂಡುಬರುತ್ತದೆ. ಕೈಗಾರಿಕಾ ಕ್ಷೇತ್ರಕ್ಕೆ ವಸ್ತುಗಳನ್ನು ಸರಬರಾಜು ಮಾಡುವಂತಹ ಉದ್ದಿಮೆಗಳು ತುಂಬ ಕಡಿಮೆ ಸಂಖ್ಯೆಯಲ್ಲಿ ಕಂಡುಬರುತ್ತಿವೆ. ಜಿಲ್ಲೆಯ ಸಾಕಷ್ಟು ಕಾರ್ಮಿಕರು, ಕುಶಲಕರ್ಮಿಗಳು, ವೃತ್ತಿನಿರತರು ದೇಶದ ಹಾಗೂ ವಿದೇಶದ ಬೇರೆ ಬೇರೆ ಕಡೆ ವಲಸೆ ಹೋಗಿದ್ದಾರೆ. ವಲಸೆ ಹೋಗಿರುವ ಜನ ಊರಿನಲ್ಲಿರುವ ಕುಟುಂಬಗಳಿಗೆ ಆರ್ಥಿಕ ಸಹಾಯ ಮಾಡುತ್ತಿದ್ದು, ಸಾಕಷ್ಟು ಪ್ರಮಾಣದ ಹಣ ಹರಿದು ಬರುತ್ತಿದೆ. ಇಲ್ಲಿಯ ಅರ್ಥವ್ಯವಸ್ಥೆಯಲ್ಲಿ ಒಂದು ಪದರವನ್ನು 'ಮನಿಯಾರ್ಡರ್ ಇಕಾನಮಿ' ಎಂತಲೂ ಕರೆಯಬಹುದು. ಪರವೂರಿನಲ್ಲಿರುವ ಸದಸ್ಯರು ಊರಿನಲ್ಲಿರುವ ಕುಟುಂಬದ ಇತರ ಸದಸ್ಯರ ಜೀವನ ನಿರ್ವಹಣೆಗೆ, ವಿದ್ಯಾಭ್ಯಾಸಕ್ಕೆ, ಮನೆ ಅಂಗಡಿ ಮುಂಗಟ್ಟು ಕಟ್ಟಿಕೊಳ್ಳುವುದಕ್ಕೆ ಆರ್ಥಿಕವಾಗಿ ಸಹಾಯ ಮಾಡುವುದನ್ನು ಕಾಣಬಹುದು. ಉಡುಪಿ ತಾಲೂಕಿನ ಶಿರ್ವ, ಶಂಕರಪುರ, ಪಡುಬಿದ್ರಿ ಮತ್ತು ಕಾಪು ಮುಂತಾದ ಪ್ರದೇಶಗಳಿಂದ ಮಧ್ಯಪ್ರಾಚ್ಯಕ್ಕೆ ಬಹಳ ಜನ ವಲಸೆ ಹೋಗಿರುವುದು ತಿಳಿದುಬರುತ್ತದೆ. 'ಮನಿಯಾರ್ಡರ್ ಎಕಾನಮಿ'ಯನ್ನು ಅವಲಂಬಿಸಿದ ಜನರಲ್ಲಿ ಸಾಹಸ ಪ್ರವೃತ್ತಿ ಸಹಜವಾಗಿಯೇ ಕಡಿಮೆ ಮಟ್ಟದಲ್ಲಿರುವುದರಿಂದ ಅಂತಹವರು ಒಂದೋ ಹೊರಗಿನಿಂದ ಹರಿದುಬರುವ ಸಂಪನ್ಮೂಲವನ್ನು ಕೃಷಿಯಲ್ಲಿ ಅಥವಾ ನಿಯಮಿತ ಆದಾಯ ಖಾತ್ರಿಯಾಗಿರುವ ಅಥವಾ ಬಂಡವಾಳ ಹೂಡಿಕೆ ಖಾತರಿಯಾಗಿರುವ ಕ್ಷೇತ್ರಗಳಲ್ಲಿ ವಿನಿಯೋಗಿಸುತ್ತಾರೆ. ಪ್ರಾರಂಭಿಕ ದಿನಗಳಿಂದಲೇ ವ್ಯಾಪಾರವನ್ನು ವೃತ್ತಿಯಾಗಿಸಿಕೊಂಡಿರುವ ಜನವರ್ಗ ಪ್ರಮುಖವಾಗಿ ಗೌಡ ಸಾರಸ್ವತ ಬ್ರಾಹ್ಮಣರು, ಮುಸ್ಲಿಮರು ಮತ್ತು ಅಲ್ಪ ಪ್ರಮಾಣದಲ್ಲಿ ಇತರ ಜಾತಿಯ ಜನರು ವ್ಯಾಪಾರದ ವಿಸ್ತರಣೆಯಾಗಿ ಉತ್ಪಾದನಾ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿರುತ್ತಾರಾದರೂ ಅವು ಬೃಹತ್ ಪ್ರಮಾಣದ ಉದ್ದಿಮೆಗಳಾಗಿ ಬೆಳೆದು ಬಂದಿಲ್ಲ. ಕೆಲವೊಂದು ವಲಯದಲ್ಲಿ ಪೂರೈಕೆ ಹಾಗೂ ವಿತರಣಾ ಜಾಲದ ಕೊಂಡಿಗಳಾಗಿ ಉದ್ದಿಮೆಗಳು ಕಾರ್ಯನಿರ್ವಹಿಸುತ್ತಿವೆ. ಉದಾಹರಣೆಗೆ ಅಡಿಕೆ, ಗ್ರಾನೈಟ್ ಮುಂತಾದ ಉತ್ಪನ್ನಗಳನ್ನು ದೊಡ್ಡ ಪ್ರಮಾಣದಲ್ಲಿ ಇತರ ಉದ್ದಿಮೆಗಳಿಗೆ ಪೂರೈಸಲಾಗುತ್ತಿದೆ. ಹಾಗೆಯೇ ಬೃಹತ್ ಉದ್ದಿಮೆಗಳ ಉತ್ಪನ್ನಗಳನ್ನು ಬಳಕೆದಾರರಿಗೆ ಮಾರಾಟ ಮಾಡುವ ಚಟುವಟಿಕೆಗಳ ತಾಣವಾಗಿಯೂ ಜಿಲ್ಲೆ ಕೆಲಸ ಮಾಡುತ್ತಿದೆ. ಉದ್ಯಮಶೀಲತೆಗೆ ಅಗತ್ಯವಿರುವ ಅನಿಶ್ಚತತೆಯನ್ನು ಎದುರಿಸುವ ಛಾತಿ, ಮನೋಧರ್ಮ, ಇಲ್ಲಿಯ ಜನರಲ್ಲಿ ಕಡಿಮೆ ಎಂದು ಹೇಳಬಹುದು. ಆದರೆ ಅನಿಶ್ಚಿತತೆಯ ಬದಲಿಗೆ ನಿರಂತರ ಆದಾಯ ತರುವ ಕಡಿಮೆ ಗಂಡಾಂತರವಿರುವ, ಹೆಚ್ಚು ಶಿಸ್ತು, ಶ್ರದ್ಧೆ ಹಾಗೂ ಶ್ರಮವನ್ನು ಬಯಸುವ ವೃತ್ತಿಗಳಲ್ಲಿ ಇಲ್ಲಿಯ ಜನ ತೊಡಗಿಕೊಂಡಿರುವುದನ್ನು ಕಾಣಬಹುದು. ಹಾಗಾಗಿ ಇಲ್ಲಿ ವೈದ್ಯರು, ವಕೀಲರು, ವೃತ್ತಿನಿರತ ಲೆಕ್ಕಪರಿಶೋಧಕರು, ವ್ಯವಹಾರಾಡಳಿತ ನಿಪುಣರನ್ನು ಬಹುಸಂಖ್ಯೆಯಲ್ಲಿ ಕಾಣಬಹುದು. ವೃತ್ತಿನಿರತ ಜನ ಬಹುಸಂಖ್ಯೆಯಲ್ಲಿ ಇತರ ಉದ್ಯಮಗಳಲ್ಲಿ ಉನ್ನತ ಹುದ್ದೆಗಳಲ್ಲಿ ಇರುವುದು ಕಂಡುಬರುತ್ತದೆ. ಒಟ್ಟಿನಲ್ಲಿ ಬೃಹತ್ ಉದ್ಯಮಗಳನ್ನು ಹುಟ್ಟುಹಾಕುವ ರೀತಿಯ ಉದ್ಯಮಶೀಲತೆ ಇಲ್ಲಿ ಬೆಳೆದುಬಂದಿಲ್ಲ ಎನ್ನುವುದು ಮಾತ್ರ ಸತ್ಯ. ಜಿಲ್ಲೆಯಲ್ಲಿ ೧೯೫೫–೫೬ ರಿಂದ ೨೦೦೬–೦೭ರ ವರೆಗೆ ನೋಂದಣಿಗೊಂಡ ಅತೀ ಸಣ್ಣ ಮತ್ತು ಸಣ್ಣ ಪ್ರಮಾಣದ ಕೈಗಾರಿಕೆಗಳ ವಿವರವನ್ನು ಕೋಷ್ಟಕ ೫.೧೧ರಲ್ಲಿ ನೀಡಿದೆ.

## ಆಹಾರ ಮತ್ತು ಪಾನೀಯ

ಕೃಷಿ ಆಧಾರಿತ ಕೈಗಾರಿಕೆಗಳ ವ್ಯಾಪ್ತಿಗೆ ಪ್ರಧಾನವಾಗಿ ಹಿಟ್ಟಿನ ಗಿರಣಿ, ಪಶು ಮತ್ತು ಕೋಳಿ ಆಹಾರ ತಯಾರಿಕೆ, ಖಾದ್ಯ ತೈಲ, ಐಸ್‌ಕ್ರೀಂ ತಯಾರಿಕೆ, ಕಬ್ಬಿನ ರಸ ತಯಾರಿಕೆ, ಬೆಲ್ಲ ತಯಾರಿಕೆ, ಅಕ್ಕಿ ಗಿರಣಿ ಮುಂತಾದವುಗಳು ಈ ವರ್ಗಕ್ಕೆ ಸೇರುತ್ತವೆ. ಆರಂಭದ ದಿನಗಳಲ್ಲಿ ಪೇಟೆ ಹಾಗೂ ಸಣ್ಣ ಪಟ್ಟಣಗಳಲ್ಲಿ

**ಕೋಷ್ಟಕ ೫.೧೧ : ಜಿಲ್ಲೆಯಲ್ಲಿ ನೋಂದಣಿಯಾದ ಅತೀ ಸಣ್ಣ ಪ್ರಮಾಣದ ಕೈಗಾರಿಕಾ ವಿವರಗಳು**

(೩೧-೦೩-೨೦೦೩ರವರೆಗೆ)

| ಉತ್ಪನ್ನಗಳ ವಿವರ | ಘಟಕಗಳ ಸಂಖ್ಯೆ | ಬಂಡವಾಳ ಹೂಡಿಕೆ (ಲಕ್ಷ ರೂ.ಗಳಲ್ಲಿ) | ಉದ್ಯೋಗಸ್ಥರ ಸಂಖ್ಯೆ |
|---|---|---|---|
| ಆಹಾರ ಮತ್ತು ತಂಪು ಪಾನೀಯ | ೨,೪೫೩ | ೧೧೫೦೭.೧೨ | ೧೫,೩೬೦ |
| ಜವಳಿ ಉದ್ಯಮ | ೫೯೧ | ೧೨೭೪.೭೬ | ೩,೫೯೭ |
| ಮರ ಮತ್ತು ಮರದ ಉತ್ಪನ್ನ | ೪೮೧ | ೧೭೭೭.೬೮ | ೨,೬೩೮ |
| ಮುದ್ರಣ ಮತ್ತು ಲೇಖನ ಸಾಮಗ್ರಿಗಳು | ೩೩೭ | ೪೨೧೨.೮೫ | ೨,೧೩೮ |
| ಚರ್ಮ ಮತ್ತು ಚರ್ಮದ ಉತ್ಪನ್ನಗಳು | ೧೩೭ | ೨೮೯.೫೦ | ೫೧೩ |
| ರಬ್ಬರ್ ಮತ್ತು ಪ್ಲಾಸ್ಟಿಕ್ | ೨೧೮ | ೨೨೪೮.೩೪ | ೧೫೧೯ |
| ರಾಸಾಯನಿಕ ಕೈಗಾರಿಕೆಗಳು | ೧೭೦ | ೯೦೯.೧೭ | ೯೨೨ |
| ಗಾಜು ಮತ್ತು ಮಣ್ಣಿನ ಉತ್ಪನ್ನಗಳು | ೨೬೬ | ೨೦೧೭.೧೨ | ೩,೦೩೬ |
| ಜನರಲ್ ಇಂಜನಿಯರಿಂಗ್ | ೪೨೧ | ೧೫೦೪.೮೬ | ೨,೩೩೩ |
| ಬೇಸಿಕ್ ಮೆಟಲ್ | ೩೦೦ | ೧೫೧೦.೦೭ | ೧,೬೬೭ |
| ಎಲೆಕ್ಟ್ರೀಕಲ್ಸ್ ಮತ್ತು ಎಲೆಕ್ಟ್ರಾನಿಕ್ಸ್ | ೧೩೭ | ೫೯೯.೦೬ | ೧,೬೧೨ |
| ಆಟೊಮೊಬೈಲ್ | ೪೭ | ೨೪೧.೫೬ | ೭೨೧ |
| ಸಾರಿಗೆ ಮತ್ತು ಉಪಕರಣಗಳು | ೦೫ | ೪.೬೦ | ೨೨ |
| ಫೆರಸ್ ಮತ್ತು ನಾನ್ ಫೆರಸ್ | ೫೪೬ | ೮೦.೬೭ | ೨,೦೪೮ |
| ಜಾಬ್‌ವರ್ಕ್ಸ್ ಮತ್ತು ರಿಪೇರಿ | ೧೧೦ | ೩೦೩.೮೫ | ೫೯೮ |
| ಇತರ ಸೇವೆಗಳು | ೩೭೨ | ೫೫೨.೯೩ | ೯೯೧ |
| ಇತರ ಉತ್ಪನ್ನಗಳು | ೫೯೨ | ೨೧೫೫.೧೩ | ೪,೭೬೧ |
| **ಒಟ್ಟು** | **೭,೧೮೩** | **೩೧೧೮೯.೨೭** | **೪೪,೦೭೬** |

*ಆಧಾರ : ಜಿಲ್ಲಾ ಕೈಗಾರಿಕಾ ಕೇಂದ್ರ, ಉಡುಪಿ.*

ವಾಸವಾಗಿದ್ದ ವರ್ತಕ ವರ್ಗದ ಹೆಂಗಸರು ಹಾಗೂ ಮಕ್ಕಳು ಹಳ್ಳಿಗಳಿಂದ ಹಲಸಿನಕಾಯಿ, ಗೆಣಸು ಮೊದಲಾದ ಉತ್ಪನ್ನಗಳನ್ನು ಖರೀದಿಸಿ ಅವುಗಳಿಂದ ಹಪ್ಪಳ, ಸಂಡಿಗೆ ಹಾಗೂ ಸ್ಥಳೀಯವಾಗಿ ಉಪಯೋಗದಲ್ಲಿದ್ದ ತಿಂಡಿ ತಿನಿಸುಗಳನ್ನು ತಯಾರಿಸಿ ಸ್ಥಳೀಯವಾಗಿ ಮಾರಾಟ ಮಾಡುತ್ತಿದ್ದರು. ಮನೆಯಲ್ಲಿಯೇ ಆಹಾರ ಪದಾರ್ಥಗಳನ್ನು ತಯಾರಿಸಿ, ವ್ಯಾಪಾರಿಗಳಿಗೆ ಮಾರಿ ನಂತರ ಅವರ ಮೂಲಕ ಬಳಕೆದಾರರಿಗೆ ಮಾರಾಟ ಮಾಡುವ ಪರಿಪಾಠ ಈಗ ಜಾರಿಯಲ್ಲಿದೆ. ಇಂತಹ ಉದ್ಯಮದಲ್ಲಿ ಬಹುಪಾಲು ಮಹಿಳೆಯರು ಹಾಗೂ ಕುಟುಂಬದ ಮಕ್ಕಳ ಶ್ರಮ ವಿನಿಯೋಗವಾಗುತ್ತಿದೆ. ಇತ್ತೀಚಿನ ದಿನಗಳಲ್ಲಿ ಮಹಿಳಾ ಸ್ವಸಹಾಯ ಸಂಘದ ಸದಸ್ಯರು ಹಪ್ಪಳ ಹಾಗೂ ಉಪ್ಪಿನಕಾಯಿ ಉತ್ಪಾದನೆಯಲ್ಲಿ ತೊಡಗಿಸಿಕೊಂಡಿದ್ದು ಮಾರುಕಟ್ಟೆಗೆ, ಈ ವರ್ಗದಿಂದ ದೊಡ್ಡ ಪ್ರಮಾಣದಲ್ಲಿ ಉತ್ಪನ್ನವು ಪೂರೈಕೆಯಾಗುತ್ತಿದೆ. ಮಾವಿನಕಾಯಿ, ಅಮ್ಟೆಕಾಯಿ, ಲಿಂಬೆ, ನೆಲ್ಲಿಕಾಯಿ, ಸೌತೆಕಾಯಿ, ಬೆಳ್ಳುಳ್ಳಿ, ಕಣಿಲೆ ಮುಂತಾದವುಗಳ ಉಪ್ಪಿನಕಾಯಿ ಮಾರುಕಟ್ಟೆಯಲ್ಲಿ ಲಭ್ಯವಿರುತ್ತದೆ. ಜೈನ ಸಮುದಾಯದವರು ತಯಾರಿಸುವ ಹುಣಿಸೆಹಣ್ಣಿನ ಉಪ್ಪಿನಕಾಯಿಗೆ ವಿಶೇಷ ಬೇಡಿಕೆ ಇದ್ದರೂ ಉತ್ಪಾದನೆ ಬೇಡಿಕೆ ಪೂರೈಸುವಷ್ಟಿಲ್ಲದಿರುವುದು ಕಂಡುಬರುತ್ತದೆ. ಸಿಗಡಿ, ಮೀನು, ಮುಂತಾದವುಗಳ ಉಪ್ಪಿನಕಾಯಿಯೂ ಮಾರುಕಟ್ಟೆಯಲ್ಲಿ ಲಭ್ಯವಿದೆ. ಹಲಸು, ಗೆಣಸು, ಉದ್ದು, ಬಟಾಟೆ, ಅಕ್ಕಿ, ರಾಗಿ, ಮೈದಾ ಮುಂತಾದ ವಿವಿಧ ರೀತಿಯ ಹಪ್ಪಳಗಳು ಮಾರುಕಟ್ಟೆಯಲ್ಲಿ ಬೇಡಿಕೆಯಲ್ಲಿವೆ. ಜಿಲ್ಲೆಯಾದ್ಯಂತ ಇವುಗಳ ಉತ್ಪಾದನೆ ಮತ್ತು ಬಳಕೆಯಾಗುತ್ತಿರುವುದಾದರೂ ಮಣಿಪಾಲ, ಉದ್ಯಾವರ, ಉಡುಪಿ, ಸಾಸ್ತಾನ, ಪಡುಬಿದ್ರೆ, ಕೋಟೇಶ್ವರ, ಮಾಳ, ಕಾರ್ಕಳ, ಕಾಪು, ವಂಡ್ಸೆ, ಬೆಳ್ಮಣ್ಣು, ಕುಕ್ಕುಂದೂರು, ಬಂಟಕಲ್ಲು, ಹೆಬ್ರಿ ಮತ್ತು ಬಜಗೋಳಿ ಮುಂತಾದೆಡೆ ಅಧಿಕ ಪ್ರಮಾಣದಲ್ಲಿ ಉದ್ಯಮಗಳು ನೆಲೆಯೂರಿವೆ.

ಜೂನ್–ಆಗಸ್ಟ್‌ವರೆಗಿನ ಅವಧಿಯನ್ನು ಬಿಟ್ಟರೆ ಉಳಿದಂತೆ ತಾಪಮಾನ ಅಧಿಕವಿದ್ದು, ಬಿಸಿಲಿನ ತಾಪವಿರುವ ಈ ಪ್ರದೇಶದಲ್ಲಿ ತಂಪಾದ ಹಿತಕರ ಅನುಭವ ನೀಡುವ ಐಸ್‌ಕ್ರೀಮ್‌ಗೆ ಬಹುಬೇಡಿಕೆ ಇದೆ. ಐಸ್‌ಕ್ರೀಮ್ ಸಾಧಾರಣ ಪಟ್ಟಣದಿಂದ ಹಿಡಿದು ನಗರ ಪ್ರದೇಶದ ಮದ್ಯಮ ಪ್ರಮಾಣದ ಹೊಟೇಲ್‌ಗಳಲ್ಲೂ ಲಭ್ಯ. ಆದರೂ ಐಸ್‌ಕ್ರೀಂ ಉತ್ಪಾದಿಸುವ ಘಟಕಗಳು ಕೆಲವೇ ಇದ್ದು, ಅವುಗಳಲ್ಲಿ ಐಡಿಯಲ್, ಹ್ಯಾಂಗ್ಯೋ, ಶೆಟ್ಟೀಸ್, ತ್ರಿಮ್ಯಾನ್ಸ್, ಡಿಂಕೀ ಮುಂತಾದವು ಹೆಚ್ಚು ಪರಿಚಿತ, ನಗರದ ಕೆಲವೊಂದು ಕಡೆ ವೈವಿದ್ಯಮಯ ಐಸ್‌ಕ್ರೀಂ ಲಭ್ಯ. ಜಿಲ್ಲೆಯಾದ್ಯಂತ ಸುಮಾರು ೩೦ ಐಸ್‌ಕ್ರೀಂ ಪಾರ್ಲರುಗಳು ದೂರವಾಣಿ ಡೈರೆಕ್ಟರಿಯಲ್ಲಿ (Yellow Pages) ದಾಖಲಾಗಿದ್ದು, ಇದಕ್ಕಿಂತಲೂ ಅಧಿಕ ಸಂಖ್ಯೆಯ ಐಸ್‌ಕ್ರೀಂ ಪಾರ್ಲರುಗಳಿರಬಹುದೆಂದು ಅಂದಾಜಿಸಲಾಗಿದೆ. ಬೇಕರಿ, ದೊಡ್ಡ ಶಾಪಿಂಗ್ ಮಹಲು, ಡೈರಿ ಹಾಗೂ ಇತರ ಅಂಗಡಿಗಳಲ್ಲಿಯೂ ಪ್ಯಾಕ್ ಮಾಡಿರುವ ಐಸ್‌ಕ್ರೀಂ ಮಾರಾಟ ಮಾಡಲಾಗುತ್ತಿದೆ.

ಸಾಮಾನ್ಯವಾಗಿ ಡಿಸೆಂಬರ್‌ನಿಂದ ಮೇ ಅಂತ್ಯದವರೆಗೆ ಕ್ರೀಂ ಪಾರ್ಲರ್‌ಗಳಿಗೆ ಉತ್ತಮ ವ್ಯಾಪಾರವಾಗುತ್ತದೆ. ರಜಾ ಸಮಯದಲ್ಲಿ ವಿವಾಹ ಮತ್ತಿತರ ಸಮಾರಂಭಗಳೂ ಅಧಿಕವಿರುವುದರಿಂದ ಹೊರ ಪ್ರದೇಶದಲ್ಲಿ ವಾಸವಿರುವ ಜಿಲ್ಲೆಯ ಜನ ಊರಿಗೆ ಮರಳುವುದು ಇಲ್ಲಿ ಸಾಮಾನ್ಯ. ಸಾಧಾರಣ ಮಾರ್ಚಿನಿಂದ ಮೇ ತಿಂಗಳ ಕೊನೆಯವರೆಗಿನ ಈ ಅವಧಿಯಲ್ಲಿ ಪರವೂರಲ್ಲಿ ವಾಸವಿರುವ ಜನ ಊರಿಗೆ ಬಂದರೆ ಐಸ್‌ಕ್ರೀಂಗೆ ಎಲ್ಲಿಲ್ಲದ ಬೇಡಿಕೆ. ಸಾಮಾನ್ಯವಾಗಿ ಐಸ್‌ಕ್ರೀಂ ಇಷ್ಟಪಡದ ಜನ ಕಡಿಮೆ ಎಂದೇ ಹೇಳಬೇಕು. ಈ ಉದ್ಯಮಕ್ಕೆ ಮಳೆಗಾಲದಲ್ಲಿ ಬೇಡಿಕೆ ಇಲ್ಲದಿರುವುದು ಹಾಗೂ ಕೇವಲ ಇದೊಂದೇ ಉತ್ಪನ್ನವನ್ನು ಬಯಸುವವರು ಕಡಿಮೆ ಇರುವ ಕಾರಣ, ಐಸ್‌ಕ್ರೀಂ ಮಾರಾಟವಾಗುವುದು. ಹೊಟೇಲ್ ಮತ್ತು ತಿಂಡಿ ತಿನಿಸು ಮಾರಾಟವಾಗುವ ದೊಡ್ಡ ಮಳಿಗೆಗಳಲ್ಲಿ ಬೇಡಿಕೆಯಿರುವ ಮತ್ತು ವಿಸ್ತರಣೆಗೆ ಅವಕಾಶವಿರುವ ಉದ್ದಿಮೆಗಳಲ್ಲಿ ಐಸ್‌ಕ್ರೀಂ ಕೂಡಾ ಒಂದು ಎನ್ನುವುದು ಗಮನಾರ್ಹವಾಗಿದೆ. ಜಿಲ್ಲೆಯಲ್ಲಿ ಮಾರ್ಚ್ ೨೦೦೬ರ ಅಂತ್ಯಕ್ಕೆ ೨೪೫೩ ಆಹಾರ ಮತ್ತು ತಂಪು ಪಾನೀಯ ಉದ್ದಿಮೆಗಳಿದ್ದವು. ಇವುಗಳಲ್ಲಿ ರೂ. ೧೧,೫೦೭.೧೨ಲಕ್ಷ ಬಂಡವಾಳ ತೊಡಗಿಸಿದ್ದು, ೧೫,೩೬೦ ಮಂದಿಗೆ ಉದ್ಯೋಗ ಒದಗಿಸಿದ್ದವು.

## ಜವಳಿ ಉದ್ಯಮ

ಈ ಉದ್ಯಮದ ವ್ಯಾಪ್ತಿಗೆ ಪ್ರಧಾನವಾಗಿ ಟವಲ್, ನ್ಯಾಪ್ಕಿನ್ ಹಾಗೂ ಸಿದ್ಧ ಉಡುಪುಗಳ ತಯಾರಿಕಾ ಘಟಕಗಳು ಸೇರುತ್ತವೆ. ಜೀವನದ ಮೂಲಭೂತ ಅವಶ್ಯಕತೆಗಳಲ್ಲಿ ವಸ್ತ್ರವೂ ಒಂದು, ಜಿಲ್ಲೆಯ ಜವಳಿ ಮತ್ತು ಉಡುಪುಗಳ ಪೂರೈಕೆ ಎರಡು ಮೂಲಗಳಿಂದ ಪೂರೈಕೆಯಾಗುತ್ತಿದೆ. ಪಾರಂಪರಿಕ ಉತ್ಪಾದನೆ (ಸ್ಥಳೀಯವಾಗಿ) ಮತ್ತು ಆಧುನಿಕ ಗಿರಣಿಗಳ ಉತ್ಪಾದನೆ.

ಜಿಲ್ಲೆಯಲ್ಲಿ ೨೦೦೬ ರ ಮಾರ್ಚಿ ಅಂತ್ಯಕ್ಕೆ ೫೯೧ ಜವಳಿ ಉದ್ದಿಮೆಗಳಿದ್ದು, ಸುಮಾರು ೧೨೭೪.೭೬ ಲಕ್ಷ ರೂಪಾಯಿಗಳ ಬಂಡವಾಳ ತೊಡಗಿಸಲಾಗಿದ್ದು, ಇವು ೩೯೯೭ ಮಂದಿ ಉದ್ಯೋಗ ಒದಗಿಸಿವೆ. ಸಾಕಷ್ಟು ಸಂಖ್ಯೆಯಲ್ಲಿ ಸಿದ್ಧ ಉಡುಪುಗಳನ್ನು ತಯಾರಿಸುವ ಘಟಕಗಳೂ ಇವೆ. ನಾಲ್ಕರಿಂದ ಆರು ಘಟಕಗಳು ಸಿದ್ಧ ಉಡುಪುಗಳನ್ನು ರಫ್ತು ಮಾಡುವ ಮಟ್ಟಕ್ಕೆ ಬೆಳೆದಿವೆ ಎನ್ನುವುದು ಗಮನಿಸಬೇಕಾದ ಬೆಳವಣಿಗೆ. ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸ್ವ–ಸಹಾಯ ಗುಂಪುಗಳು 'ಶ್ರಮಿಕ್' ಎನ್ನುವ ಬ್ರಾಂಡ್‌ನಡಿಯಲ್ಲಿ ಸಿದ್ಧ ಉಡುಪುಗಳನ್ನು ಮಾರಾಟ ಮಾಡುತ್ತಿರುವುದು, ಸ್ಥಳೀಯ ಕೈಗಾರಿಕೆಗಳ ಅಭಿವೃದ್ಧಿಯ ದೃಷ್ಟಿಯಿಂದ ಮಹತ್ವದ ಸಂಗತಿಯಾಗಿದೆ.

## ಮರ ಮತ್ತು ಮರ ಉತ್ಪನ್ನಗಳು

ಮರಕೊಯ್ಯುವುದು, ಪೀಠೋಪಕರಣ, ಕಿಟಕಿ, ಬಾಗಿಲು, ಎತ್ತಿನಗಾಡಿ, ಆಟದ ಸಾಮಾನು ಮತ್ತು ಪೋಟೋ ಚೌಕಟ್ಟುಗಳನ್ನು ತಯಾರಿಸುವುದು, ವುಡನ್ ಇನ್‌ಲೇ ವರ್ಕ್ಸ್ ಮುಂತಾದ ಮರದ ಗೃಹೋಪಯೋಗಿ ಮತ್ತು ಪೀಠೋಕರಣ ಕೈಗಾರಿಕೆಗಳ ವ್ಯಾಪ್ತಿಗೆ ಒಳಪಡುತ್ತವೆ. ಜಿಲ್ಲೆಯ ಕಾರ್ಕಳ,

ಕುಂದಾಪುರ ತಾಲೂಕುಗಳಲ್ಲಿ ದಟ್ಟವಾದ ಕಾಡುಗಳಿದ್ದರೂ, ಮನೆ, ಪೀಠೋಕರಣಗಳಿಗೆ ಮುಖ್ಯವಾಗಿ ಮರವನ್ನೇ ಉಪಯೋಗಿಸಲಾಗುತ್ತಿದ್ದ ಕಾಲ ಈಗ ಇಲ್ಲ. ಹಾಗಾಗಿ ಮರಗಳನ್ನು ಬಳಸುತ್ತಿದ್ದ ಕಡೆ ಬದಲೀ ವಸ್ತುಗಳು ಬಳಕೆಗೆ ಬರುತ್ತಿವೆ. ಕೆಲವು ಸಮಯದಿಂದ ಮರದಿಂದ ಮನೆಯ ಕಿಟಕಿ, ಬಾಗಿಲು, ಪಕ್ಕಾಸು, ರೀಪು ಮುಂತಾದ ವಸ್ತುಗಳನ್ನು ತಯಾರಿಸಲಾಗುತ್ತಿದ್ದು, ಈ ಕೆಳಗಿನ ಚಟುವಟಿಕೆಗಳು ಜಿಲ್ಲೆಯಲ್ಲಿ ನಡೆಯುತ್ತಿವೆ.

೧. ಮರದ ದಿಮ್ಮಿಗಳನ್ನು ಕತ್ತರಿಸಿ ಹಲಗೆಗಳನ್ನಾಗಿ ಮಾಡುವ ಕೆಲಸವನ್ನು ನಿರ್ವಹಿಸುವ ಮರದ ಮಿಲ್ಲುಗಳು. ಮನೆ, ಅಂಗಡಿ, ಹೊಟೇಲು, ಉದ್ದಿಮೆಗಳಲ್ಲಿ ಉಪಯೋಗಿಸುವ ಪೀಠೋಪಕರಣಗಳನ್ನು ತಯಾರಿಸುವ ಯಂತ್ರಚಾಲಿತ ಮಿಲ್ಲುಗಳು.

೨. ಗ್ರಾಮೀಣ ಪ್ರದೇಶಗಳಲ್ಲಿ ಮರದಿಂದ ಹಲಗೆಗಳನ್ನು ಮತ್ತು ಪೀಠೋಕರಣ ತಯಾರಿಸುವ, ಮಾನವ ಶ್ರಮವಾದರಿಸಿದ ಕಾರ್ಯಾಗಾರಗಳು.

೩. ಉರುವಲು ಕಟ್ಟಿಗೆಗಳನ್ನು ಸರಕಾರೀ ಕಾಡುಗಳಿಂದ ಮತ್ತು ಖಾಸಗೀ ಮಾರಾಟಗಾರರಿಂದ ಸಗಟು ರೂಪದಲ್ಲಿ ಖರೀದಿಸಿ ಅದನ್ನು ಚಿಲ್ಲರೆಯಾಗಿ ಮಾರಾಟ ಮಾಡುವ (ಚಟುವಟಿಕೆಗಳ) ಉದ್ಯಮ ರೂಪದ ಚಟುವಟಿಕೆಗಳು. ಜಿಲ್ಲೆಯಲ್ಲಿ ೨೦೦೬ರ ಮಾರ್ಚಿ ಅಂತ್ಯಕ್ಕೆ ೪೮೧ ಮರ ಮತ್ತು ಮರದ ಉತ್ಪನ್ನ ಘಟಕಗಳಿದ್ದು, ರೂ. ೧೭೭೭.೦೮ ಲಕ್ಷಗಳನ್ನು ತೊಡಗಿಸಲಾಗಿದೆ. ಇವು ೨೬೩೮ ಮಂದಿಗೆ ಉದ್ಯೋಗ ಒದಗಿಸಿದ್ದವು.

## ಮುದ್ರಣ ಮತ್ತು ಲೇಖನ ಸಾಮಗ್ರಿ

ಜಿಲ್ಲೆಯಲ್ಲಿ ಮುದ್ರಣ ಉದ್ಯಮ ಬಹಳ ವೇಗವಾಗಿ ಬೆಳೆಯುತ್ತಿರುವ ಉದ್ಯಮವಾಗಿದೆ. ಆಧುನಿಕ ಕಂಪ್ಯೂಟರ್ ತಂತ್ರಜ್ಞಾನ ಜನಪ್ರಿಯವಾಗುತ್ತಿರುವ ಈ ದಿನಗಳಲ್ಲಿ ಮುದ್ರಣಕ್ಕೆ ಸಂಬಂಧಿಸಿದ ಚಟುವಟಿಕೆಗಳು ಬೆಳೆಯುತ್ತಿರುವುದು ಕಂಡುಬರುತ್ತದೆ. ಮುದ್ರಣದ ಕೆಲಸ ಹಿಂದಿನ ದಿನಗಳಂತೆ ಕೇವಲ ಮುದ್ರಣಾಲಯಗಳಿಗೆ ಸೀಮಿತವಾಗಿಲ್ಲ. ಮುದ್ರಣ ಮತ್ತು ಲೇಖನ ಸಾಮಗ್ರಿಗಳ ವ್ಯಾಪ್ತಿಗೆ, ಕೈಚೀಲ, ಪೇಪರ್‌ಕವರ್, ವ್ಯಾಕ್ಸ್ ಕೋಟೆಡ್ ಪೇಪರ್, ಕಾರ್ಡ್‌ಬೋರ್ಡ್, ಗಮ್, ಪೇಪರ್, ಟೇಪ್, ಕಂಪ್ಯೂಟರ್, ಸ್ಟೇಷನರಿ ವಸ್ತುಗಳು ಮುಂತಾದವು ಸೇರುತ್ತವೆ. ಲೇಖನ ಸಾಮಗ್ರಿ ಉತ್ಪಾದನೆಯಲ್ಲಿ ಬರವಣಿಗೆಗೆ ಉಪಯೋಗಿಸುವ ಪುಸ್ತಕ, ಬುಕ್ ಬೈಂಡಿಂಗ್ ಇತ್ಯಾದಿಗಳು ಸೇರಿವೆ. ಇತ್ತೀಚಿನ ದಿನಗಳಲ್ಲಿ ಬಹುಬೇಡಿಕೆಯಿರುವ ಇನ್ನೊಂದು ರೀತಿಯ ಮುದ್ರಣ ಸ್ಕ್ರೀನ್ ಪ್ರಿಂಟಿಂಗ್. ಜಿಲ್ಲೆಯಲ್ಲಿ ಮಾರ್ಚ್ ೨೦೦೬ರ ಅಂತ್ಯಕ್ಕೆ ಒಟ್ಟು ೩೩೭ ಮುದ್ರಣ ಮತ್ತು ಲೇಖನ ಸಾಮಗ್ರಿ ಉತ್ಪಾದಿಸುವ ಘಟಕಗಳಿದ್ದು, ಇವುಗಳಲ್ಲಿ ೪೨೧೨.೮೫ ಲಕ್ಷ ರೂ.ಗಳ ಬಂಡವಾಳ ತೊಡಗಿಸಲಾಗಿದೆ. ಇವುಗಳು ೨೧೩೮ ಮಂದಿಗೆ ಉದ್ಯೋಗ ಒದಗಿಸಿವೆ.

## ಚರ್ಮ ಮತ್ತು ಚರ್ಮ ಉತ್ಪನ್ನಗಳು

ಚರ್ಮದ ಪಾದರಕ್ಷೆ, ಆಟದ ಸಾಮಾನು, ಚರ್ಮದ ಕೈಚೀಲ, ಫ್ಯಾನ್ಸಿ ಸರಕುಗಳು ಮುಂತಾದವುಗಳು ಈ ವರ್ಗದ ಉದ್ದಿಮೆಗಳಿಗೆ ಸೇರುತ್ತವೆ. ಜಿಲ್ಲೆಯಲ್ಲಿ ೨೦೦೬ರ ಮಾರ್ಚ್ ಅಂತ್ಯಕ್ಕೆ ೧೩೭ ಚರ್ಮ ಮತ್ತು ಚರ್ಮದ ಉತ್ಪನ್ನಗಳನ್ನು ಉತ್ಪಾದಿಸುವ ಘಟಕಗಳಿದ್ದು, ಇವುಗಳಲ್ಲಿ ೨೮೯.೫೦ ಲಕ್ಷ ರೂ.ಗಳ ಬಂಡವಾಳ ತೊಡಗಿಸಲಾಗಿದೆ. ಇವುಗಳು ೫೧೩ ಮಂದಿಗೆ ಉದ್ಯೋಗ ಒದಗಿಸಿವೆ.

## ರಬ್ಬರ್ ಮತ್ತು ಪ್ಲಾಸ್ಟಿಕ್ ಉದ್ದಿಮೆಗಳು

ಪಾಲಿಥಿನ್ ಚೀಲ, ಪ್ಲಾಸ್ಟಿಕ್ ವಸ್ತು, ನೈಲಾನ್ ಚೀಲ, ನೈಲಾನ್ ಬಲೆ, ಟೈರ್ ರಿಟ್ರೇಡಿಂಗ್ ಪಿ.ವಿ.ಸಿ. ಪೈಪ್ಸ್, ಹವಾಯ್ ಚಪ್ಪಲಿ, ಬಾಲ್‌ಪೆನ್, ಬಾಲ್‌ಪೆನ್ ರೀಫಿಲ್ಸ್, ಪ್ಲಾಸ್ಟಿಕ್, ಗಾರ್ಮೆಂಟ್ಸ್, ಪ್ಲಾಸ್ಟಿಕ್ ಸೀಸೆ, ಫೈಬರ್ ಗ್ಲಾಸ್ ಮುಂತಾದವು ರಬ್ಬರ್ ಮತ್ತು ಪ್ಲಾಸ್ಟಿಕ್ ವಸ್ತುಗಳ ತಯಾರಿಕಾ ಘಟಕಗಳ ವ್ಯಾಪ್ತಿಗೆ ಸೇರುತ್ತವೆ. ಜಿಲ್ಲೆಯಲ್ಲಿ ೨೦೦೬ರ ಮಾರ್ಚ್ ಅಂತ್ಯಕ್ಕೆ ಈ ಉದ್ಯಮಕ್ಕೆ ಸಂಬಂಧಿಸಿದ ಘಟಕಗಳ

ಸಂಖ್ಯೆ ೨೧೮ ಆಗಿದ್ದು, ಇವುಗಳಲ್ಲಿ ರೂ. ೨೨೪೮.೩೪ ಲಕ್ಷ ರೂ. ಬಂಡವಾಳ ತೊಡಗಿಸಲಾಗಿದೆ. ಇವು ೧೫೯೯ ಮಂದಿಗೆ ಉದ್ಯೋಗ ಕಲ್ಪಿಸಿವೆ.

## ರಾಸಾಯನಿಕ ಮತ್ತು ರಾಸಾಯನಿಕ ಉತ್ಪನ್ನಗಳು

ಬಣ್ಣ ಮತು ವಾರ್ನಿಸ್, ಸಿಮೆಂಟ್, ಡಿಸ್ಟೆಂಪರ್, ಅಗರಬತ್ತಿ, ಮುದ್ರಣ ಇಂಕು, ಸೋಪಿನ ದ್ರವ ಮತ್ತು ಫಿನಾಯಲ್, ಲಾಂಡ್ರಿಸೋಪು, ಡಿಟರ್‌ಜೆಂಟ್ ಕೇಕ್ ಮತ್ತು ಪೌಡರ್, ಬರವಣಿಗೆಯ ಇಂಕು, ಬೆಂಕಿಕಡ್ಡಿ, ಸುಗಂಧದ ಪೌಡರ್, ಬ್ಲೀಚಿಂಗ್ ಪೌಡರ್ ಮೊದಲಾದವು. ರಾಸಾಯನಿಕ ವಸ್ತುಗಳ ತಯಾರಿಕಾ ಗುಂಪಿನಲ್ಲಿ ಬರುತ್ತವೆ. ಜಿಲ್ಲೆಯಲ್ಲಿ ೨೦೦೬ರ ಮಾರ್ಚ್ ತಂತ್ಯಕ್ಕೆ ೧೭೦ ಘಟಕಗಳಿದ್ದು, ರೂ. ೯೦೯.೧೭ಲಕ್ಷ ರೂ.ಗಳ ಬಂಡವಾಳ ತೊಡಗಿಸಲಾಗಿದೆ. ಇವು ೯೨೨ ಮಂದಿಗೆ ಉದ್ಯೋಗ ಕಲ್ಪಿಸಿವೆ.

## ಗಾಜು ಮತ್ತು ಮಣ್ಣಿನ ಸಿರಾಮಿಕ್ಸ್

ಸುಣ್ಣ ತಯಾರಿಕೆ, ಟೇಬಲ್ ಮೌಲ್ಡ್ ಇಟ್ಟಿಗೆ ತಯಾರಿಕೆ, ಕಲ್ಲನ್ನು ತುಂಡರಿಸುವುದು, ಸಿಮೆಂಟ್ ಪೈಪ್ ತಯಾರಿಕೆ, ಬಳಪದ ಕಲ್ಲಿನ ಸಾಮಾನು ತಯಾರಿಕೆ ಮುಂತಾದವುಗಳು ಈ ಉದ್ದಿಮೆಯಲ್ಲಿ ಸೇರುತ್ತವೆ. ಜಿಲ್ಲೆಯಲ್ಲಿ ೨೦೦೬ರ ಮಾರ್ಚ್ ಅಂತ್ಯಕ್ಕೆ ೨೬೬ ಗಾಜು ಮತ್ತು ಸಿರಾಮಿಕ್ ಉದ್ದಿಮೆಗಳಿದ್ದು, ೨೦೧೭.೧೨ ಲಕ್ಷ ರೂ.ಗಳ ಬಂಡವಾಳ ತೊಡಗಿಸಲಾಗಿದೆ. ಇವು ೩೦೩೬ ಮಂದಿಗೆ ಉದ್ಯೋಗ ಒದಗಿಸಿವೆ.

## ಲೋಹ ಮತ್ತು ಲೋಹ ಉತ್ಪನ್ನಗಳು

ಚಿನ್ನ ಮತ್ತು ಬೆಳ್ಳಿಯ ಆಭರಣಗಳು, ಅಲ್ಯೂಮಿನಿಯಂ ಬಾಗಿಲುಗಳು, ಕಂಚು, ಹಿತ್ತಾಳೆಯ ಪಾತ್ರೆ ಮತ್ತಿತರ ವಸ್ತುಗಳು ಈ ಉದ್ದಿಮೆಯಲ್ಲಿ ಸೇರಿವೆ. ಈ ಉದ್ಯಮವು ಬೇಡಿಕೆಯನ್ನು ಆದರಿಸಿದ್ದು, ಮೂಲ ಲೋಹಗಳನ್ನು ದೇಶದ ಪ್ರಮುಖ ಕೈಗಾರಿಕಾ ಕೇಂದ್ರದಿಂದ ಸಗಟು ರೂಪದಲ್ಲಿ ಖರೀದಿಸಿ ಅವುಗಳನ್ನು ಸ್ಥಳೀಯ ಅವಶ್ಯಕತೆಗಳಿಗೆ ಅನುಗುಣವಾಗಿ ವಿನ್ಯಾಸಗೊಳಿಸಿ, ತಯಾರಿಸಿ ಕೊಡಲಾಗುತ್ತಿದೆ. ಇಂತಹ ಆಭರಣ ತಯಾರಿಕೆಯನ್ನು ಅವಲಂಬಿಸಿರುವ ದೊಡ್ಡ ಸಂಖ್ಯೆಯ ವೃತ್ತಿನಿರತರಿದ್ದಾರೆ. ಅಲ್ಯೂಮಿನಿಯಂ ಉತ್ಪನ್ನಗಳನ್ನು ಸಗಟಾಗಿ ಖರೀದಿಸಿ ಅಲ್ಯೂಮಿನಿಯಂ ಬಾಗಿಲು. ಕಿಟಕಿ, ಪೀಠೋಪಕರಣ, ಪಾತ್ರೆ ಮತ್ತಿತರ ಸಾಮಗ್ರಿಗಳನ್ನು ತಯಾರಿಸುವ ಕೈಗಾರಿಕಾ ಘಟಕಗಳಿವೆ. ಜಿಲ್ಲೆಯಲ್ಲಿ ೨೦೦೬ರ ಮಾರ್ಚ್ ಅಂತ್ಯಕ್ಕೆ ೩೦೦ ಮೂಲ ಲೋಹ ಮತ್ತು ಅದರ ಉತ್ಪನ್ನ ಘಟಕಗಳಿದ್ದು, ಇವುಗಳಲ್ಲಿ ೧೫೧೦.೦೭ ಲಕ್ಷ ರೂ.ಗಳ ಬಂಡವಾಳ ತೊಡಗಿಸಲಾಗಿದೆ. ಇವು ೧೬೬೭ ಮಂದಿಗೆ ಉದ್ಯೋಗ ನೀಡಿವೆ.

## ಜನರಲ್ ಇಂಜಿನಿಯರಿಂಗ್

ಜನರಲ್ ಇಂಜಿನಿಯರಿಂಗ್ ವ್ಯಾಪ್ತಿಗೆ ಯಂತ್ರೋಪಕರಣಗಳ ಬಿಡಿಭಾಗಗಳು, ವ್ಯವಸಾಯೋಪಕರಣ, ರೋಲಿಂಗ್ ಷಟರ್ಸ್, ಗ್ರಿಲ್ಸ್ ಮತ್ತು ಗೇಟು, ಸ್ಟೀಲ್ ಫರ್ನಿಚರ್ಸ್, ಆಯಿಲ್ ಇಂಜಿನ್, ವೆಲ್ಡಿಂಗ್ ಮತ್ತು ಟರ್ನಿಂಗ್, ಬಿಲ್ಡರ್ಸ್ ಹಾರ್ಡ್‌ವೇರ್, ಬೋಲ್ಟ್ ಮತ್ತು ನಟ್ಸ್, ಅಲ್ಯೂಮಿನಿಯಂ, ತಾಮ್ರ ಮತ್ತು ಹಿತ್ತಾಳೆ ಪಾತ್ರೆಗಳೇ ಮೊದಲಾದ ತಯಾರಿಕಾ ಘಟಕಗಳು ಸೇರುತ್ತವೆ. ಜಿಲ್ಲೆಯಲ್ಲಿ ೨೦೦೬ರ ಮಾರ್ಚ್ ಅಂತ್ಯಕ್ಕೆ ಈ ಗುಂಪಿನ ಉದ್ಯಮಕ್ಕೆ ಸೇರಿದ ೪೨೧ ಘಟಕಗಳಿದ್ದು, ರೂ. ೧೫೦೪.೮೬ ಲಕ್ಷ ಬಂಡವಾಳ ತೊಡಗಿಸಲಾಗಿದೆ. ಈ ಉದ್ಯಮಗಳು ೨೩೩೩ ಮಂದಿಗೆ ಉದ್ಯೋಗ ಒದಗಿಸಿದ್ದವು.

## ಫೆರಸ್ ಮತ್ತು ನಾನ್‌ಫೆರಸ್

ಸ್ಟೀಲ್‌ಲೈರ್, ಇಂಡಸ್ಟ್ರೀಯಲ್ ಸ್ಟಾಂಪಲ್ಸ್, ನಾನ್–ಫೆರಸ್ ಕ್ಯಾಸ್ಟಿಂಗ್, ಮೆಷಿನ್ ಪ್ಯಾಬ್ರಿಕೇಷನ್ಸ್, ಲೀಪ್ ಸ್ಪ್ರಿಂಗ್ಸ್, ಬ್ರೇಕ್ ಡ್ರಮ್ಸ್, ಚಕ್ರದ ಮಧ್ಯ ಭಾಗ (ಹಬ್ಸ್), ಸಿಲಿಂಡರ್ ಲಾಯಿನರ್ಸ್, ಸ್ಪ್ರಿಂಗ್‌ಸ್ಟೀಲ್, ಯಂತ್ರದ ಬಿಡಿಭಾಗಗಳು, ಮೌಲ್ಡಿಂಗ್ ರಿಂಗ್ಸ್, ವ್ಯವಸಾಯೋಪಕರಣಗಳು, ನಾನ್–ಫೆರಸ್ ಫಿಟ್ಟಿಂಗ್ಸ್

ಮತ್ತು ಸ್ಟೀಲ್ ಉತ್ಪನ್ನಗಳು, ಸೂಟ್‌ಕೇಸ್, ಪೆಟ್ಟಿಗೆ, ಗೃಹೋಪಕರಣಗಳು ಟಿನ್‌ಕಂಟೇನರ್ಸ್ ಮುಂತಾದವುಗಳನ್ನು ಈ ಉದ್ದಿಮೆಗಳಲ್ಲಿ ತಯಾರಿಸಲಾಗುತ್ತದೆ. ಜಿಲ್ಲೆಯಲ್ಲಿ ೨೦೦೬ರ ಮಾರ್ಚ್ ಅಂತ್ಯಕ್ಕೆ ೫೪೬ ಫೆರಸ್ ಮತ್ತು ನಾನ್–ಫೆರಸ್ ಉದ್ದಿಮೆಗಳಿದ್ದು, ರೂ. ೮೦.೬೭ ಲಕ್ಷ ಬಂಡವಾಳ ತೊಡಗಿಸಲಾಗಿತ್ತು. ಇವು ೨೦೪೮ಮಂದಿಗೆ ಉದ್ಯೋಗ ಒದಗಿಸಿದ್ದವು.

## ಎಲೆಕ್ಟ್ರಿಕಲ್ಸ್ ಮತ್ತು ಎಲೆಕ್ಟ್ರಾನಿಕ್ಸ್

ಜಿಲ್ಲೆಯ ಜನರ ಆದಾಯದ ಪ್ರಮಾಣವು ಇತರೆಡೆಗೆ ಹೋಲಿಸಿದಲ್ಲಿ ಅಧಿಕವಿರುವುದರಿಂದ ಮತ್ತು ಜೀವನ ಮಟ್ಟವು ಉತ್ತಮವಿರುವ ಕಾರಣ ಬಹು ಸಂಖ್ಯೆಯ ಜನ ಎಲೆಕ್ಟ್ರಿಕಲ್ಸ್ ಮತ್ತು ಎಲೆಕ್ಟ್ರಾನಿಕ್ಸ್ ಉಪಕರಣವನ್ನು ಬಳಸುತ್ತಾರೆ. ಅಂತಹ ಉಪಕರಣಗಳಲ್ಲಿ ಬಳಸಲಾಗುವ ಕೆಲವು ಬಿಡಿಭಾಗಗಳನ್ನು ಜಿಲ್ಲೆಯಲ್ಲಿ ಉತ್ಪಾದಿಸಲಾಗುತ್ತದೆ. ಜಿಲ್ಲೆಯಲ್ಲಿ ೨೦೦೬ರ ಮಾರ್ಚ್ ಅಂತ್ಯಕ್ಕೆ ಈ ಗುಂಪಿನ ಉದ್ಯಮಕ್ಕೆ ಸೇರಿದ ೧೩೭ ಘಟಕಗಳಿದ್ದು, ರೂ.೫೯.೦೬ಲಕ್ಷ ಬಂಡವಾಳ ತೊಡಗಿಸಲಾಗಿದೆ. ಇವು ೧೬೧೨ ಮಂದಿಗೆ ಉದ್ಯೋಗ ಒದಗಿಸಿವೆ.

## ಸಾರಿಗೆ ಹಾಗೂ ಉಪಕರಣಗಳು

ಇವುಗಳಲ್ಲಿ ಪ್ರಮುಖವಾಗಿ ಮೋಟಾರು ವಾಹನಗಳನ್ನು ದುರಸ್ತಿ ಮಾಡುವುದು ಮತ್ತು ಸೇವೆಯನ್ನೊದಗಿಸುವ ಉದ್ದಿಮೆಗಳು ಸೇರಿಕೊಂಡಿವೆ. ಮೋಟಾರು ವಾಹನಗಳಲ್ಲಿ ಸರಕು ಸಾಗಾಣಿಕೆ ಹಾಗೂ ಪ್ರಯಾಣಿಕರ ಅನುಕೂಲಕ್ಕೆ ಅನುಗುಣವಾಗಿ ಅಗತ್ಯವಾದ ವಾಹನದ ಭಾಗಗಳನ್ನು, ಆಸನಗಳನ್ನು ತಯಾರಿಸುವ ಉದ್ಯಮ ಇದರಲ್ಲಿ ಒಳಗೊಂಡಿದೆ. ಜಿಲ್ಲೆಯಲ್ಲಿ ೨೦೦೬ರ ಮಾರ್ಚ್ ಅಂತ್ಯಕ್ಕೆ ಈ ಉದ್ಯಮಕ್ಕೆ ಸೇರಿದ ಒಟ್ಟು ಐದು ಘಟಕಗಳಿದ್ದು, ರೂ.೪.೬೦ ಲಕ್ಷ ಬಂಡವಾಳ ತೊಡಗಿಸಲಾಗಿದೆ. ಇವು ೨೨ ಮಂದಿಗೆ ಉದ್ಯೋಗ ಒದಗಿಸಿವೆ.

## ರಿಪೇರಿ ಮತ್ತು ಸೇವಾ ಸೌಲಭ್ಯ ಸಣ್ಣ ಘಟಕಗಳು

ಈ ಉದ್ದಿಮೆಯಲ್ಲಿ ವಾಹನಗಳ ರಿಪೇರಿ, (ಪ್ರಯಾಣಿಕ ವಾಹನಗಳು, ಲಘು ಹಾಗೂ ಘನ ಸಾರಿಗೆ ವಾಹನಗಳು) ಅಂತಹ ಘಟಕಗಳು ಈ ವ್ಯಾಪ್ತಿಗೆ ಸೇರುತ್ತವೆ. ಜಿಲ್ಲೆಯಲ್ಲಿ ೨೦೦೬ರ ಮಾರ್ಚ್ ಅಂತ್ಯಕ್ಕೆ ಈ ಗುಂಪಿಗೆ ಸೇರಿದ ೫೪೪ ಘಟಕಗಳಿದ್ದು, ರೂ. ೭೮೩.೬ಲಕ್ಷ ಬಂಡವಾಳ ತೊಡಗಿಸಲಾಗಿದೆ. ಇವು ೨೦೦೬ ಮಂದಿಗೆ ಉದ್ಯೋಗ ನೀಡಿವೆ.

## ಇತರೆ ಸೇವೆ ಹಾಗೂ ಇತರ ಉತ್ಪನ್ನಗಳು

ಜಿಲ್ಲೆಯು ಸೇವಾಕ್ಷೇತ್ರದ ಚಟುವಟಿಕೆಗಳಲ್ಲಿ ಉತ್ತಮ ಪ್ರಗತಿ ಸಾಧಿಸಿರುವುದು ಅಂಕಿಅಂಶಗಳಿಂದ ತಿಳಿದು ಬರುತ್ತದೆ. ನೆರಳಚ್ಚು (ಝೆರಾಕ್ಸ್), ಎಸ್.ಟಿ.ಡಿ. ಬೂತ್ಸ್, ಬ್ಯೂಟಿ ಪಾರ್ಲರ್‌ಗಳು, ಲ್ಯಾಬೋರೇಟರಿಗಳು, ಕೇಬಲ್ ನೆಟ್‌ವರ್ಕ್ಸ್, ಸ್ಟೂಡಿಯೋ, ತೆಂಗಿನ ನಾರಿನಿಂದ ತಯಾರಿಸುವ ಉತ್ಪನ್ನಗಳು, ಬೀಡಿ, ಸುಣ್ಣ, ಸ್ಪ್ರೇ ಪೈಂಟಿಂಗ್, ಸೋಫಾ ಕುಶನ್, ಸುಗಂಧಯುಕ್ತ ಸುಫಾರಿ ಮುಂತಾದವು ಇದರಡಿಯಲ್ಲಿ ಬರುತ್ತವೆ. ಜಿಲ್ಲೆಯಲ್ಲಿ ೨೦೦೬ರ ಮಾರ್ಚ್ ಅಂತ್ಯಕ್ಕೆ ೯೬೪ ಇತರ ಸೇವಾ ಘಟಕಗಳಿದ್ದವು. ಇವುಗಳಲ್ಲಿ ೨೭೦೮.೦೬ ಲಕ್ಷ ರೂ.ಗಳ ಬಂಡವಾಳ ತೊಡಗಿಸಲಾಗಿದ್ದು, ೫೭೫೨ ಮಂದಿಗೆ ಉದ್ಯೋಗ ಒದಗಿಸಿದ್ದವು.

# ಗೋಡಂಬಿ ಉದ್ದಿಮೆ (ಗೇರು ಉದ್ದಿಮೆ)

ಜಿಲ್ಲೆಯಲ್ಲಿ ಉದ್ಯೋಗ ಸೃಷ್ಟಿ ಮತ್ತು ವಿದೇಶೀ ವಿನಿಮಯ ಗಳಿಕೆ ಹಾಗೂ ಮಹಿಳೆಯರಿಗೆ ಉದ್ಯೋಗಾವಕಾಶ ನೀಡಿಕೆಯ ದೃಷ್ಟಿಯಿಂದ ನೋಡಿದರೆ ಪ್ರಾಯಶಃ ಗೇರು ಉದ್ಯಮ ಬಹಳ ಮಹತ್ವದ ಉದ್ದಿಮೆಯೆಂದೇ ತಿಳಿಯಬಹುದಾಗಿದೆ. ಸುಮಾರು ೨೧೭ ಗೇರು ಉದ್ದಿಮೆಗಳು, ೧೬೧೦.೦೫ ಲಕ್ಷ ರೂಪಾಯಿ ಬಡವಾಳ ವಿನಿಯೋಗಿಸುವ ಮೂಲಕ ೯೮೩೨ ಜನರಿಗೆ ಉದ್ಯೋಗಾವಕಾಶ ಕಲ್ಪಿಸಿವೆ.

ಅಂತರಾಷ್ಟ್ರೀಯ ಮಟ್ಟದಲ್ಲಿಯೂ ಈ ಉದ್ಯಮ ಹೆಸರು ಮಾಡಿದ್ದು, ಜಿಲ್ಲೆಯ ಮಟ್ಟಿಗೆ ಮಹತ್ವದ ಸಂಗತಿಯೆಂದು ಹೇಳಬಹುದು. ಭಾರತದಲ್ಲಿಯೇ ಈ ಉದ್ಯಮಗಳು ಕೇರಳದ ಕ್ವಿಲಾನ್ ಮತ್ತು ಕರ್ನಾಟಕದ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಕೇಂದ್ರಿಕೃತವಾಗಿವೆ. ಭಾರತದಲ್ಲಿ ಬೆಳೆಯುವ ಗೇರು ಬೀಜ ಇಲ್ಲಿನ ಕಾರ್ಖಾನೆಗಳ ಉತ್ಪಾದನಾ ಸಾಮರ್ಥ್ಯಕ್ಕೆ ಬೇಕಾದಷ್ಟು ಇಲ್ಲದಿರುವುದರಿಂದ ಆಫ್ರಿಕಾದಿಂದ ಕಚ್ಚಾ ಗೇರುಬೀಜವನ್ನು ಆಮದು ಮಾಡಿಕೊಳ್ಳಲಾಗುತ್ತಿದೆ.

ಗೋಡಂಬಿ ಉದ್ಯಮದಲ್ಲಿ ಮೂರು ಬಗೆಯ ಕಚ್ಚಾ ಗೋಡಂಬಿಯನ್ನು ಬಳಸಲಾಗುತ್ತಿದೆ. ೧. ಒಂದೇ ತೆರನಾದ ಉದ್ದವಾದ ಉತ್ತಮ ಗುಣಮಟ್ಟದ ಹಾಗೂ ಎಣ್ಣೆ ತೆಗೆಯಲು ಯೋಗ್ಯವಾದ ಸ್ಥಳೀಯವಾಗಿ ಉತ್ಪಾದಿಸುವ ಗೋಡಂಬಿ. ೨. ಸ್ಥಳೀಯವಾಗಿ ಲಭ್ಯವಿರುವ ಗೋಡಂಬಿಗಿಂತ ಆಫ್ರಿಕಾದ ತುಂಡಾಗಿರುವ ಗೋಡಂಬಿಗೆ ಅಧಿಕ ಬೇಡಿಕೆ ಇದ್ದು, ಈ ಗೋಡಂಬಿಯಲ್ಲಿ ಎಣ್ಣೆ ಅಂಶ ಕಡಿಮೆಯಿದೆ. ಸುಮಾರು ೭೬ ಕೆ.ಜಿ.ಗೆ ೪.೫ ರಿಂದ ೬.೩೫ ಕೆ.ಜಿ. ಪ್ರಮಾಣದಷ್ಟು ಎಣ್ಣೆಯ ಅಂಶವಿದೆ. ೩. ಉತ್ತರ ಕನ್ನಡದಿಂದ ತರಿಸಿಕೊಳ್ಳುವ ಗೋಡಂಬಿಯನ್ನು, ಸ್ಥಳೀಯ ಗೋಡಂಬಿಗೆ ಹೋಲಿಸಿದರೆ ಇದು ಉತ್ತಮ ಗುಣಮಟ್ಟದ್ದಾಗಿರಲಿಲ್ಲ.

ಗೇರುಬೀಜ ಕಂದು ಹಸಿರು ಬಣ್ಣದ ಹೊರಸಿಪ್ಪೆಯನ್ನು ಹೊಂದಿದ್ದು, ಅದರ ಮಧ್ಯೆ ದಪ್ಪಗಿರುವ ಹೊದಿಕೆಯಿದ್ದು, ಒಳಭಾಗದಲ್ಲಿ ಬಿಳಿಯ ಬಣ್ಣದ ತಿರಳನ್ನು ಹೊಂದಿದೆ. ತಿರುಳಿನ ಹೊರಪದರದಲ್ಲಿ ತೆಳ್ಳಗಿನ ಕಂದು ಬಣ್ಣದ ಹೊದಿಕೆಯಿದೆ. ಯಂತ್ರಗಳ ಮೂಲಕ ದಪ್ಪಗಿರುವ ಹೊರ ತೊಗಟೆಯನ್ನು ಕತ್ತರಿಸಿ ತೆಗೆಯಲಾಗುತ್ತದೆ. ನಂತರ ಕಂದುಬಣ್ಣದ ಹೊದಿಕೆಯಿಂದ ಒಳ ತಿರುಳನ್ನು ಪ್ರತ್ಯೇಕಿಸಬೇಕು. ಹೀಗೆ ತಿರುಳನ್ನು ಕಂದುಬಣ್ಣದ ಹೊದಿಕೆಯಿಂದ ಒಳ ತಿರುಳನ್ನು ಪ್ರತ್ಯೇಕಿಸುವ ಕೆಲಸ ಬಹಳ ನಾಜೂಕಿದಾಗಿದ್ದು, ಅದನ್ನು ಮಹಿಳಾ ಕಾರ್ಮಿಕರಿಂದ ಮಾಡಿಸಲಾಗುತ್ತದೆ. ಬಹಳ ನಾಜೂಕು ಮತ್ತು ತಾಳ್ಮೆಯನ್ನು ಬಯಸುವ ಕೆಲಸವಾಗಿರುವ ಕಾರಣ ಇದರಲ್ಲಿ ಮಹಿಳೆಯರೇ ತೊಡಗಿರುವುದೊಂದು ವಿಶೇಷ. ಬೀಜದ ತಿರುಳಿನ ತೂಕ, ಬಣ್ಣ ಮತ್ತು ಬೆಳವಣಿಗೆಯನ್ನು ಅಲವಂಬಿಸಿ ೨೦ ವಿಧದಲ್ಲಿ ವಿಂಗಡಿಸಿ ಪ್ರತಿಯೊಂದು ವಿಧವನ್ನು ಒಂದು ಗುಣಮಟ್ಟದ ಉತ್ಪನ್ನವೆಂದು ಪರಿಗಣಿಸಲಾಗುತ್ತದೆ. ಗುಣಮಟ್ಟ ನಿರ್ಧಾರದಲ್ಲಿ ಒಳತಿರುಳು ಪುಡಿಯಾಗದೇ ಇಡೀಯಾಗಿರುವ ಅಂಶ ಪ್ರಮುಖ ಪಾತ್ರ ವಹಿಸುತ್ತದೆ. ಭಾರತವನ್ನು ಹೊರತುಪಡಿಸಿ ಇತರ ದೇಶಗಳು ಉತ್ಪಾದಿಸುವ ಗೋಡಂಬಿಯ ತಿರುಳು ಸಮಗ್ರವಾಗಿ ಉಳಿಯದೇ ಪುಡಿಯಾಗುತ್ತದೆ. ಹಾಗಾಗಿಯೇ ಗುಣಮಟ್ಟದಲ್ಲಿ ಭಾರತದ ಗೋಡಂಬಿ ಉತ್ಕೃಷ್ಟವಾಗಿದೆ. ಬೀಜಗಳನ್ನು ನಂತರ ತೇವ ಆರಿಸಿ ಒಣಗಿಸಲಾಗುತ್ತದೆ. ಬೇಡಿಕೆಗನುಗುಣವಾಗಿ ಒಣಗಿಸುವ ಸಂದರ್ಭದಲ್ಲಿ ಉಪ್ಪು, ಖಾರವನ್ನು ಬೆರೆಸಿ ವಿವಿಧ ರುಚಿಯಲ್ಲಿ ಗೋಡಂಬಿಯನ್ನು ಸಿದ್ಧಪಡಿಸಲಾಗುತ್ತದೆ. ಹೀಗೆ ಸಿದ್ಧಪಡಿಸಿದ ಗೋಡಂಬಿಯನ್ನು ಅಲ್ಯುಮಿನಿಯಂ ಡಬ್ಬಗಳಲ್ಲಿ ತುಂಬಿಸಿ ರಫ್ತು ಮಾಡಲಾಗುತ್ತದೆ. ಮಂಗಳೂರು ಬಂದರಿನ ಮೂಲಕ ಪ್ರಪಂಚದ ಬೇರೆ ಬೇರೆ ರಾಷ್ಟ್ರಗಳಿಗೆ ಜಿಲ್ಲೆಯ ಗೋಡಂಬಿ ಉತ್ಪನ್ನ ಮಾರಾಟವಾಗುತ್ತದೆ.

ಜಿಲ್ಲೆಯಲ್ಲಿ ಉತ್ಪತ್ತಿಯಾಗುವ ಗೋಡಂಬಿಯು ಅಮೇರಿಕಾ, ಕೊಲ್ಲಿ ದೇಶಗಳು, ಇಂಗ್ಲೆಂಡ್, ರಷ್ಯಾ, ಜಪಾನ್, ಆಸ್ಟ್ರೇಲಿಯಾ ಮತ್ತಿತರ ದೇಶಗಳಿಗೆ ರಫ್ತು ಮಾಡಲಾಗುತ್ತಿದೆ. ಇವುಗಳಿಂದ ದೊರೆಯುವ ವಿದೇಶಿ ವಿನಿಮಯವು ಜಿಲ್ಲೆಯ ಅಭಿವೃದ್ಧಿಯ ದೃಷ್ಟಿಯಿಂದ ಪ್ರಮುಖವಾಗಿದೆ. ಮಹಿಳಾ ಕಾರ್ಮಿಕರು ಬಹಳಷ್ಟು ಸಂಖ್ಯೆಯಲ್ಲಿ ಲಭ್ಯವಿರುವ ಕಾರಣ ಉಡುಪಿಗಿಂತ ಕಾರ್ಕಳ ಮತ್ತು ಕುಂದಾಪುರಗಳಲ್ಲಿ ಹೆಚ್ಚು ಗೋಡಂಬಿ ಉದ್ದಿಮೆಯನ್ನು ಕಾಣಬಹುದಾಗಿದೆ.

ಗೇರುಬೀಜದ ತಿರುಳು ಸಂಗ್ರಹಿಸಿ ಉಳಿದ ಸಿಪ್ಪೆಯೂ ಉಪಯುಕ್ತವಾಗಿದೆ. ಇದರಿಂದ ಗೇರುಬೀಜದ ಎಣ್ಣೆಯನ್ನು ಪಡೆಯಲಾಗುವುದು. ಗೇರುಬೀಜದ ಎಣ್ಣೆಗೂ ಇಂದು ಬಹುಬೇಡಿಕೆಯಿದೆ. ಅರಗು, ಪೈಂಟ್ ತಯಾರಿಕೆ, ಇನ್ಸುಲೈಟಿಂಗ್ ವಾರ್ನಿಷ್, ವಾಟರ್ ಪ್ರೂಫಿಂಗ್, ಬ್ರೇಕ್ ಲೈನರ್ಸ್‌ಗಳಲ್ಲಿ ಮುಂತಾದವುಗಳಲ್ಲಿ ಗೇರು ಬೀಜದ ಎಣ್ಣೆ ಉಪಯೋಗವಾಗುತ್ತದೆ. ಗೇರುಬೀಜದ ಎಣ್ಣೆಗೆ ವಿದೇಶಗಳಲ್ಲಿಯೂ ಬೇಡಿಕೆ ಇದೆ.

ಭಾರತದಲ್ಲಿ ಕೈಗಾರಿಕಾ ಕೇಂದ್ರಗಳಾದ ಬೊಂಬಾಯಿ, ಅಹಮದಾಬಾದ್, ಫರೀದಾಬಾದ್, ಕಲ್ಕತ್ತಾ, ಕೊಯಂಬತ್ತೂರು ಮುಂತಾದೆಡೆಗಳಲ್ಲಿ ಗೇರು ಬೀಜದೆಣ್ಣೆಗೆ ಬಹಳ ಬೇಡಿಕೆಯಿದೆ.

ಗೇರು ಬೀಜದ ಬೆಳೆಯು ಒಂದು ಋತುವಿನಲ್ಲಿ ಮಾತ್ರ ಬೆಳೆಯುವ ಬೆಳೆಯಾಗಿರುವ ಕಾರಣ ಗೋಡಂಬಿ ಉದ್ಯಮ ಗೇರುಬೀಜವನ್ನು ಇಡೀ ವರ್ಷಕ್ಕಾಗುವಷ್ಟು ದಾಸ್ತಾನು ಮಾಡಿಟ್ಟುಕೊಳ್ಳಬೇಕಾದ ಪರಿಸ್ಥಿತಿಯಿದೆ. ಮಾತ್ರವಲ್ಲ ಸ್ಥಳೀಯ ಕಾರ್ಖಾನೆಗಳಿಗೆ ಅಗತ್ಯವಿರುವಷ್ಟು ಗೇರುಬೀಜ ಸ್ಥಳೀಯ ಮಟ್ಟದಲ್ಲಿ ಉತ್ಪಾದನೆಯಾಗುವುದಿಲ್ಲ. ಅಧಿಕ ಪ್ರಮಾಣದಲ್ಲಿ ಗೇರು ಬೀಜ ಪೂರೈಕೆ ಹಾಗೂ ವರ್ಷವಿಡೀ ಕಚ್ಚಾ ಸಾಮಗ್ರಿ ಪೂರೈಸುವ ವ್ಯವಸ್ಥೆಯ ಅವಶ್ಯವಿದೆ. ಗೇರು ತಳಿಯ ಬಗ್ಗೆ ಸಂಶೋಧನೆಗಳು ನಡೆಯುತ್ತಿದ್ದು ದಕ್ಷಿಣ ಕನ್ನಡ ಜಿಲ್ಲೆಯಾದ ಉಳ್ಳಾಲ, ಪುತ್ತೂರು, ವಿಟ್ಲ ಹಾಗೂ ಕಾಸರಗೋಡಿನಲ್ಲಿರುವ ಕೃಷಿ ಸಂಶೋಧನಾ ಕೇಂದ್ರಗಳು ಈ ದಿಸೆಯಲ್ಲಿ ಕಾರ್ಯನಿರತವಾಗಿವೆ.

### ಜಿಲ್ಲೆಯ ಪ್ರಮುಖ ಗೋಡಂಬಿ ಉದ್ಯಮಗಳು

ಆದರ್ಶ ಕ್ಯಾಶ್ಯೂ ಇಂಡಸ್ಟ್ರೀಸ್, ಸಾಸ್ತಾನ (ಕುಂದಾಪುರ); ಬೋಳ ರಾಘವೇಂದ್ರ ಕಾಮತ್ ಮತ್ತು ಮಕ್ಕಳು, ಕಾರ್ಕಳ; ಬೊಲ್ಕರ್ ಕ್ಯಾಶ್ಯೂಸ್, ಅಜೆಕಾರು (ಕಾರ್ಕಳ); ಕಾರ್ಲ ಕ್ಯಾಶ್ಯೂಸ್, ಕಾರ್ಕಳ; ಚಿತ್ತಾರ ಕ್ಯಾಶ್ಯೂಸ್ ವಂಡಾರ್ ಮಂದರ್ತಿ (ಕುಂದಾಪುರ); ಪಾಲ್ಕನ್ ಕ್ಯಾಶ್ಯೂಸ್, ಕೊಳಲಗಿರಿ (ಉಡುಪಿ); ಗಜಾನನ ಕ್ಯಾಶ್ಯೂಸ್, ಕುಚ್ಚೂರು, ಹೆಬ್ರಿ (ಕಾರ್ಕಳ); ಗಜಾನನ ಕ್ಯಾಶ್ಯೂಸ್, ಸಿದ್ದಾಪುರ, (ಕುಂದಾಪುರ); ಗಾಯತ್ರಿ ಕ್ಯಾಶ್ಯೂಸ್, ಅತ್ತೂರು, (ಕಾರ್ಕಳ); ಗ್ರೀನ್‌ಲ್ಯಾಂಡ್ ಇಂಡಸ್ಟ್ರೀಸ್, ಕುಕ್ಕುಂದೂರು (ಕಾರ್ಕಳ); ಗುಲ್ವಾಡಿ ಕ್ಯಾಶ್ಯೂಸ್, ಮಾವಿನಕಟ್ಟೆ (ಕುಂದಾಪುರ); ಗುರುಗಣೇಶ್ ಇಂಡಸ್ಟ್ರೀಸ್, ಪೆರ್ಡೂರು (ಉಡುಪಿ); ಕಾಮಾಕ್ಷಿ ಎಕ್ಸಪೋರ್ಟ್ಸ್, ಕಾರ್ಕಳ; ಕಾರ್ಕಳ ಕ್ಯಾಶ್ಯೂ ಪ್ರೊಡಕ್ಟ್ಸ್, ಕಾರ್ಕಳ; ಕೋಟಿ ತೀರ್ಥ ಕ್ಯಾಶ್ಯೂ ಇಂಡಸ್ಟ್ರೀಸ್, ತೆಕ್ಕಟ್ಟೆ (ಕುಂದಾಪುರ); ಲಕ್ಷ್ಮೀ ಕ್ಯಾಶ್ಯೂ ಇಂಡಸ್ಟ್ರೀಸ್, ಹೆಬ್ರಿ (ಕಾರ್ಕಳ); ಮಹಾಲಸ ಎಕ್ಸಪೋರ್ಟ್ಸ್, ಹಿರಿಯಡ್ಕ, (ಉಡುಪಿ); ಮಹಾಲಕ್ಷ್ಮೀ ಕ್ಯಾಶ್ಯೂ ಇಂಡಸ್ಟ್ರೀಸ್, ಶಿವಪುರ, ಹೆಬ್ರಿ (ಕಾರ್ಕಳ); ಮುಕಾಂಬಿಕಾ ಕ್ಯಾಶ್ಯೂ ಇಂಡಸ್ಟ್ರೀಸ್, ತಗ್ಗರ್ಸೆ, (ಕುಂದಾಪುರ); ಕಾಮತ್ ಕ್ಯಾಶ್ಯೂ ಇಂಡಸ್ಟ್ರೀಸ್, ಸಾಣೂರು (ಕಾರ್ಕಳ); ಸಾಣೂರು ಕ್ಯಾಶ್ಯೂ ಇಂಡಸ್ಟ್ರೀಸ್, ಸಾಣೂರು (ಕಾರ್ಕಳ); ನವನೀತ ಕ್ಯಾಶ್ಯೂಸ್, ಪೆರ್ಡೂರು (ಉಡುಪಿ); ನ್ಯೂ ದಾಮೋದರ ಕ್ಯಾಶ್ಯೂ ಇಂಡಸ್ಟ್ರೀಸ್, ಕುಕ್ಕುಂದೂರು (ಕಾರ್ಕಳ); ನ್ಯೂ ರಮಾನಾಥ ಕ್ಯಾಶ್ಯೂ ಇಂಡಸ್ಟ್ರೀಸ್, ಮುದ್ರಾಡಿ (ಕಾರ್ಕಳ); ಪ್ರಗತಿ ಕ್ಯಾಶ್ಯೂಸ್ ಕುಚ್ಚೂರು, ಹೆಬ್ರಿ (ಕಾರ್ಕಳ); ಪೃಥ್ವಿ ಕ್ಯಾಶ್ಯೂಸ್, ಬೊಳಂಬೈಲ್, ಕಾಲ್ತೋಡು, (ಕುಂದಾಪುರ); ಆರ್.ಕೆ. ಕ್ಯಾಶ್ಯೂಸ್, ಮೂಡುಬೆಳ್ಳೆ (ಉಡುಪಿ); ರಾಧಾಕೃಷ್ಣ ಕ್ಯಾಶ್ಯೂ ಇಂಡಸ್ಟ್ರೀಸ್, ಕೆಮ್ಮಣ್ಣು, (ಉಡುಪಿ); ಸಂತೋಷ್ ಕ್ಯಾಶ್ಯೂಸ್, ನಿಟ್ಟೆ (ಕಾರ್ಕಳ); ಸಪ್ತಮಿ ಕ್ಯಾಶ್ಯೂ ಇಂಡಸ್ಟ್ರೀಸ್, ಸೇನಾಪುರಂ (ಕುಂದಾಪುರ); ಶ್ರೀ ದೇವಿಪ್ರಸಾದ್ ಕ್ಯಾಶ್ಯೂ ಇಂಡಸ್ಟ್ರೀಸ್, ಕುದ್ರುಬೀಡು (ಕುಂದಾಪುರ); ಸೌತ್ ಇಂಡಿಯಾ ಕ್ಯಾಶ್ಯೂಸ್, ಕುಂಬಾಳೆ, (ಕುಂದಾಪುರ); ದುರ್ಗಾ ಪ್ರಸಾದ್ ಕ್ಯಾಶ್ಯೂ ಇಂಡಸ್ಟ್ರೀಸ್, ಜಾನುವಾರುಕಟ್ಟೆ (ಉಡುಪಿ); ಕೃಷಿ ಕಾರ್ಮಿಕರ ಗ್ರಾಮೋದಯ, ಶಿವಪುರ, (ಕಾರ್ಕಳ); ವಿನಾಯಕ ಕ್ಯಾಶ್ಯೂ ಇಂಡಸ್ಟ್ರೀಸ್, ಹೆಬ್ರಿ (ಕಾರ್ಕಳ); ಶ್ರೀನಿವಾಸ ಕ್ಯಾಶ್ಯೂ ಇಂಡಸ್ಟ್ರೀಸ್, ಬೆಳ್ವೆ (ಕುಂದಾಪುರ); ವಿಜಯಲಕ್ಷ್ಮೀ ಕ್ಯಾಶ್ಯೂ ಇಂಡಸ್ಟ್ರೀಸ್, ಶಂಕರನಾರಾಯಣ (ಕುಂದಾಪುರ); ಮುಂತಾದುವು. ಇವುಗಳಲ್ಲದೇ ಇತರ ೧೮೦ ಸಣ್ಣ ಪ್ರಮಾಣದ ಉದ್ದಿಮೆಗಳೂ ಜಿಲ್ಲೆಯಲ್ಲಿ ಅಸ್ತಿತ್ವದಲ್ಲಿವೆ.

## ಬೀಡಿ ಉದ್ಯಮ

ಉಡುಪಿ ಜಿಲ್ಲೆಯ ಅಭಿವೃದ್ಧಿಗೆ ಅತ್ಯಮೂಲ್ಯ ಕಾಣಿಕೆ ನೀಡಿರುವ 'ಬೀಡಿ ಉದ್ಯಮ'ದ ಬಗ್ಗೆ ಉಲ್ಲೇಖಿಸುವುದು ಗಮನಾರ್ಹವಾಗಿದೆ. ಬೀಡಿ ಉದ್ಯಮದಲ್ಲಿ ತೊಡಗಿಸಲಾದ ಬಂಡವಾಳ, ಸೃಷ್ಟಿಸಲಾದ ಉದ್ಯೋಗ ಮತ್ತು ವಾರ್ಷಿಕ ವಹಿವಾಟಿನ ಬಗೆಗೆ ಸಮಗ್ರವಾದ ಮತ್ತು ವಾಸ್ತವಿಕವಾದ ಮಾಹಿತಿ ಇಲ್ಲದಿದ್ದರೂ, ಜಿಲ್ಲೆಯಲ್ಲಿ ಸುಮಾರು ಒಂದು ಲಕ್ಷದ ತೊಂಬತ್ತೈದು ಸಾವಿರ ಬೀಡಿ ಕಾರ್ಮಿಕರಿದ್ದಾರೆ. ಇವರೆಲ್ಲರೂ ಬಹುಪಾಲು ಗುತ್ತಿಗೆ ಆಧಾರದ ಮೇಲೆ ದುಡಿಯುವ ಕಾರ್ಮಿಕರು. ಜಿಲ್ಲೆಯಲ್ಲಿ ೩೦ನೇ ನಂಬರಿನ ಬೀಡಿ,

ಪ್ರಕಾಶ್ ಬೀಡಿ, ಗಣೇಶ್ ಬೀಡಿ, ಶೆಣೈ ಬೀಡಿ, ಪೈಲ್ವಾನ್ ಬೀಡಿ, ದೇಸಾಯಿ ಬೀಡಿ ಮುಂತಾದ ಕಂಪನಿಗಳಿವೆ. ಆದರೆ ಬೀಡಿ ಕಂಪನಿಯಲ್ಲಿ ನೇರವಾಗಿ ಉದ್ಯೋಗದಲ್ಲಿರುವವರು ಕಡಿಮೆಯೇ, ಹೆಚ್ಚಿನವರು ಗುತ್ತಿಗೆ ಆಧಾರದಲ್ಲಿ ದುಡಿಯುತ್ತಿದ್ದಾರೆ.

೨೦ನೇ ಶತಮಾನದ ಪೂರ್ವಾರ್ಧದವರೆಗೂ ಇದೊಂದು ಸಂಘಟಿತ ವಲಯದಲ್ಲಿಯೇ ನಡೆಯುತ್ತಿದ್ದ ಉದ್ದಿಮೆಯಾಗಿದ್ದಿತು. ಆದರೆ ೧೯೪೬ರ ನಂತರ ಮಾಲೀಕ ಹಾಗೂ ಕಾರ್ಮಿಕರ ನಡುವಿನ ವಿವಾದದಿಂದಾಗಿ ಇದು ಗುತ್ತಿಗೆ ಆಧಾರದ ಮೂಲಕ ನಡೆಯುವ ಉದ್ಯಮವಾಗಿ ರೂಪಾಂತರ ಹೊಂದಿತು. ಆದಾಗ್ಯೂ ಕಾರ್ಮಿಕ ಸಂಘಟನೆಗಳ ತೀವ್ರ ಒತ್ತಡದಿಂದಾಗಿ ಹಲವಾರು ಕಲ್ಯಾಣ ಕ್ರಮಗಳನ್ನು ಬೀಡಿ ಉದ್ಯಮದಲ್ಲಿ ದುಡಿಯುವ ವರ್ಗ ಪಡೆಯುವಂತಾಯ್ತು. ಬೀಡಿ ಉದ್ಯಮದಲ್ಲಿ ಪರೋಕ್ಷವಾಗಿ ಅಂದರೆ ಗುತ್ತಿಗೆ ಆಧಾರದಲ್ಲಿ ದುಡಿಯುವವರಲ್ಲಿ ಮಹಿಳೆಯರದೇ ಮೇಲುಗೈ. ಒಂದು ಅಂದಾಜಿನ ಪ್ರಕಾರ ಶೇಕಡಾ ೯೬ರಷ್ಟು ಮಹಿಳೆಯರು ಅದರಲ್ಲಿಯೂ ಹದಿನೆಂಟರಿಂದ ನಲ್ವತ್ತು ವರ್ಷ ವಯಸ್ಸಿನೊಳಗಿರುವ ಮಹಿಳೆಯರೇ ಅಧಿಕವಾಗಿದ್ದಾರೆ.

ಬೀಡಿ ಉದ್ಯಮವನ್ನು ಪ್ರೋತ್ಸಾಹಿಸಲು ಕೈಗೊಂಡ ಕೆಲವೊಂದು ಕ್ರಮಗಳು ಉದ್ಯೋಗಿಗಳಿಗೆ ಮಾರಕವಾಗಿವೆ. ಕಾರ್ಮಿಕರ ವೇತನ ಇತರೆ ರಾಜ್ಯಗಳಿಗೆ ಹೋಲಿಸಿದರೆ ಕರ್ನಾಟಕದಲ್ಲಿ ವೇತನದ ಪ್ರಮಾಣ ಕಡಿಮೆ ಇರುವ ಕಾರಣ ಈ ಉದ್ಯಮವು ಬೇರೆ ರಾಜ್ಯಗಳಿಗೆ ವರ್ಗಾವಣೆಗೊಳ್ಳುವ ಮೂಲಕ ದುಡಿಯುವ ಕೈಗಳಿಗೆ ಹೊಡೆತ ನೀಡಿದೆ. ದೊಡ್ಡ ಪ್ರಮಾಣದಲ್ಲಿ ಉತ್ಪಾದನೆ ನಡೆಸುವ ಮತ್ತು ಕಾರ್ಮಿಕರಿಗೆ ಕಾನೂನಿನನ್ವಯ ಸವಲತ್ತು ನೀಡುವ ಕೈಗಾರಿಕೆಗಳ ಉತ್ಪಾದನಾ ವೆಚ್ಚದಲ್ಲಿ ಅನಿವಾರ್ಯವಾಗಿ ಹೆಚ್ಚಳವಾಗಿದೆ, ಸರಕಾರದ ಪ್ರೋತ್ಸಾಹ ಪಡೆಯುವ ಸಣ್ಣ ಘಟಕಗಳ ಉತ್ಪಾದನಾ ವೆಚ್ಚ ಕಡಿಮೆ ಇದ್ದು, ದೊಡ್ಡ ಉದ್ದಿಮೆಗಳಿಗೆ ತೀವ್ರ ಪೈಪೋಟಿ ನೀಡುತ್ತಿವೆ. ಈ ಎಲ್ಲಾ ಕಾರಣಗಳಿಂದ ಬೀಡಿ ಉದ್ಯಮವು ಸೊರಗುತ್ತಿದೆ. ಮಾತ್ರವಲ್ಲ ಸಿಗರೇಟು ಕಂಪನಿಗಳಿಂದ ಬರುತ್ತಿರುವ ಪ್ರತಿಸ್ಪರ್ಧೆ, ಧೂಮಪಾನದ ವಿರುದ್ಧ ರೂಪುಗೊಳ್ಳುತ್ತಿರುವ ಜನಾಭಿಪ್ರಾಯ, ಇತ್ಯಾದಿ ಅಂಶಗಳು ಬೀಡಿ ಉದ್ಯಮಕ್ಕೆ ಕಂಟಕ ಪ್ರಾಯವಾಗಿ ಮುಂದುವರಿಯುತ್ತಿವೆ. ಕಳೆದ ೫–೬ ವರ್ಷಗಳಲ್ಲಿ ಬೀಡಿ ಕಾರ್ಮಿಕರಿಗೆ ದೊರೆಯುವ ಕೆಲಸದ ಪ್ರಮಾಣದಲ್ಲಿ ಶೇಕಡಾ ೬೦ರಷ್ಟು ಇಳಿತ ಕಂಡುಬಂದಿದೆ. ಬೀಡಿ ಕಾರ್ಮಿಕರಲ್ಲಿ ಸಂಘಟನಾ ಶಕ್ತಿ ಬೆಳೆದಂತೆ, ಕೆಲಸಗಾರರಿಗೆ ದೊರೆಯಬೇಕಿದ್ದ ಸವಲತ್ತುಗಳು ಸಿಗತೊಡಗಿದುವು ಎಂಬುದೇನೋ ನಿಜ ಆದರೆ ಬೀಡಿ ಉದ್ಯಮ ರೂಪಾಂತರ ಹೊಂದುವ ಮೂಲಕ ಕಾರ್ಮಿಕ ವರ್ಗದ ಸ್ವರೂಪವೇ ಬದಲಾಗಿದೆ.

ಕೇಂದ್ರ ಸರಕಾರವು ವಾರ್ಷಿಕ ೨೦ ಲಕ್ಷ ಅಥವಾ ಅದಕ್ಕಿಂತ ಕಡಿಮೆ ಬೀಡಿ ಉತ್ಪಾದಿಸುವವರನ್ನು ಸಣ್ಣ ಪ್ರಮಾಣದ ಉತ್ಪಾದಕರೆಂದು ಗುರುತಿಸಿ ಅಂತಹ ಉತ್ಪಾದಕರಿಗೆ ಅಬಕಾರಿ ಸುಂಕದಿಂದ ವಿನಾಯಿತಿ ನೀಡಿದೆ. ಇದರಿಂದ ಟ್ರೇಡ್ ಮಾರ್ಕ್ ಹೊಂದದ ಅನೇಕ ಬೀಡಿ ಉತ್ಪಾದಕರು ನಾಯಿಕೊಡೆಗಳಂತೆ ತಲೆಯೆತ್ತಿದ್ದಾರೆ. ಇಂತಹ ಉತ್ಪಾದಕರು ಯಾವುದೇ ಕಾರ್ಮಿಕರನ್ನು ಇಟ್ಟುಕೊಳ್ಳದೇ ಇತರ ಕಂಟ್ರಾಕ್ಟುದಾರರ ಮೂಲಕ ಅಥವಾ ನೇರವಾಗಿ ಕಾರ್ಮಿಕರಿಗೆ ಕೆಲಸ ನೀಡಿ ಬೀಡಿ ಕಟ್ಟಿಸಿ ಮಾರಾಟ ಮಾಡುತ್ತಾರೆ. ಇಂತಹ ಉತ್ಪಾದಕರ ಉತ್ಪಾದನಾ ವೆಚ್ಚ ಕಡಿಮೆ ಇರುವ ಕಾರಣ ಅವರು ಮಾರಾಟಗಾರರಿಗೆ ಅಧಿಕ ಕಮಿಶನ್ ನೀಡಿ ಮಾರುಕಟ್ಟೆಯನ್ನು ಆಕ್ರಮಿಸಿಕೊಂಡಿದ್ದಾರೆ.

## ಹೆಂಚಿನ ಕಾರ್ಖಾನೆ

ಕರಾವಳಿ ಜಿಲ್ಲೆಯಲ್ಲಿ ಆರಂಭವಾದ ಪ್ರಮುಖ ಉದ್ಯಮಗಳಲ್ಲಿ ಹೆಂಚಿನ ಉದ್ಯಮ ಪ್ರಮುಖವಾದುದು. 'ಮಂಗಳೂರು ಹೆಂಚು' ಎಂದೇ ಇಂದಿಗೂ ಪ್ರಸಿದ್ಧಿ ಪಡೆದುಕೊಂಡಿದೆ. ಇಲ್ಲಿ ತಯಾರಾಗುವ ಹೆಂಚುಗಳು ಹೆಂಚಿನ ಕಾರ್ಖಾನೆಯ ಹೊಗೆ ಗೋಪುರಗಳು ಕರಾವಳಿ ಜನರಿಗೆ ಆಧುನಿಕ ಕೈಗಾರಿಕೆಗಳನ್ನು ಪರಿಚಯಿಸಿದವು ಎಂದು ಹೇಳಿದರೆ ಇದು ಅತಿಶಯೋಕ್ತಿಯ ಮಾತಲ್ಲ.

ಸ್ವಾತಂತ್ರ್ಯ ಪೂರ್ವದ ದಿನಗಳಲ್ಲಿ ಮತಾಂತರಗೊಂಡ ಸ್ಥಳೀಯರಿಗೆ ಬದಲೀ ಉದ್ಯೋಗ ಕಲ್ಪಿಸುವ ದಿಸೆಯಲ್ಲಿ ೧೮೬೫ರಲ್ಲಿ ಜರ್ಮನಿಯ ಬಾಸೆಲ್ ಮಿಶನ್ 'ಮಂಗಳೂರು ಹೆಂಚು' ತಯಾರಿಕೆಯನ್ನು ಉದ್ಯಮವಾಗಿ ಆರಂಭಿಸಿತು. ಈ ಮೊದಲು ಈ ಪ್ರದೇಶದಲ್ಲಿ ನಾಡ ಹೆಂಚು ಬಳಕೆಯಲ್ಲಿದ್ದು, ಇದನ್ನು ಕುಂಬಾರರು ಪಾರಂಪರಿಕ ವಿಧಾನಗಳ ಮೂಲಕ ತಯಾರಿಸುತ್ತಿದ್ದರು. ಹೆಂಚಿನ ತಯಾರಿಕೆಗೆ ಅಗತ್ಯವಾದ ಆವೆ ಮಣ್ಣು ನದಿಮುಖಜ ಭೂಮಿಯಲ್ಲಿರುವುದರಿಂದ ಹೊಳೆಯ ದಂಡೆಯಲ್ಲಿ ಸಾಮಾನ್ಯವಾಗಿ ಹರಿವಿನ ರಭಸ ಕಡಿಮೆ ಇರುವ, ಸಮುದ್ರ ಸೇರುವ ಒಳಪ್ರದೇಶದಲ್ಲಿ ದೊರೆಯುತ್ತದೆ. ಬಹುತೇಕ ಹೆಂಚಿನ ಕಾರ್ಖಾನೆಗಳು ಅಂತಹ ಕಡೆಗಳಲ್ಲಿವೆ. ಮಣ್ಣನ್ನು ಬಹುದೂರ ಸಾಗಿಸುವುದು ವೆಚ್ಚದಾಯಕವಾಗಿರುವ ಕಾರಣ ಆವೆ ಮಣ್ಣಿನ ಲಭ್ಯತೆ ಇರುವಲ್ಲಿಯೇ ಈ ಕೈಗಾರಿಕೆ ಬೆಳೆದು ಬಂದಿದೆ. ಹೆಂಚಿನ ಕಾರ್ಖಾನೆಗಳಿಗೆ ಭಾರಿಪ್ರಮಾಣದ ಉರುವಲು ಬೇಕಾಗುತ್ತದೆ. ಆವೆ ಮಣ್ಣನ್ನು ಹದಗೊಳಿಸಿ ಅಚ್ಚುಗಳಲ್ಲಿ ಲಟ್ಟಿಸಿ ನಂತರ ನಿರ್ದಿಷ್ಟ ತಾಪಮಾನದಲ್ಲಿ ಮಣ್ಣನ್ನು ಸುಡಲಾಗುತ್ತದೆ. ಅರೆದು ಹದ ಮಾಡಲು ಹೆಂಚನ್ನು ಒತ್ತುವುದಕ್ಕೆ ಒತ್ತಿಟ್ಟ ಹೆಂಚನ್ನು ಸಾಗಿಸಲು ಉದ್ದವಾದ ಸರಪಣಿ, ಇತ್ಯಾದಿ ಕೆಲಸಗಳಲ್ಲಿ ವಿವಿಧ ರೀತಿಯ ಯಂತ್ರಗಳು ಬಳಕೆಯಾಗುತ್ತವೆ. ಬಹುತೇಕ ಹೆಂಚಿನ ಕಾರ್ಖಾನೆಗಳಲ್ಲಿ ಇಟ್ಟಿಗೆ ಮತ್ತು ಹೂಕುಂಡಗಳನ್ನು ಉತ್ಪಾದಿಸಲಾಗುತ್ತಿದೆ. ಉಡುಪಿ ಜಿಲ್ಲೆಯಲ್ಲಿ ೨೧ ಇಂತಹ ಕಾರ್ಖಾನೆಗಳಿದ್ದು, ರೂ. ೭೨೦ ಲಕ್ಷ ಬಂಡವಾಳ ಹೂಡಿದ್ದು, ೧೬೦ ಜನರಿಗೆ ಉದ್ಯೋಗ ಒದಗಿಸಿರುವುದು ಅಂಕಿ ಅಂಶಗಳಿಂದ ತಿಳಿದು ಬರುತ್ತದೆ.

## ಅಕ್ಕಿ ಗಿರಣಿ

ಉಡುಪಿ ಜಿಲ್ಲೆಯಲ್ಲಿ ೬೨,೧೦೩ ಹೆಕ್ಟೇರು ಪ್ರದೇಶದಲ್ಲಿ ಭತ್ತ ಬೆಳೆಯಲಾಗುತ್ತಿದ್ದು, ಜನರ ಪ್ರಮುಖ ಆಹಾರ ಬೆಳೆಯಾಗಿದೆ. ಒನಕೆಯಿಂದ ಭತ್ತವನ್ನು ಕುಟ್ಟಿ ಅಕ್ಕಿಯನ್ನು ಉತ್ಪಾದಿಸುವ ಪಾರಂಪರಿಕ ವಿಧಾನವೇ ಭತ್ತ ಕುಟ್ಟುವುದು. ಹಿಂದೆ ಭತ್ತ ಕುಟ್ಟುವ ಕೆಲಸವನ್ನು ಮನೆಯಲ್ಲಿ ಹೆಂಗಸರು ಮಕ್ಕಳು ಮಾಡುತ್ತಿದ್ದರು. ದೈಹಿಕ ಶ್ರಮ ಬೇಡುವ ಇಂತಹ ಕೆಲಸವನ್ನು ನಿರ್ವಹಿಸುವ ವೇಳೆಯಲ್ಲಿ ಆಯಾಸ ಕಳೆಯಲು ಹಾಡುಗಳನ್ನು ಗುಣ ಗುಣಿಸುವ ಒಂದು ಸಾಂಸ್ಕೃತಿಕ ಪರಂಪರೆಯೂ ಇತ್ತು.

ಆಧುನಿಕತೆಯು ಪ್ರಸರಣವಾದಂತೆಲ್ಲ ಮನುಷ್ಯ ಕೈಕಾಲುಗಳಿಗೆ ವಿಶ್ರಾಂತಿ ನೀಡಿ ಮೆದುಳಿಗೆ ಅಧಿಕ ಕೆಲಸ ನೀಡಲಾರಂಭಿಸಿದ ಪರಿಣಾಮ ಭತ್ತ ಕುಟ್ಟುವ ಚಟುವಟಿಕೆಯ ಮೇಲೆಯೂ ಆಗಿದೆ. ಇದರ ಪರಿಣಾಮವಾಗಿ ಭತ್ತದ ಮಿಲ್ಲುಗಳು ಹುಟ್ಟಿಕೊಂಡವು. ಮೊದ ಮೊದಲು ಬೆಳೆದ ಭತ್ತದಿಂದ ಅಥವಾ ಹೊರ ಜಿಲ್ಲೆಗಳಿಂದ ಸಗಟು ಪ್ರಮಾಣದಲ್ಲಿ ಭತ್ತ ಖರೀದಿಸಿ ಅದರಿಂದ ಅಕ್ಕಿ ತಯಾರಿಸಿ ಮಾರಾಟ ಮಾಡುವ ಅಕ್ಕಿ ಗಿರಣಿಗಳು ಅಸ್ತಿತ್ವಕ್ಕೆ ಬಂದವು. ಇಂತಹ ಉದ್ದಿಮೆಗಳು ಹೊರ ಜಿಲ್ಲೆಗಳಿಂದ ಬರುವ ಭತ್ತವನ್ನೇ ಅವಲಂಭಿಸಿ ಉತ್ಪಾದನೆ ಮಾಡುತ್ತಿದ್ದವು.

ಎಪ್ಪತ್ತರ ದಶಕದಲ್ಲಿ ಅಕ್ಕಿ ತಯಾರಿಸಲು ಅಥವಾ ಭತ್ತ ಕುಟ್ಟಲು ಜನ ದೊರೆಯದೇ ಹೋದಾಗ ಪರ್ಯಾಯ ವಿಧಾನಗಳ ಬಗ್ಗೆ ಹುಡುಕಾಟ ಪ್ರಾರಂಭವಾಯಿತು. ಇದರ ಪರಿಣಾಮವಾಗಿ 'ಹಲ್ಲರ್' ಎಂದೇ ಗುರುತಿಸಲ್ಪಡುವ ಸಣ್ಣ ಯಂತ್ರಗಳ ಮೂಲಕ ಅಕ್ಕಿ ಉತ್ಪಾದಿಸುವ ಉದ್ದಿಮೆ ಆರಂಭವಾಯಿತು. ಇಂತಹ ಹಲ್ಲರ್‌ಗಳನ್ನು ಸಾಮಾನ್ಯವಾಗಿ ನೀರೆತ್ತುವ ಪಂಪ್‌ಗಳಿಗೆ ಅಳವಡಿಸಿ ಅಕ್ಕಿ ಉತ್ಪಾದಿಸಲಾಗುತ್ತದೆ. ಇವುಗಳಲ್ಲಿ ವಿನಿಯೋಗಿಸಲಾದ ಬಂಡವಾಳ ಮತ್ತು ಇವುಗಳು ಹುಟ್ಟು ಹಾಕಿರುವ, ಉದ್ಯೋಗಗಳ ಬಗ್ಗೆ ನಿಖರವಾಗಿ ಹೇಳುವುದು ಅಸಾಧ್ಯವೆಂದೇ ಹೇಳಬಹುದು. ಯಾಕೆಂದರೆ ಹಲ್ಲರ್ ಮಿಲ್‌ಗಳ ಮೂಲಕ ಉತ್ಪಾದನಾ ಕ್ರಮ ಒಂದು ಸಣ್ಣ ಪ್ರಮಾಣದ ಉದ್ದಿಮೆಯಾಗಿರದೇ ಬದಲಿಗೆ ಒಂದು ಪೂರಕ ಆರ್ಥಿಕ ಚಟುವಟಿಕೆಯಾಗಿದೆ. ಜಿಲ್ಲೆಯಲ್ಲಿ ೨೦೦೬ರ ಮಾರ್ಚ್ ಅಂತ್ಯಕ್ಕೆ ಒಟ್ಟು ೨೨೭ ಅಕ್ಕಿ ಗಿರಣಿಗಳಿದ್ದು, ಇವುಗಳಲ್ಲಿ ೧೬೩೧.೧೩ ಲಕ್ಷ ರೂ.ಗಳ ಬಂಡವಾಳ ತೊಡಗಿಸಲಾಗಿದೆ. ಇವು ೧೬೫೮ ಮಂದಿಗೆ ಉದ್ಯೋಗ ಒದಗಿಸಿವೆ.

# ಮತ್ಸ್ಯೋದ್ಯಮ

'ಮತ್ಸ್ಯಕ್ರಾಂತಿ' ಅಥವಾ 'ನೀಲಿಕ್ರಾಂತಿ' ಎಂದೇ ಪ್ರಖ್ಯಾತವಾಗಿರುವ ಮೀನುಗಾರಿಕೆ ಜಿಲ್ಲೆಯ ಪ್ರಮುಖ ಸಂಪತ್ತಾಗಿದೆ. ಮೀನುಗಾರಿಕೆ ಆಹಾರದ ಮೂಲಗಳಲ್ಲಿ ಒಂದಾಗಿದೆ. ಏಕೆಂದರೆ ಇದರಲ್ಲಿ ವಿಟಮಿನ್ 'ಎ' ಮತ್ತು 'ಬಿ' ಅನ್ನಾಂಗವಿರುವುದು. ಜಿಲ್ಲೆಯಲ್ಲಿ ಬಂಗುಡೆ, ಬೂತಾಯಿ, ಅಂಜಾಲ್, ಕೇದರ್, ಮಾಂಜಿ, ಬಲ್ಲಿಯಾರ್, ತಾಟೆ, ಕಾಟೆ, ಅಡೆಮೀನು, ಗೂರಿಮೀನು, ಸೀಗಡಿ ಮುಂತಾದ ಜಾತಿಯ ಮತ್ಸ್ಯ ಸಂಪತ್ತು ಹೇರಳವಾಗಿದ್ದು, ಜಿಲ್ಲೆಯ ಆರ್ಥಿಕಾಭಿವೃದ್ಧಿಯಲ್ಲಿ ಮಹತ್ವದ ಪಾತ್ರವಹಿಸಿದೆ.

'ಬಂಗುಡೆ' ಮೀನು ವಿಫುಲವಾಗಿರುವುದರಿಂದ ಅದನ್ನು 'ರಾಷ್ಟ್ರೀಯ ಮೀನು' ಎಂದು ಕರೆಯಲ್ಪಟ್ಟಿದೆ. 'ಸೀಗಡಿ'ಯನ್ನು ಕಡಲಿನ ಚಿನ್ನದ ಗಣಿ ಎಂದೇ ಕರೆಯಲಾಗುತ್ತಿದೆ. ಜಿಲ್ಲೆಯ ಸಿಗಡಿಯನ್ನು ಜಪಾನ್ ಮುಂತಾದ ರಾಷ್ಟ್ರಗಳಿಗೆ ರಫ್ತು ಮಾಡುವ ಘಟಕ ಜಿಲ್ಲೆಯ ಮಲ್ಪೆಯಲ್ಲಿ ಇದೆ. ಹೀಗೆ ಕರಾವಳಿಯಲ್ಲಿ ಎರಡು ಶತಮಾನಗಳಷ್ಟು ಹಿಂದೆಯೇ ಮೀನುಗಾರಿಕೆ ಪ್ರಾರಂಭವಾಗಿದ್ದರೂ, ಯಾಂತ್ರೀಕರಣಗೊಂಡು ಆಧುನಿಕತೆಯ ಸ್ವರೂಪ ಶುರುವಾದದ್ದು ೧೯೫೦ರ ದಶಕದ ಕೊನೆಯಲ್ಲಿ ಮಾತ್ರ. ಆಗ ಕೇವಲ ನಾಡದೋಣಿಗಳು ಮಾತ್ರ ಬಳಕೆಯಲ್ಲಿದ್ದವು. ಓಡದೋಣಿಗಳು, ರಂಪಣಿ ದೋಣಿಗಳು ಹಾಗೂ ಮರದ ಹಲಗೆಗಳಿಂದ ರಚಿತವಾದವು ಪ್ರಮುಖವಾದವು.

ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ದ್ವಿತೀಯ ಪಂಚವಾರ್ಷಿಕ ಯೋಜನೆಯವರೆಗೂ ಮೀನುಗಾರಿಕೆಯು ಆಧುನಿಕ ರೀತಿಯಲ್ಲಿ ಬೆಳೆದಿರಲಿಲ್ಲ. ಕಾರಣ ಪ್ರಥಮ ಪಂಚವಾರ್ಷಿಕ ಯೋಜನೆಯ ವೇಳೆಯಲ್ಲಿ ಈ ಜಿಲ್ಲೆಯು ಮದ್ರಾಸ್ ಪ್ರಾಂತದಲ್ಲಿತ್ತು. ಆಗ ಕೇವಲ ಮೀನುಗಾರ ಸಹಕಾರೀ ಸಂಘಗಳನ್ನು ಮಾತ್ರ ಮದ್ರಾಸ್ ಸರ್ಕಾರ ಪ್ರೋತ್ಸಾಹಿಸುತ್ತಿತ್ತು. ಹೀಗಾಗಿ ದ್ವಿತೀಯ ಪಂಚವಾರ್ಷಿಕ ಯೋಜನೆಯೇ ನಿಜವಾಗಿ ದಕ್ಷಿಣ ಕನ್ನಡ ಜಿಲ್ಲೆಯ ಮೀನುಗಾರಿಕೆಗೆ ಪ್ರಥಮ ಪಂಚವಾರ್ಷಿಕ ಯೋಜನೆಯೆನ್ನಬಹುದು. ೧೯೫೮ರಲ್ಲಿ ಮಂಗಳೂರಿನಲ್ಲಿ ಮೀನುಗಾರಿಕೆ ತರಬೇತಿ ಕೇಂದ್ರವನ್ನು ತೆರೆಯಲಾಯಿತು. ದ್ವಿತೀಯ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಒಟ್ಟು ೯೫ ಮಂದಿಗೆ ಯಾಂತ್ರೀಕೃತ ದೋಣಿಗಳ ಚಾಲನೆ, ನಿರ್ವಹಣೆಯಲ್ಲಿ ತರಬೇತಿ ನೀಡಲಾಯಿತು. ಮೀನೆಣ್ಣೆ, ಮೀನು ಕಾಯ್ದಿಡುವುದು, ಮತ್ತು ಮೀನಿನ ಗುಣಾಂಶ ಕಾಪಾಡುವ ಬಗೆಗೆ ಪ್ರಯೋಗಾತ್ಮಕ ಸಂಶೋಧನೆಯಲ್ಲಿ ತೊಡಗುವ ಗುರಿಯೊಂದಿಗೆ ೧೯೬೦ರಲ್ಲಿ ಮಂಗಳೂರಿನಲ್ಲಿ 'ಮೀನುಗಾರಿಕಾ ತಾಂತ್ರಿಕ ಸಂಶೋಧನಾ ಪ್ರಯೋಗ ಶಾಲೆ'ಯನ್ನು ತೆರೆಯಲಾಯಿತು. ಆಧುನಿಕ ತಂತ್ರಜ್ಞಾನದಿಂದ ಮೀನಿನ ಉಪ ಉತ್ಪನ್ನಗಳಾದ ಮೀನಿನ ಸಾಸೇಜ್, ಹ್ಯಾವಲ್, ಮೀನಿನ ಡಬ್ಬೀಕರಣ, ಸಂಸ್ಕರಣೆ ಬಗ್ಗೆ ಡಿಪ್ಲೊಮಾ ತರಬೇತಿ ನೀಡಲು ೧೯೬೩ರಲ್ಲಿ ಭಾರತ–ಜಪಾನ್ ಸಹಯೋಗದಲ್ಲಿ ಮಂಗಳೂರಿನಲ್ಲಿ 'ಕಡಲ ಮೀನು ಸಂಸ್ಕರಣ ತರಬೇತಿ ಕೇಂದ್ರ'ವನ್ನು ಸ್ಥಾಪಿಸಲಾಯಿತು. ೧೯೬೯ರಲ್ಲಿ ದೇಶದಲ್ಲೇ ಪ್ರಥಮ ಬಾರಿಗೆ ಕೃಷಿ ವಿಶ್ವವಿದ್ಯಾಲಯ ಬೆಂಗಳೂರು ಇದರ ಆಶ್ರಯದಲ್ಲಿ ಮೀನುಗಾರಿಕಾ ವಿಜ್ಞಾನದಲ್ಲಿ ಸಮಗ್ರ ಶಿಕ್ಷಣ ನೀಡುವ ವಿಶ್ವವಿದ್ಯಾಲಯ ಪದವಿ ಮಟ್ಟದ ಮೀನುಗಾರಿಕಾ ಕಾಲೇಜನ್ನು ಮಂಗಳೂರಿನಲ್ಲಿ ಪ್ರಾರಂಭಿಸಲಾಯಿತು. ದೇಶದಲ್ಲೇ ಮೊಟ್ಟ ಮೊದಲ ಬಾರಿಗೆ ೧೯೭೦ರ ದಶಕದಲ್ಲಿ "ಕೋಲ್ಡ್‌ಚೈನ್" ಎನ್ನುವ ಕೊಂಡಿ ಜಾಲವನ್ನು ಮೀನುಗಾರಿಕಾ ಅಭಿವೃದ್ಧಿ ನಿಗಮದ ಮುಖಾಂತರ ರಚಿಸಲಾಯಿತು. ಕೋಲ್ಡ್‌ಚೈನ್‌ನಿಂದಾಗಿ ಸಮುದ್ರದಿಂದ ಹಿಡಿದ ತಾಜಾ ಮೀನನ್ನು ಶೀತ ಘನೀಕೃತ ವಾಹನಗಳ ಮೂಲಕ ರಾಜ್ಯದ ೨೦ ಪ್ರಮುಖ ನಗರಗಳಿಗೆ ಪೂರೈಸುವ ಕಾರ್ಯ ಯೋಜನೆ ಜಾರಿಗೆ ಬಂದಿದೆ. ಇದರಿಂದಾಗಿ ಪ್ರಸ್ತುತವೂ ಬೆಂಗಳೂರು, ಮೈಸೂರು, ಕೊಡಗು, ಹುಬ್ಬಳ್ಳಿ ನಗರಗಳಿಗೆ ಮೀನು ತಾಜಾ ಗುಣಮಟ್ಟದಲ್ಲಿ ದೊರಕಲು ಸಾಧ್ಯವಾಗಿದೆ. ವಿಶ್ವ ಸಂಸ್ಥೆಯ ಕಡಲ ಕಾನೂನು ನಿರ್ಣಯದ ಪ್ರಕಾರ, ಕರ್ನಾಟಕ ರಾಜ್ಯವು ೧೯೭೭ರಲ್ಲಿ ಸಮುದ್ರ ಪ್ರದೇಶವನ್ನು "ಪ್ರತ್ಯೇಕ ಆರ್ಥಿಕ ವಲಯ" ಎಂದು ಘೋಷಿಸಿತು.

ಜಿಲ್ಲೆಯ ಆದಾಯಕ್ಕೆ ೬೪೦೩ ಲಕ್ಷ ರೂ.ಗಳಷ್ಟು ಮೀನುಗಾರಿಕೆಯಿಂದ ಬರುತ್ತಿದೆ. ಮೀನುಗಾರಿಕೆ ಕೇವಲ ಒಂದು ಆರ್ಥಿಕ ಚಟುವಟಿಕೆ ಮಾತ್ರವಲ್ಲದೆ ಈ ಪ್ರದೇಶದ ಜನರ ಸಾಮಾಜಿಕ ಮತ್ತು ಸಾಂಸ್ಕೃತಿಕ ಬದುಕಿನ ಅವಿಭಾಜ್ಯ ಅಂಗವೂ ಆಗಿರುವುದು ಇದರ ಮಹತ್ವವನ್ನು ಹೆಚ್ಚಿಸಿದೆ. ಈ ಕಾರಣದಿಂದಾಗಿಯೇ ಮೀನುಗಾರಿಕಾ ಉದ್ಯಮದ ಮೇಲೆ ಪರಿಣಾಮ ಬೀರುವ ಇತರ ಕೈಗಾರಿಕೆಗಳ ಬಗ್ಗೆ ಮತ್ಸ್ಯೋದ್ಯಮ ಅವಲಂಬಿತ ಜನರ ತೀವ್ರವಾದ ಪ್ರತಿರೋಧವನ್ನು ವ್ಯಕ್ತಪಡಿಸುತ್ತಲೇ ಬಂದಿದ್ದಾರೆ. ಆಳ ಸಮುದ್ರದಲ್ಲಿ ಬಲೆ ಬೀಸಿ ವಿವಿಧ ಮಾದರಿಯ ದೋಣಿಗಳ ಮೂಲಕ ಮೀನು ಹಿಡಿಯುವ ಶ್ರಮಿಕರು ಮೊಗವೀರ ಜನಾಂಗಕ್ಕೆ ಸೇರಿದ್ದರೆ, ಹಿಡಿದ ಮೀನನ್ನು ಖರೀದಿಸಿ ಇತರೆಡೆಗಳಿಗೆ ಒಯ್ದು ಮಾರುವ ಜನರಲ್ಲಿ ಅನ್ಯಧರ್ಮಿಯರು ಇದ್ದಾರೆ. ಬಂಡವಾಳ ತೊಡಗಿಸಿ ಮಾರುಕಟ್ಟೆ ನೀತಿಯನ್ವಯ, ವ್ಯಾಪಾರ ನಡೆಸುವ ಮಂದಿಯೂ ಬಹಳಷ್ಟು ಜನರಿದ್ದಾರೆ. ಹೀಗಾಗಿ ಇಲ್ಲಿ ಶ್ರಮಿಕ ವರ್ಗಕ್ಕೆ, ವ್ಯಾಪಾರೀ ವರ್ಗಕ್ಕೆ ಅಧಿಕ ಲಾಭದ ಮೇಲೆ ಕಣ್ಣಿರುವ ಕಾರಣ ಒಂದು ರೀತಿಯ ಸ್ಪರ್ಧಾತ್ಮಕವಾದ, ಪೈಪೋಟಿಯ ಅದೃಶ್ಯ ಅಲೆಯಿದೆ. ಕೆಲವೊಂದು ಸಲ ಇದು ಇನ್ನಿತರ ಸಾಮಾಜಿಕ, ರಾಜಕೀಯ ಮತ್ತು ಸಾಂಸ್ಕೃತಿಕ ಕಾರಣಗಳಿಂದ ಪ್ರೇರಿತವಾಗಿ ಸ್ಫೋಟಗೊಳ್ಳುವುದೂ ಉಂಟು. ಸಂಕ್ಷಿಪ್ತವಾಗಿ ಹೇಳುವುದಿದ್ದರೆ ಪ್ರಾರಂಭದಲ್ಲಿ ಸಂಪೂರ್ಣ ಸಹಕಾರೀ ತತ್ವದ ಮೇಲೆ, ಸಮುದಾಯಿಕ ಹಿತಾಸಕ್ತಿಯ ಸುತ್ತ ಸಂಘಟಿತವಾಗಿದ್ದ ಮೀನುಗಾರಿಕೆ, ಐವತ್ತರ ದಶಕದ ನಂತರ ಆಧುನೀಕರಣಗೊಳ್ಳುತ್ತಾ ಉದ್ಯಮದ ಸ್ವರೂಪ ಪಡೆಯಿತು. ಇದರಿಂದಾಗಿ ಉತ್ಪಾದಕರಾಗಿದ್ದ ಒಂದು ಪ್ರಮುಖ ಸಮುದಾಯ ಕಾರ್ಮಿಕ ವರ್ಗವಾಗಿ ಪರಿವರ್ತನೆಗೊಂಡಿತು. ವಿನಿಮಯ ಆಧಾರಿತ, ಬಂಡವಾಳ ಕೇಂದ್ರಿಕೃತ ಚಟುವಟಿಕೆಯಾಗುತ್ತಿರುವ ಮೀನುಗಾರಿಕೆ, ಮೊಗವೀರರ ಆರ್ಥಿಕ, ರಾಜಕೀಯ ಮತ್ತು ಸಾಂಸ್ಕೃತಿಕ ಬದುಕಿನ ಮೇಲೆ ಬೀರುತ್ತಿರುವ ಪ್ರಭಾವ ಮಾತ್ರ ಗಾಢವಾದದ್ದು. ಹಾಗಾಗಿ ಮೀನುಗಾರಿಕೆಯ ವಲಯದಲ್ಲಿ ಆಗುವ ಬದಲಾವಣೆಗಳು ಕರಾವಳಿಯ ಪ್ರಮುಖ ಜನವರ್ಗವಾಗಿರುವ ಮೊಗವೀರರ ಮತ್ತು ಮೀನುಗಾರಿಕೆಯನ್ನು ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಅವಲಂಬಿಸಿರುವ ಇತರ ಜನ ವರ್ಗಗಳ ಮೇಲೂ ಪರಿಣಾಮ ಬೀರುತ್ತದೆ.

ಮೀನುಗಾರಿಕೆಯಲ್ಲಿ ಇತ್ತೀಚೆಗೆ ಪ್ರಾಮುಖ್ಯತೆ ಪಡೆದಿರುವ ಇನ್ನೊಂದು ಆರ್ಥಿಕ ಚಟುವಟಿಕೆ ಸಿಗಡಿ ಅಥವಾ ಚಟ್ಲೆ ಕೃಷಿ. ಸಮುದ್ರ ತೀರದ ಅಳಿವೆ ಕೊಡಿಗಳಲ್ಲಿ ಹಿನ್ನೀರಿನ ಪೂರೈಕೆ ಹೊಂದಿರುವ ಪ್ರದೇಶಗಳಲ್ಲಿ ಸಿಗಡಿ ಕೃಷಿಯನ್ನು ನಡೆಸಲಾಗುತ್ತದೆ. ಸಿಗಡಿ ದೇಶ, ವಿದೇಶಗಳಲ್ಲಿ ಅಪಾರ ಬೇಡಿಕೆಯಿರುವ ಕಾರಣ ಇತ್ತೀಚಿನ ದಿನಗಳಲ್ಲಿ ಇದು ಒಂದು ಪ್ರಮುಖ ಆರ್ಥಿಕ ಚಟುವಟಿಕೆಯಾಗಿ ಜನಪ್ರಿಯವಾಗುತ್ತಿದೆ. ಸಿಗಡಿ ಕೃಷಿಯಲ್ಲಿ ನಾಲ್ಕು ವಿಧಗಳಿವೆ. ೧) ಸಾಂಪ್ರದಾಯಿಕ ಮಾದರಿ, ೨) ಸುಧಾರಿತ ಅಥವಾ ವಿಸ್ತೃತ ಮಾದರಿ, ೩) ಅರೆ ತೀವ್ರ ಮಾದರಿ ಮತ್ತು ೪) ತೀವ್ರ ಮಾದರಿ.

೧. **ಸಾಂಪ್ರದಾಯಿಕ ಮಾದರಿ**: ಸಾಂಪ್ರದಾಯಿಕ ಮಾದರಿಯಲ್ಲಿ ಸಮುದ್ರದ ಏರಿಕೆಯ ಸಂದರ್ಭದಲ್ಲಿ ನೀರಿನ ಪ್ರವಾಹದೊಂದಿಗೆ ಮೀನು, ಸಿಗಡಿ ಮತ್ತು ಇತರ ಜಲಚರಗಳು ಅಳಿವೆ ಬಾಗಿಲುಗಳ (ಅಳಿವೆ ಕೋಡಿ) ಮೂಲಕ ಹಿನ್ನೀರು ಪ್ರದೇಶಕ್ಕೆ ಹರಿಯುವುದುಂಟು. ನಂತರ ಇಳಿತದ ಸಮಯ ನೀರು ಹೊರ ನುಗ್ಗುವಾಗ ಅಳಿಕೊಡಿಯಲ್ಲಿ ದ್ವಾರಕ್ಕೆ ಅಡ್ಡಲಾಗಿ ಬಲೆಯನ್ನು ಕಟ್ಟಿ ಮರಿಗಳನ್ನು ಹಿನ್ನೀರಲ್ಲಿ ಉಳಿಸಿ ಸಾಕಷ್ಟು ಬೆಳೆದ ನಂತರ ಸಂಗ್ರಹಿಸಲಾಗುತ್ತದೆ. ಇದು ಬಳಕೆಗಾಗಿ ಸಾಂಪ್ರದಾಯಿಕ ಮಾದರಿಯಲ್ಲಿ ನಡೆಯುವ ಸಿಗಡಿ ಕೃಷಿ.

೨. **ಸುಧಾರಿತ ಮಾದರಿ**: ಇದು ಸಾಂಪ್ರದಾಯಿಕ ಮಾದರಿಯ ಸುಧಾರಿತ ಮಾದರಿಯಾಗಿದ್ದು, ಇಲ್ಲಿ ವ್ಯಾಪಾರದ ಉದ್ದೇಶವಿದೆ. ಹಾಗಾಗಿ ದೊಡ್ಡ ವಿಸ್ತೀರ್ಣದ ಪ್ರದೇಶದಲ್ಲಿ ಶೀಘ್ರ ಬೆಳವಣಿಗೆಯ ಸಿಗಡಿ ಮರಿಗಳನ್ನು (ನೈಸರ್ಗಿಕವಾಗಿ ದೊರೆಯುವ ಅಥವಾ ಮರಿ ಉತ್ಪಾದನಾ ಕೇಂದ್ರದಿಂದ ಪಡೆದ) ಕಡಿಮೆ ಸಾಂದ್ರತೆಯಲ್ಲಿ ಬೆಳೆಯಲು ಬಿಡಲಾಗುತ್ತದೆ. ಉಬ್ಬರ, ಇಳಿತದ ಸಮಯದಲ್ಲಿ ನೀರಿನ ಬದಲಾವಣೆಯ ಮೂಲಕ ಆಗುವ ನೀರಿನ ಫಲವತ್ತತೆಯ ಉತ್ಪಾದನೆಯ ಪ್ರಮಾಣವನ್ನು

ನಿರ್ಧರಿಸುತ್ತದೆ. ಈ ವಿಧಾನದ ಮೂಲಕ ಸಾಮಾನ್ಯವಾಗಿ ಹೆಕ್ಟೇರ್ ಒಂದಕ್ಕೆ ಎರಡರಿಂದ ಮೂರು ಟನ್ ಉತ್ಪನ್ನವನ್ನು ಪಡೆಯಬಹುದು.

೩. **ಅತೀ ತೀವ್ರ ಮಾದರಿ** : ಈ ಮಾದರಿಯಲ್ಲಿ ೦.೨ರಿಂದ ೦.೫ ಹೆಕ್ಟೇರ್ ವಿಸ್ತೀರ್ಣದ ಕೊಳ ನಿರ್ಮಿಸಿ, ಆಯ್ದ ಶೀಘ್ರ ಬೆಳವಣಿಗೆಯ ಮರಿಗಳನ್ನು ತಂದು ಪ್ರತೀ ಹೆಕ್ಟೇರ್‌ಗೆ ಸಾಮಾನ್ಯವಾಗಿ ಒಂದರಿಂದ ನಾಲ್ಕು ಲಕ್ಷದವರೆಗೆ ಸಿಗಡಿಯನ್ನು ಬೆಳೆಸಬಹುದಾಗಿದೆ. ಉತ್ಪಾದನೆಯನ್ನು ಅಧಿಕಗೊಳಿಸುವ ದೃಷ್ಟಿಯಿಂದ ಈ ಕೆಳಗಿನಂತೆ ನಿರ್ವಹಣಾ ಕ್ರಮ ಕೈಗೊಳ್ಳಬೇಕು.
   - ಪ್ರತಿ ದಿನ ಶೇಕಡಾ ೧೫% ರಿಂದ ೨೦%ರ ಪ್ರಮಾಣದಷ್ಟು ನೀರನ್ನು ಬದಲಾಯಿಸಬೇಕು.
   - ನೀರಿನಲ್ಲಿ ಆಮ್ಲಜನಕದ ಪ್ರಮಾಣವನ್ನು ಹೆಚ್ಚಿಸಲು ಸಾಕಷ್ಟು ಸಂಖ್ಯೆಯ ಗಾಳಿಯಂತ್ರವನ್ನು ಅಳವಡಿಸಬೇಕು.
   - ಸಿಗಡಿ ಮರಿಗಳಿಗೆ ಪೂರಕ ಆಹಾರ ಒದಗಿಸಬೇಕು ಮತ್ತು ಕೊಳದ ನೀರಿನ ಫಲವತ್ತತೆಯನ್ನೂ ಹೆಚ್ಚಿಸಲು ಸೂಕ್ತ ಕ್ರಮ ಕೈಗೊಳ್ಳಬೇಕು.

೪. **ತೀವ್ರ ಮಾದರಿ**: ಈ ಮಾದರಿಯಲ್ಲಿ ಅಧಿಕ ಉತ್ಪನ್ನವನ್ನು ಪಡೆಯುವ ಉದ್ದೇಶದಿಂದ ಸುಧಾರಿತ ರೀತಿಯಲ್ಲಿ ಸಿಗಡಿ ಕೃಷಿಯನ್ನು ನಡೆಸಲಾಗುತ್ತದೆ. ಸಾಮಾನ್ಯ ೦.೩ ರಿಂದ ೦.೧ ಹೆಕ್ಟೇರು ವಿಸ್ತೀರ್ಣದ ಕಾಂಕ್ರೀಟ್ ಕೊಳವನ್ನು ವೈಜ್ಞಾನಿಕ ರೀತಿಯಲ್ಲಿ ನಿರ್ಮಿಸಬೇಕು. ಮರಿ ಉತ್ಪಾದನಾ ಕೇಂದ್ರದಿಂದ ಅತಿ ಶೀಘ್ರ ಬೆಳವಣಿಗೆಯ ೧೦ ಲಕ್ಷದಷ್ಟು ಮರಿಗಳನ್ನು ಪ್ರತಿ ಹೆಕ್ಟೇರಿನಲ್ಲಿ ಬಿತ್ತನೆ ಮಾಡಬೇಕು. ಮರಿಗಳು ಸಾಂದ್ರಾವಾಗಿರುವುದರಿಂದ ಪ್ರತಿದಿನ ಶೇಕಡಾ ೩೦೦ರಷ್ಟು ಪ್ರಮಾಣದಲ್ಲಿ ಅಧಿಕ ಶಕ್ತಿಯ ಸಿಗಡಿ ಆಹಾರವನ್ನು ನೀಡುವುದರ ಜೊತೆಗೆ ನೀರಿನಲ್ಲಿ ಆಮ್ಲಜನಕ ಪ್ರಮಾಣವನ್ನು ಹೆಚ್ಚಿಸಲು ಗಾಳಿಯಂತ್ರಗಳನ್ನು ಸಾಕಷ್ಟು ಪ್ರಮಾಣದಲ್ಲಿ ಬಳಸಲಾಗುತ್ತದೆ. ಈ ವಿಧಾನದ ಮೂಲಕ ಪ್ರತೀ ಹೆಕ್ಟೇರಿಗೆ ಒಂದು ವರ್ಷಕ್ಕೆ ೨೦ರಿಂದ ೩೦ ಟನ್ ಸಿಗಡಿ ಉತ್ಪಾದಿಸಬಹುದಾಗಿದೆ.

ಜಿಲ್ಲೆಯಲ್ಲಿ ಉತ್ಪಾದಿಸಲಾಗುತ್ತಿರುವ ಟೈಗರ್ ಮತ್ತು ಇಂಡಿರಸ್ ಜಾತಿಯ ಸಿಗಡಿಗಳಿಗೆ ದೇಶ, ವಿದೇಶಗಳಲ್ಲಿ ಬಹಳ ಬೇಡಿಕೆಯಿದೆ. ಅತೀ ತೀವ್ರ ಮತ್ತು ತೀವ್ರ ಮಾದರಿಯ ಸಿಗಡಿ ಕೃಷಿಯನ್ನು ಬೆಳೆಯಲು ಸಾಕಷ್ಟು ಪ್ರಮಾಣದಲ್ಲಿ ಬಂಡವಾಳದ ಅವಶ್ಯಕತೆಯಿದ್ದು ಕುಂದಾಪುರ, ಉಡುಪಿ ಪರಿಸರದಲ್ಲಿ ಲಭ್ಯವಿರುವ ಸೂಕ್ತ ಪ್ರದೇಶದಲ್ಲಿ ಹೊರಪ್ರದೇಶದ ಜನ ಸಿಗಡಿ ಕೃಷಿಯನ್ನು ಕೈಗೊಂಡಿರುವುದು ಕಂಡುಬರುತ್ತದೆ. ಹೆಚ್ಚಿನ ವಿವರಗಳಿಗೆ ಕೋಷ್ಟಕ ೫.೧೨ ಹಾಗೂ ೫.೧೩ ಅನ್ನು ನೋಡಿ.

**ಕೋಷ್ಟಕ ೫.೧೨ : ಜಿಲ್ಲೆಯ ಮೀನುಗಾರಿಕೆ ಮತ್ತು ಅವುಗಳ ಮೌಲ್ಯ**

| ತಾಲೂಕು | ಮೀನುಗಳ ಸಂಖ್ಯೆ (ಟನ್ನುಗಳಲ್ಲಿ) | | | ಮೀನುಗಳ ಮೌಲ್ಯ (ರೂ.ಲಕ್ಷಗಳಲ್ಲಿ) | | | ಶೀತಲೀ ಕರಣ ಕೇಂದ್ರ ಗಳು | ಮಂಜು ಗಡ್ಡೆ ತಯಾರಿಕಾ ಕಾರ್ಖಾನೆ ಗಳು |
|---|---|---|---|---|---|---|---|---|
| | ಸಾಗರೋತ್ಪನ್ನ ಮೀನು | ಸಿಹಿನೀರು ಮೀನು | ಒಟ್ಟು | ಸಾಗರೋತ್ಪನ್ನ ಮೀನು | ಸಿಹಿನೀರು ಮೀನು | ಒಟ್ಟು | | |
| ಕುಂದಾಪುರ | ೨೬೨೩೭.೨೯ | ೪೮೦.೭೬ | ೨೬೭೧೮.೦೫ | ೭೪೩೦.೨೮ | ೧೯೨.೩೦ | ೭೬೨೨.೫೮ | ೧ | ೧೪ |
| ಕಾರ್ಕಳ | – | ೧೨೭೫.೪೯ | ೧೨೭೫.೪೯ | – | ೫೧೦.೨೦ | ೫೧೦.೨೦ | – | – |
| ಉಡುಪಿ | ೩೨೭೬೮.೧೦ | ೧೦೭.೯೩ | ೩೨೮೭೬.೦೩ | ೫೦೦೦೪.೫೬ | ೪೩.೧೭ | ೫೦೪೭.೭೩ | ೮ | ೪೩ |
| ಒಟ್ಟು | ೫೯೦೦೫.೩೯ | ೧೮೬೪.೧೮ | ೬೦೮೬೯.೫೭ | ೧೨೪೩೪.೮೪ | ೭೪೫.೬೭ | ೧೩೧೮೦.೫೧ | ೯ | ೫೭ |

*ಆಧಾರ : ಜಿಲ್ಲಾ ಅಂಕಿ ಅಂಶಗಳ ನೋಟ ೨೦೦೪-೦೫*

## ಕೋಷ್ಟಕ ೫.೧೩ : ಜಿಲ್ಲೆಯ ಕೋಲ್ಡ್ ಸ್ಟೋರೇಜ್ ಹಾಗೂ ಯಾಂತ್ರಿಕ ದೋಣಿಗಳ ವಿವರಗಳು

ಮಾರ್ಚ್ ೨೦೦೫ರ ಅಂತ್ಯಕ್ಕೆ

| ತಾಲೂಕು | ಕೋಲ್ಡ್ ಸ್ಟೋರೇಜ್‌ಗಳು ಮತ್ತು ಪ್ರೋಜನ್ ಸ್ಟೋರೇಜ್‌ಗಳು | | ಮೀನುಗಾರಿಕಾ ಬಲೆಗಳು | ಯಾಂತ್ರಿಕ ಮೀನುಗಾರಿಕೆ ದೋಣಿಗಳು | | | ಒಟ್ಟು | ಯಾಂತ್ರೀಕೃತ ವಲ್ಲದ ದೋಣಿಗಳು |
|---|---|---|---|---|---|---|---|---|
| | ಸಂಖ್ಯೆ | ಸಾಮರ್ಥ್ಯ | | ಪರ್ಸಿನ್ (ಕೆ.ಡಿ.ಸಿ) | ಟ್ರಾಲರ್ (ಕೆ.ಡಿ.ಟಿ.) | ಇತರೆ (ಒಬಿಯಂ ಚಾಲಿತ) | | |
| ಕುಂದಾಪುರ | ೧ | ೨೦ | ೪೧೭೭ | ೩೫ | ೨೦೦ | ೧೩೬೫ | ೧೬೧೦ | ೭೪೨ |
| ಕಾರ್ಕಳ | – | – | – | – | – | – | – | – |
| ಉಡುಪಿ | ೧೨ | ೧೭೬೧ | ೫೧೪೬ | ೧೦೭ | ೭೮೦ | ೯೩೬ | ೧೮೨೩ | ೧೩೧೬ |
| ಒಟ್ಟು | ೧೩ | ೧೭೮೧ | ೯೩೨೩ | ೧೪೨ | ೯೮೦ | ೨೩೦೧ | ೩೪೨೩ | ೨೦೫೮ |

*ಆಧಾರ : ಜಿಲ್ಲಾ ಅಂಕಿ ಅಂಶಗಳ ನೋಟ ೨೦೦೪-೦೫*

## ಮೀನುಗಾರಿಕಾ ಕಾಲೇಜು, ಮಂಗಳೂರು

ಮಂಗಳೂರಿನ ಎಕ್ಕೂರಿನಲ್ಲಿರುವ ಮೀನುಗಾರಿಕಾ ವಿದ್ಯಾಲಯವು ಒಂದು ತಾಂತ್ರಿಕ ವಿದ್ಯಾಲಯವಾಗಿದ್ದು, ಇದು ದೇಶದ ಪ್ರಪ್ರಥಮ ಮೀನುಗಾರಿಕಾ ವಿದ್ಯಾಲಯವಾಗಿರುತ್ತದೆ. ೧೯೬೩ರಲ್ಲಿ ಭಾರತ-ಜಪಾನ್ ಸಹಯೋಗದಲ್ಲಿ ಮೆರೈನ್ ಪ್ರಾಡಕ್ಟ್ಸ್ ಪ್ರಾಸೆಸಿಂಗ್ ಟ್ರೈನಿಂಗ್ ಸೆಂಟರ್ (ಎಂ.ಪಿ.ಪಿ.ಟಿ ಮಂಗಳೂರು) ಸ್ಥಾಪನೆಗೊಂಡಿದ್ದು, ೧೯೬೯ರಲ್ಲಿ ಇದನ್ನು ಮೀನುಗಾರಿಕಾ ಕಾಲೇಜಾಗಿ ಪರಿವರ್ತಿಸಲಾಯಿತು. ಇದರ ಮುಖ್ಯ ಧ್ಯೇಯೋದ್ದೇಶವು ಮೀನುಗಾರಿಕೆಯಲ್ಲಿ ಪರಿಣತಿ ಹೊಂದಿದ ಪದವೀಧರರನ್ನು ರೂಪಿಸುವುದು, ವಿಜ್ಞಾನಿಗಳು ಕಂಡುಹಿಡಿದ ಹೊಸ ಮಾಹಿತಿಗಳನ್ನು ಸಾಮಾನ್ಯ ಜನರಿಗೆ ತಲುಪಿಸುವುದು ಮತ್ತು ಮೀನುಗಾರರ ಏಳಿಗೆಗಾಗಿ ಶ್ರಮಿಸುವುದು. ಹಿಂದೆ ಈ ಸಂಸ್ಥೆಯು ಕೃಷಿ ವಿಶ್ವವಿದ್ಯಾಲಯ, ಬೆಂಗಳೂರು ಇದರ ಅಧೀನದಲ್ಲಿದ್ದು, ಇದೀಗ ೨೦೦೪-೦೫ನೇ ಸಾಲಿನಿಂದ ಇದನ್ನು ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬೀದರ್ ಇದರ ಸ್ವಾಧೀನತೆಗೆ ಸೇರಿಸಲಾಗಿದೆ. ಇಲ್ಲಿ ಮೀನುಗಾರಿಕೆಯಲ್ಲಿ ಬ್ಯಾಚುಲರ್ ಪದವಿ, ಸ್ನಾತಕೋತ್ತರ ಪದವಿ ಹಾಗೂ ಡಾಕ್ಟರೇಟ್ ಪದವಿಗಳನ್ನು ನೀಡುವ ಕೋರ್ಸುಗಳನ್ನು ತೆರೆಯಲಾಗಿದೆ.

ಜಿಲ್ಲೆಯಲ್ಲಿ ಮೀನುಗಾರಿಕೆ ಕೈಗಾರಿಕಾ ಬೆಳವಣಿಗೆಗೆ ಸಹಕಾರಿಯಾಗಿದೆ. ಜಿಲ್ಲೆಯಲ್ಲಿ ಫಿಷ್‌ಮೀಲ್ ಮತ್ತು ಆಯಿಲ್ ಉತ್ಪಾದನಾ ಘಟಕಗಳನ್ನು ಸ್ಥಾಪಿಸಲಾಗಿದೆ. ನೂರಾರು ಮಂದಿಗೆ ಉದ್ಯೋಗ ನೀಡಿದೆ. ಮೀನನ್ನು ಕೆಡದಂತೆ ಪ್ಯಾಕ್ ಮಾಡಿ, ಜೋರ್ಡಾನ್, ಸೌಧಿ, ದರ್ಬಾನ್, ಜಪಾನ್, ಚೀನಾ ಅಮೇರಿಕಾ ಸಂಯುಕ್ತ ಸಂಸ್ಥಾನ, ಅರಬ್ ಮುಂತಾದ ವಿದೇಶಗಳಿಗೆ ರಫ್ತು ಮಾಡಲಾಗುತ್ತಿದೆ. ಇದರಿಂದ ವಿದೇಶಿ ವಿನಿಮಯ ಗಳಿಸುವುದರ ಮೂಲಕ ಜಿಲ್ಲೆಯ ಪ್ರಗತಿಗೆ ಸಹಕಾರಿಯಾಗಿದೆ.

ಜಿಲ್ಲೆಯಲ್ಲಿ ೪೦ ಮೀನುಗಾರರ ಸಹಕಾರಿ ಸಂಘಗಳಿದ್ದು, ಅವುಗಳಲ್ಲಿ ೨೯ ಮೀನುಗಾರರ ಸಹಕಾರಿ ಸಂಘಗಳು ಹಾಗೂ ೧೧ ಎಫ್. ಡಬ್ಲ್ಯು. ಸಿ. ಎಸ್.ಗಳು ಸೇರಿವೆ. ಇವುಗಳಲ್ಲಿ ೧೮೨೦ ಮಂದಿ ಪರಿಶಿಷ್ಟ ಜಾತಿಯ ೦೭ ಮಂದಿ ಪರಿಶಿಷ್ಟ ಪಂಗಡ ಹಾಗೂ ೪೧,೯೨೦ ಮಂದಿ ಇತರೆ (ಒಟ್ಟು ೪೩,೭೪೭) ಮಂದಿ ಸದಸ್ಯರಿದ್ದರು. ಹೆಚ್ಚಿನ ವಿವರಗಳಿಗೆ ಅಧ್ಯಾಯ-೮ ನೋಡಿ.

## ಮತ್ಸ್ಯ ಕ್ಷಾಮ, ಮೀನುಗಾರಿಕೆ ನಿಷೇಧ ಮತ್ತು ಜೀವನಾವಶ್ಯಕ ವಿಷಯಗಳು

ಮತ್ಸ್ಯೋತ್ಪನ್ನವು ವರ್ಷದಿಂದ ವರ್ಷಕ್ಕೆ ಇಳಿಕೆಯಾಗುತ್ತಿರುವುದರಿಂದ ಮೀನಗಾರರಿಗೆ ಸರಕಾರವು ಸಹಾಯ ನೀಡಬೇಕೆನ್ನುವ ಬೇಡಿಕೆ ಇದೆ. ಆದರೆ ಮೀನುಗಾರರು ಹೇಳುವಂತೆ ಮೀನಿನ ಉತ್ಪನ್ನದಲ್ಲಿ ಒಟ್ಟಾರೆ ಪ್ರಮಾಣದಲ್ಲಿ ಇಳಿಕೆ ಇಲ್ಲ ಎಂದು ಕೇಂದ್ರ ಸಾಗರ ಮೀನುಗಾರಿಕಾ ಸಂಶೋಧನಾ ಸಂಸ್ಥೆ (Central Marine Fisheries Research institute) ಅಭಿಪ್ರಾಯಪಡುತ್ತದೆ. ಆಳ ಸಮುದ್ರದಲ್ಲಿ ವಿದೇಶಿ ಹಡಗುಗಳು ಮೀನುಗಾರಿಕೆ ನಡೆಸುವಾಗ ಅಧಿಕ ಪ್ರಮಾಣದಲ್ಲಿ ಮೀನಿನ ಮರಿ ಮತ್ತು ಮೊಟ್ಟೆ

ನಾಶವಾಗುವ ಕಾರಣದಿಂದ ಮತ್ಸ್ಯ ಕ್ಷಾಮ ಉಂಟಾಗಬಹುದು ಎನ್ನುವ ಭೀತಿಯನ್ನೂ ಮೀನುಗಾರರ ಒಂದು ವರ್ಗ ವ್ಯಕ್ತಪಡಿಸುತ್ತಿದೆ. ಇಂತಹ ಎಲ್ಲಾ ತೊಂದರೆಗಳನ್ನು ದೂರ ಮಾಡುವ ದೃಷ್ಟಿಯಿಂದ ಈ ಕೆಳಗಿನ ಕ್ರಮಗಳನ್ನು ಕೈಗೊಳ್ಳಬೇಕೆನ್ನುವ ಅಭಿಪ್ರಾಯವಿದೆ.

೧. ಪಶ್ಚಿಮ ಕರಾವಳಿಯುದ್ದಕ್ಕೂ ವರ್ಷದಲ್ಲಿ ಮುಂಗಾರುಮಳೆ ಪ್ರಾರಂಭವಾಗುವ ಮೊದಲು ಮೀನುಗಾರಿಕೆಯನ್ನು ನಿಷೇಧಿಸಬೇಕು. ಈ ನಿಷೇಧದ ಅವಧಿ ಏಕರೂಪದ್ದಾಗಿದ್ದು, ಇದನ್ನು ಕರಾವಳಿ ತೀರದ ಎಲ್ಲಾ ರಾಜ್ಯಗಳು ಕಟ್ಟುನಿಟ್ಟಾಗಿ ಜಾರಿಗೊಳಿಸಬೇಕು. ಇಂತಹ ನಿಷೇಧದ ಸಮಯ ಸಾಂಪ್ರದಾಯಿಕ ರೀತಿಯಲ್ಲಿ ತೀರದಲ್ಲಿ ನಡೆಸುವ ಮೀನುಗಾರಿಕೆಗೆ ವಿನಾಯಿತಿ ನೀಡಬಹುದಾಗಿದೆ.

೨. ಮೀನುಗಾರಿಕಾ ಇಲಾಖೆ, ಸಂಶೋಧಕರು ಮತ್ತು ಸ್ಥಳೀಯರ ಸಹಕಾರ ಪಡೆದು ಮೀನು ಸಂತತಿ ಅಭಿವೃದ್ಧಿಪಡಿಸುವ ಪ್ರದೇಶಗಳನ್ನು (Breeding ground) ಅಥವಾ ಮೊಟ್ಟೆ ಇಡುವ ಪ್ರದೇಶಗಳನ್ನು ಗುರುತಿಸಿ ಅಂತಹ ಜಾಗಗಳಲ್ಲಿ ಮೀನುಗಾರಿಕೆ ಮಾಡದಂತೆ ಮೀನುಗಾರರ ಮನ ಒಲಿಸುವ ಅಥವಾ ಅವರಿಗೆ ತಿಳಿ ಹೇಳುವ ಕಾರ್ಯ ಮಾಡುವುದು.

೩. ಮೀನುಗಾರಿಕಾ ಚಟುವಟಿಕೆಯಲ್ಲಿ ಸಣ್ಣ ಪ್ರಮಾಣದಲ್ಲಿ ಜೀವನಾಧಾರಕ್ಕಾಗಿ ಮೀನುಗಾರಿಕೆಯನ್ನು ಅವಲಂಬಿಸಿದ ಸ್ಥಳೀಯ ಸಮುದಾಯಗಳಿಗೆ ಪ್ರಾಶಸ್ತ್ಯವಿರುವಂತೆ ನೋಡಿಕೊಳ್ಳಬೇಕು. ವಿಶ್ವ ಕೃಷಿ ಮತ್ತು ಆಹಾರ ಸಂಘಟನೆಯ ಪರಿಚ್ಛೇದ ೬.೧೮ರಲ್ಲಿ ಈ ಬಗ್ಗೆ ಪ್ರಸ್ತಾಪಿಸಲಾಗಿದ್ದು, ಇದರಲ್ಲಿನ ಆಶಯಗಳನ್ನು ಸೂಕ್ತ ನಿಯಮಾವಳಿ ರೂಪಿಸುವ ಮೂಲಕ ಕಾರ್ಯರೂಪಕ್ಕೆ ತರಲು ಪ್ರಯತ್ನಿಸಬೇಕು.

೪. ಸಾಂಪ್ರದಾಯಿಕ ಮೀನುಗಾರಿಕೆಯಲ್ಲಿ ಅನುಸರಿಸುವ ವಿಧಾನಗಳು ಹಾಗೂ ಸಲಕರಣೆಗಳು ಜೀವ ವೈವಿಧ್ಯವನ್ನು ಕಾಪಾಡುವ ದೃಷ್ಟಿಯಿಂದ ಮಹತ್ವ ಪಡೆದಿದ್ದು, ಅವುಗಳನ್ನು ಮುಂದುವರಿಸಿಕೊಂಡು ಹೋಗಲು ಪ್ರೋತ್ಸಾಹ ನೀಡಬೇಕಿದೆ. ಅನಿವಾರ್ಯವಾದಲ್ಲಿ ಸಾಂಪ್ರದಾಯಿಕ ಮೀನುಗಾರಿಕೆಯನ್ನು ಅವಲಂಬಿಸಿದ ಸಮುದಾಯಗಳಿಗೆ ಬದಲಿ ಜೀವನ ವ್ಯವಸ್ಥೆಯನ್ನು ಕಲ್ಪಿಸಿಕೊಡುವ ಪ್ರಯತ್ನಗಳ ಬಗ್ಗೆಯೂ ಗಂಭೀರ ಚಿಂತನೆ ನಡೆಯಬೇಕಿದೆ.

೫. ಮೀನು ಮತ್ತು ಮೀನಿನ ಉತ್ಪನ್ನವನ್ನು ವಿದೇಶಗಳಿಂದ ಪರವಾನಗಿಯಿಲ್ಲದೆ ಆಮದು ಮಾಡುವ ಕ್ರಮವನ್ನು ನಿಷೇಧಿಸುವ ಬಗ್ಗೆಯೂ ಗಮನಹರಿಸಬೇಕಿದೆ. ಇಲ್ಲವಾದರೆ ದೇಶೀಯವಾಗಿ ಲಭ್ಯವಿರುವ ಉತ್ಪನ್ನಗಳಿಗೆ ಬೆಲೆ ಇಲ್ಲದೇ ಹೋಗುವ ಅಪಾಯವಿದೆ.

೬. ಮೀನುಗಾರಿಕೆಗೆ ಸಂಬಂಧಪಟ್ಟಂತೆ ಕೇಂದ್ರ ಸರಕಾರದ ಮತ್ತು ರಾಜ್ಯ ಸರಕಾರದ ನೀತಿಗಳಲ್ಲಿರುವ ದೋಷಗಳನ್ನು ಸರಿಪಡಿಸಬೇಕಿದೆ. ಆಳ ಸಮುದ್ರ ಮೀನುಗಾರಿಕೆಗೆ ಕೇಂದ್ರ ಸರಕಾರದ ಪರವಾನಗಿ ಇರುವ ದೊಡ್ಡ ಮೀನುಗಾರಿಕಾ ಹಡಗುಗಳು ರಾಜ್ಯ ಸರಕಾರದ ನೀತಿ ನಿಯಮಗಳನ್ನು ಉಲ್ಲಂಘಿಸಿದ ನಿದರ್ಶನಗಳ ಆಧಾರದ ಮೇಲೆ ಈ ಲೋಪ–ದೋಷಗಳನ್ನು ನಿವಾರಿಸಬೇಕು.

ಪ್ರಸ್ತುತ ಮೀನುಗಾರಿಕೆ ಉದ್ಯಮ ದೇಶದಲ್ಲಿ ಮತ್ತು ರಾಜ್ಯದಲ್ಲಿ ಸಾಗುತ್ತಿರುವ ಜಾಡನ್ನು ಗಮನಿಸಿದರೆ ಅತೀಯಾದ ವಾಣಿಜ್ಯೀಕರಣ ಮತ್ಸ್ಯಕ್ಷಾಮ, ಸ್ಥಳೀಯ ಹಾಗೂ ಸಾಂಪ್ರದಾಯಿಕ ಮೀನುಗಾರರ ಹಿತಾಸಕ್ತಿಗೆ ಪೂರಕವಾಗಿಲ್ಲವೆನಿಸುತ್ತಿದ್ದು, ಜಿಲ್ಲೆಯಲ್ಲಿರುವ ಪರಿಸ್ಥಿತಿಯು ಇದಕ್ಕಿಂತ ಭಿನ್ನವಾಗಿಲ್ಲ. ಮೀನುಗಾರಿಕೆಯನ್ನು ಅವಲಂಬಿಸಿರುವ ಜನವರ್ಗಗಳಿಗೆ ಪರ್ಯಾಯ ಚಟುವಟಿಕೆಗಳ ಬಗ್ಗೆ ಮಾಹಿತಿ, ತರಬೇತಿ ನೀಡಬೇಕು. ಈ ನಿಟ್ಟಿನಲ್ಲಿ ಪ್ರವಾಸೋದ್ಯಮ, ಸಹಕಾರಿ ರಂಗ, ಸರಕಾರ ಮತ್ತು ಮೀನುಗಾರರ ಸಂಘಟನೆಗಳು ಜೊತೆಯಾಗಿ ದುಡಿಯಬೇಕಾದ ಅಗತ್ಯವಿದೆ.

## ಕುಂಬಾರಿಕೆ

ಮಣ್ಣಿನಿಂದ ಮಾಡಿದ ಪಾತ್ರೆ ಮತ್ತಿತರ ವಸ್ತುಗಳನ್ನು ಎಲ್ಲ ವರ್ಗದ ಜನರು ದಿನ ನಿತ್ಯ ಉಪಯೋಗಿಸುವ ಪರಿಪಾಟ ಬಹಳ ಹಿಂದಿನ ಕಾಲದಿಂದಲೂ ಈ ಪ್ರದೇಶದಲ್ಲಿ ಚಾಲ್ತಿಯಲ್ಲಿತ್ತು. ಕೈಗಾರಿಕೆಗಳು

ಬೆಳೆದಂತೆಲ್ಲಾ ಪಾರಂಪರಿಕ ಉತ್ಪನ್ನಗಳು ಮೂಲೆ ಗುಂಪಾಗುವ ಸ್ಥಿತಿ ಬಂದಿತು. ಒಂದು ಕಾಲದಲ್ಲಿ ಈ ಭಾಗದ ಜನ ದಿನ ನಿತ್ಯ ಬಳಸುತ್ತಿದ್ದ ಮಣ್ಣಿನಿಂದ ಮಾಡಿದ ಪಾತ್ರೆಗಳು ಈಗ ಕಣ್ಮರೆಯಾಗುವ ಹಂತ ತಲುಪಿವೆ.

ಉಡುಪಿ ಜಿಲ್ಲೆಯಲ್ಲಿ ಸುಮಾರು ೫೦೦ ಕುಂಬಾರರು ಈಗಲೂ ಸಕ್ರಿಯರಾಗಿದ್ದು, ಮಡಕೆ ಹಾಗೂ ಮಣ್ಣಿನಿಂದ ತಯಾರಾಗುವ ಇತರ ಉತ್ಪನ್ನಗಳನ್ನು ಮಾರಿ ಜೀವನ ಸಾಗಿಸುತ್ತಿದ್ದಾರೆ. ೧೯೫೮ರಲ್ಲಿ ಜಿಲ್ಲೆಯಲ್ಲಿರುವ ಕುಂಬಾರ ಬಂಧುಗಳು ಒಟ್ಟಾಗಿ, ಕುಂಬಾರರ ಗುಡಿ ಕೈಗಾರಿಕಾ ಸಹಕಾರ ಸಂಘ ನಿಯಮಿತ ಎನ್ನುವ ಸಹಕಾರ ಸಂಘವೊಂದನ್ನು ಪ್ರಾರಂಭಿಸಿದರು. ಕುಂಬಾರಿಕೆಯಂತಹ ಗುಡಿ ಕೈಗಾರಿಕೆಯನ್ನು ಅವಲಂಭಿಸಿರುವವರಿಗೆ ಉತ್ಪಾದನೆ ಮತ್ತು ಮಾರಾಟಕ್ಕೆ ಸಂಬಂಧಿಸಿದಂತೆ ಸಹಾಯ ಮಾಡುವುದು, ಸರಕಾರದಿಂದ ದೊರೆಯುವ ಇತರ ಸವಲತುಗಳನ್ನು ದೊರಕಿಸಿಕೊಡುವುದು ಸಂಘದ ಪ್ರಮುಖ ಉದ್ದೇಶ.

ಸಂಘದ ಸದಸ್ಯರು ಹೆಚ್ಚಾಗಿ ಕುಟುಂಬದ ಸದಸ್ಯರ ಸಹಕಾರದಿಂದ ಮಣ್ಣಿನಿಂದ ಮಾಡಿದ ಮಡಕೆ, ಗಡಿಗೆ, ಹೂದಾನಿ, ಹೂಜಿ, ಇನ್ನಿತರ ದಿನ ಬಳಕೆಯ ಉಪಕರಣಗಳನ್ನು ತಯಾರಿಸುತ್ತಾರೆ. ಇಂತಹ ಉತ್ಪನ್ನಗಳನ್ನು ವಾರದ ಸಂತೆ, ದಿನ ನಿತ್ಯದ ಮಾರುಕಟ್ಟೆ, ಜಾತ್ರೆ, ಹಾಗೂ ಸಹಕಾರ ಸಂಘದ ಮೂಲಕ ಮಾರಾಟ ಮಾಡುತ್ತಾರೆ. ಅಲ್ಯೂಮಿನಿಯಂ, ಸ್ಟೀಲ್, ಹಿಂಡಾಲಿಯಂ ಮುಂತಾದ ಲೋಹದ ಪಾತ್ರೆಗಳು ಕಡಿಮೆ ಬೆಲೆಗೆ ದೊರಕುವುದರಿಂದ ಜನ ಮಣ್ಣಿನ ಪಾತ್ರೆಗಳ ಬಗ್ಗೆ ನಿರಾಸಕ್ತರಾಗಿದ್ದಾರೆ. ಎನ್ನುವುದು ಈ ವೃತ್ತಿಯನ್ನವಲಂಭಿಸಿದವರ ಅಳಲು. ಮಡಕೆ ತಯಾರಿಕೆಗೆ ಅಗತ್ಯವಿರುವ ವಸ್ತುಗಳ ಅಲಭ್ಯತೆ, ಉತ್ಪಾದನಾ ವೆಚ್ಚದ ಏರಿಕೆ, ಬೇಡಿಕೆಯಲ್ಲಿ ಹಿನ್ನಡೆಯೇ ಮುಂತಾದ ಕಾರಣಗಳಿಂದ ಈ ವಲಯ ನೇಪಥ್ಯಕ್ಕೆ ಸರಿಯುತ್ತಿರುವುದು ವಿಷಾದದ ಸಂಗತಿ. ಪಾರಂಪರಿಕ ಹಿನ್ನೆಲೆಯುಳ್ಳ ಈ ಗುಡಿ ಕೈಗಾರಿಕೆಯನ್ನು ಪುನರುಜ್ಜೀವನಗೊಳಿಸುವ ಬಗ್ಗೆ ಯೋಚಿಸಿ ಇದನ್ನು ಅಭಿವೃದ್ಧಿಪಡಿಸಬಹುದು. ಪ್ರಸ್ತುತ ೧೯೬ ಕುಟುಂಬಗಳು ಈ ವೃತ್ತಿಯಲ್ಲಿ ತೊಡಗಿವೆ.

## ಪುಷ್ಪೋದ್ಯಮ

**ಮಲ್ಲಿಗೆ :** ಉಡುಪಿಯ ಶಂಕರಪುರದಲ್ಲಿ ಮೊಟ್ಟ ಮೊದಲಿಗೆ ಬೆಳೆಯಲಾದ ಮಲ್ಲಿಗೆಯ ಕಂಪು ಆರ್ಥಿಕ ಆಯಾಮವನ್ನು ಹೊಂದಿದೆ. ವಿದೇಶಗಳಲ್ಲಿ ನೆಲೆಸಿರುವ ಜಿಲ್ಲೆಯ ಜನರಿಂದ ಜಿಲ್ಲೆಯ ಮಲ್ಲಿಗೆ ಹೂವಿಗೆ ಬಹಳಷ್ಟು ಬೇಡಿಕೆಯಿದೆ. ಮದುವೆ, ಮುಂಜಿ, ಪೂಜೆ, ಉತ್ಸವ ಮುಂತಾದ ಶುಭ ಸಮಾರಂಭಗಳಲ್ಲಿ ಮಲ್ಲಿಗೆ ಹೂವನ್ನು ಉಪಯೋಗಿಸಲಾಗುತ್ತಿದ್ದು, ಇದು ಒಂದು ಲಾಭದಾಯಕವಾದ ಕೃಷಿಯಾಧಾರಿತ ಆರ್ಥಿಕ ಚಟುವಟಿಕೆಯಾಗಿದೆ.

ಸುಮಾರು ೭೦ ವರ್ಷಗಳ ಮೊದಲು ಶಂಕರಪುರದ ಇಗರ್ಜಿಗೆ ಧರ್ಮಗುರುಗಳಾಗಿ ಬಂದಿದ್ದ ಪಾದ್ರಿಯೋರ್ವರು ಈ ಬೆಳೆ ಈ ಪ್ರದೇಶದಲ್ಲಿ ಪ್ರಾರಂಭವಾಗುವುದಕ್ಕೆ ಕಾರಣಕರ್ತರು ಎನ್ನಲಾಗುತ್ತಿದೆ. ಶಂಕರಪುರದ ಆಸುಪಾಸಿನಲ್ಲಿ ವಾಸಿಸುವ ಬಹುತೇಕ ಕ್ರಿಶ್ಚಿಯನ್ ಧರ್ಮಾವಲಂಭಿಗಳು ಅರ್ಧ ಎಕರೆ, ಕಾಲು ಎಕರೆ, ಒಂದು ಎಕರೆಯಲ್ಲಿ ವಾಸಿಸುತ್ತಿದ್ದ ಸಣ್ಣ, ಅತಿ ಸಣ್ಣ ಹಿಡುವಳಿದಾರರಾಗಿದ್ದು ಬಹಳ ಸಂಕಷ್ಟದಿಂದ ಜೀವನ ನಿರ್ವಹಿಸುತ್ತಿದ್ದರು. ಆಗ ಭಟ್ಕಳ, ಕುಂದಾಪುರ, ಗಂಗೊಳ್ಳಿ ಕಡೆ ಮಲ್ಲಿಗೆಯನ್ನು ಅಲ್ಪ ಪ್ರಮಾಣದಲ್ಲಿ ಬೆಳೆಯಲಾಗುತ್ತಿತ್ತು. ಇಲ್ಲಿಯ ಉಷ್ಣ ಹವೆ, ಬಿಸಿಲು, ಕೆಂಪುಮಣ್ಣು ಮತ್ತು ಅಲ್ಲಿಂದಲ್ಲಿಗೆ ಇದ್ದ ನೀರಿನ ವ್ಯವಸ್ಥೆಗೆ ಸುಧಾರಿಸಬಹುದೆನ್ನುವ ಲೆಕ್ಕಾಚಾರ ಇಗರ್ಜಿಗೆ ಬಂದ ಪಾದ್ರಿಯವರದ್ದು. ಅದರೊಂದಿಗೆ, ಕುಟುಂಬದಲ್ಲಿದ್ದ ಮಹಿಳೆಯರು, ಮಕ್ಕಳಿಂದಾಗಿ ಮಾನವ ಸಂಪನ್ಮೂಲಕ್ಕೆ ಏನೂ ಕೊರತೆಯಿರಲಿಲ್ಲ. ಇಲ್ಲಿಯ ಜನರ ಸ್ಥಿತಿಗತಿ, ಪ್ರಾಕೃತಿಕ ಸಂಪನ್ಮೂಲ ಹಾಗೂ ಮಾನವ ಸಂಪನ್ಮೂಲಗಳನ್ನು ಪರಿಗಣಿಸಿ ಮಲ್ಲಿಗೆ ಬೆಳೆದರೆ ಲಾಭದಾಯಕವೆಂದು ಅದನ್ನು ಬೆಳೆಯಲಾರಂಭಿಸಿದರು. ಪಕ್ಕದ ಉಡುಪಿ, ದಕ್ಷಿಣದ ಮುಲ್ಕಿ, ಕಟೀಲು, ಮಂಗಳೂರು, ಪೂರ್ವಕ್ಕೆ ಕಾರ್ಕಳ ಮುಂತಾದೆಡೆ ಪೂಜೆ, ಮದುವೆ

ಮುಂತಾದವುಗಳಿಂದಾಗಿ ಈ ಹೂವಿಗೆ ಸಾಕಷ್ಟು ಮಾರುಕಟ್ಟೆ ದೊರೆಯಿತು. ಹೀಗೆ ಪ್ರಾರಂಭವಾದ ಮಲ್ಲಿಗೆಯ ಕೃಷಿ ಹಂತ ಹಂತವಾಗಿ ಅಭಿವೃದ್ಧಿ ಹೊಂದುತ್ತಾ ಬಂತು. ಶಂಕರಪುರದಿಂದ ಆಸುಪಾಸಿನ ಬೆಳ್ಳೆ, ಪಡುಬಿದ್ರಿ, ಎರ್ಮಾಳು, ಶಿರ್ವ ಮುಂತಾದ ಪ್ರದೇಶಗಳಿಗೆ ವ್ಯಾಪಿಸಿತು. ಈಗ ಕಾರ್ಕಳ – ಕುಂದಾಪುರ ಗ್ರಾಮೀಣ ಪ್ರದೇಶದಲ್ಲಿ ಮಲ್ಲಿಗೆಯನ್ನು ಸಣ್ಣ ಪ್ರಮಾಣದಲ್ಲಿ ಬೆಳೆಯಲಾಗುತ್ತಿದೆ. ಆದರೂ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯ ಮಲ್ಲಿಗೆ–ರಾಜಧಾನಿ ಶಂಕರಪುರವೇ. ಜಿಲ್ಲೆಯ ಜನರು ದೂರದ ಊರುಗಳಿಗೆ ಹೋದಂತೆ ಅವರನ್ನು ಮಲ್ಲಿಗೆಯೂ ಅನುಸರಿಸಿ ಹೋಗಿದೆ ಎಂದರೆ ತಪ್ಪಾಗಲಾರದು. ಬಜ್ಪೆಯಿಂದ ವಿಮಾನ ಹಾರಾಟ ಆರಂಭಗೊಳ್ಳುತ್ತಿದ್ದಂತೆ, ಮಲ್ಲಿಗೆಗೆ ಬೊಂಬಾಯಿ, ಬೆಂಗಳೂರುಗಳಿಂದಲೂ ಬೇಡಿಕೆ ಅಧಿಕಕೊಂಡಿತು. ಈ ಹೂವಿಗೆ ಬೊಂಬಾಯಿಯಲ್ಲಿ ಬಹಳ ಬೇಡಿಕೆ ಬರಲು ಪ್ರಮುಖ ಕಾರಣ ಅಲ್ಲಿಯ ಮಾರುಕಟ್ಟೆಯಲ್ಲಿ ಮಲ್ಲಿಗೆಯನ್ನು ಅಧಿಕ ಪ್ರಮಾಣದಲ್ಲಿ ಖರೀದಿಸುವವರು ಈ ಜಿಲ್ಲೆಯ ಜನರೇ. ಇದಕ್ಕೆ ಪ್ರಮುಖ ಕಾರಣ ಆಚರಣೆಯಲ್ಲಿರುವ ಹಬ್ಬಗಳ ಸಾಂಪ್ರದಾಯಿಕ ರೀತಿ ರಿವಾಜುಗಳು, ನೇಮ ಉತ್ಸವಗಳು ಹಾಗೂ ಸಾಮಾಜಿಕ ಸಮಾರಂಭಗಳು. ಕೊಲ್ಲಿ ರಾಷ್ಟ್ರಗಳಲ್ಲಿಯೂ ಜಿಲ್ಲೆಯ ಬಹು ಸಂಖ್ಯಾತರು ಉದ್ಯೋಗದಲ್ಲಿದ್ದು, ಅಲ್ಲಿಗೂ ಮಲ್ಲಿಗೆ ರವಾನೆಯಾಗುತ್ತಿದೆ. ಜಿಲ್ಲೆಯಿಂದ ವಲಸೆ ಹೋಗಿರುವ ಜನರಿರುವೆಡೆ ಮಲ್ಲಿಗೆ ಬಳಕೆಯಾಗುತ್ತಿದೆ. ಶಂಕರಪುರದ ಶೇಕಡಾ ೯೫ ಮನೆಗಳಲ್ಲಿ ಮಲ್ಲಿಗೆ ಗಿಡಗಳಿವೆ.

ಇತ್ತೀಚಿನ ದಿನಗಳಲ್ಲಿ ಸ್ವಸಹಾಯ ಗುಂಪುಗಳ ಸದಸ್ಯರು ಅದರಲ್ಲಿಯೂ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಸದಸ್ಯರು ಕಾರ್ಕಳ, ಬೆಳ್ತಂಗಡಿ, ಮಂಗಳೂರು ತಾಲೂಕಿನ ಹಳ್ಳಿ ಪ್ರದೇಶಗಳಲ್ಲಿ ಮಲ್ಲಿಗೆಯನ್ನು ಬೆಳೆಯಲು ಪ್ರಾರಂಭಿಸಿರುತ್ತಾರೆ. ಈ ಪ್ರದೇಶದ ಜನರ ಸಂಸ್ಕೃತಿಯ ಭಾಗವಾಗಿರುವ ಹಲವಾರು ಆಚರಣೆಗಳ ಸಂದರ್ಭಗಳಲ್ಲಿ ಮಲ್ಲಿಗೆಯ ಪರಿಮಳ ಅವಿಭಾಜ್ಯ ಅಂಗವಾಗಿರುವುದರಿಂದ ಮಲ್ಲಿಗೆ ಹೂವಿನ ಮಾರುಕಟ್ಟೆ ಬೆಳೆಯುತ್ತಿದೆ ಎನ್ನುವುದು ಸಾಮಾನ್ಯ ತಿಳುವಳಿಕೆಯಾಗಿದೆ. ಜಿಲ್ಲೆಯಲ್ಲಿ ೨೦೦೦–೦೧ ಹಾಗೂ ೨೦೦೫–೦೬ರಲ್ಲಿ ಮಲ್ಲಿಗೆ ಕೃಷಿಯ ಉತ್ಪಾದನಾ ವಿವರಗಳನ್ನು ಕೋಷ್ಟಕ ೫.೧೪ ರಲ್ಲಿ ನೀಡಲಾಗಿದೆ.

**ಕೋಷ್ಟಕ ೫.೧೪ : ತಾಲೂಕುವಾರು ಮಲ್ಲಿಗೆ ಕೃಷಿಯ ವಿವರ**

ವಿಸ್ತೀರ್ಣ: ಹೆಕ್ಟೇರುಗಳಲ್ಲಿ : ಇಳುವರಿ ಮೌಲ್ಯ: ಲಕ್ಷ ರೂ.ಗಳಲ್ಲಿ

| | ಉಡುಪಿ | | | | ಕುಂದಾಪುರ | | | | ಕಾರ್ಕಳ | | | | ಜಿಲ್ಲೆ (ಒಟ್ಟು) | | | |
|---|---|---|---|---|---|---|---|---|---|---|---|---|---|---|---|---|
| ಮಲ್ಲಿಗೆ | ವಿಸ್ತೀರ್ಣ | ಉತ್ಪನ್ನ | ಇಳುವರಿ | ಮೌಲ್ಯ | ವಿಸ್ತೀರ್ಣ | ಉತ್ಪನ್ನ | ಇಳುವರಿ | ಮೌಲ್ಯ | ವಿಸ್ತೀರ್ಣ | ಉತ್ಪನ್ನ | ಇಳುವರಿ | ಮೌಲ್ಯ | ವಿಸ್ತೀರ್ಣ | ಉತ್ಪನ್ನ | ಇಳುವರಿ | ಮೌಲ್ಯ |
| ೨೦೦೦–೦೧ | ೧೨೮ | ೮೯೬ | ೭ | ೮೯.೧೦ | ೪೧ | ೨೮೭ | ೭ | ೧೪.೩೫ | ೬೪ | ೪೪೮ | ೭ | ೬೭೨.೦ | ೨೩೩ | ೧೬೩೧ | ೨೧ | ೬೭೨.೦ |
| ೨೦೦೫–೦೬ | ೧೪೦.೮ | ೯೮೫.೬ | ೮೨ | ೯೮ | ೪೫.೧ | ೩೧೫.೭ | ೮೨ | ೧೫.೭೫ | ೭೦.೪ | ೪೯೨.೮ | ೮೨ | ೭೩೯.೨ | ೨೫೬.೩ | ೧೭೯೪ | ೨೩.೧ | ೭೩೯.೨ |

*ಆಧಾರ : ಜಿಲ್ಲಾ ತೋಟಗಾರಿಕಾ ಇಲಾಖೆ, ಉಡುಪಿ,*

**ವೆನಿಲ್ಲಾ :** ಇತ್ತೀಚಿನ ದಿನಗಳಲ್ಲಿ ಪ್ರಮುಖ ವಾಣಿಜ್ಯ ಬೆಳೆಯಾಗಿ ರೈತರಿಗೆ ಆಕರ್ಷಕವಾಗಿ ಕಾಣಿಸಿಕೊಂಡ ಬೆಳೆಗಳಲ್ಲಿ ವೆನಿಲ್ಲಾ ಪ್ರಮುಖವಾದದ್ದು. ವೆನಿಲ್ಲಾ, ನೆರಳನ್ನು ಮತ್ತು ಆರ್ದ್ರತೆಯನ್ನು ಬಹಳವಾಗಿ ಬಯಸುವ ಬೆಳೆ, ಇದನ್ನು ಸ್ವತಂತ್ರವಾಗಿಯೂ, ಇತರ ಬೆಳೆಗಳೊಂದಿಗೂ ಬೆಳೆಸಬಹುದು. ಜಿಲ್ಲೆಯಲ್ಲಿ ಮೀಟರ್‌ಗೆ ರೂ.೨೦೦–೨೫೦ ಬೆಲೆ ಇರುವ ಬಳ್ಳಿಗಳನ್ನು ತಂದು ಗ್ಲಾರಿ ಸೀಡಿಯಾ, ಅಡಿಕೆ ಮರ, ಕಲ್ಲು ಕಂಬ ಅಥವಾ ಇತರ ಮರಗಳಿಗೆ ಹಬ್ಬಿಸಲಾಗುತ್ತದೆ. ಗಿಡಗಳನ್ನು ಬಹಳ ಜಾಗರೂಕತೆಯಿಂದ ಬೆಳೆಸಬೇಕು. ಮೊದಲು ಒಂದೂವರೆ ಕೆ.ಜಿ. ಹಟ್ಟಿ ಗೊಬ್ಬರ, ಕೋಳಿ ಗೊಬ್ಬರ ಅಥವಾ ಎರೆಹುಳ ಗೊಬ್ಬರ ಹಾಕಬೇಕು.

ನೆಟ್ಟ ಗಿಡಕ್ಕೆ ಪ್ರತಿದಿನ ಕಾಲು ಲೀಟರ್ ನೀರುಣಿಸಬೇಕು. ಗಿಡ ಆರು ತಿಂಗಳವರೆಗೆ ಬೆಳೆದ ಮೇಲೆ, ಕಹಿಬೇವಿನ ಹಿಂಡಿ ಮತ್ತು ನೆಲಗಡಲೆ ಹಿಂಡಿಯನ್ನು ಸೇರಿಸಿ ಹದಮಾಡಿದ ಗೊಬ್ಬರವನ್ನು ಹಾಕಬೇಕು. ಹದಮಾಡಿದ ಈ ಗೊಬ್ಬರದಲ್ಲಿ ಉತ್ಪತ್ತಿಯಾಗುವ ಅನಿಲದ ಅಂಶ ಹೋದ ಮೇಲೆ ಗೊಬ್ಬರವನ್ನು ಗಿಡಕ್ಕೆ ಹಾಕಬೇಕು. ಗಿಡದ ಮೇಲ್ಭಾಗದಿಂದ ನೀರು ಸಿಂಪಡಣೆ ಮಾಡಿದರೆ ಉತ್ತಮ. ವೆನಿಲ್ಲಾ ಬಳ್ಳಿಗೆ ನೆರಳು ಮತ್ತು ಬಿಸಿಲು ಎರಡೂ ಬೇಕು. ಬಳ್ಳಿ ಸುಮಾರು ಆರು ಮೀಟರ್ ಬೆಳೆದಾದ ನಂತರ ನೀರು, ಗೊಬ್ಬರ ನೀಡುವುದನ್ನು ನಿಲ್ಲಿಸಬೇಕು. ಬಳ್ಳಿ ಎರಡು–ಮೂರು ವರ್ಷ ಬೆಳದಾದ ನಂತರ, ಬಾಡಿದ ಹಾಗಾಗಿ ಅದರಲ್ಲಿ ಮೊಗ್ಗು ಕಾಣಿಸಿಕೊಳ್ಳುತ್ತದೆ. ಮೊಗ್ಗು ಕಾಣಿಸಿಕೊಂಡ ತಕ್ಷಣ ನೀರುಣಿಸಲು ಮತ್ತೆ ಪ್ರಾರಂಭಿಸಬೇಕು. ಬಳ್ಳಿಯ ಮೇಲೂ ನೀರು ಸಿಂಪಡಿಸಬೇಕು. ಮೊಗ್ಗು ಬಿಟ್ಟ ಒಂದು ತಿಂಗಳಲ್ಲಿ ಹೂವರಳುತ್ತದೆ. ಹೂವಿಂದ ಹೂವಿಗೆ ಪರಾಗಸ್ಪರ್ಶ ಮಾಡಿಸುವುದನ್ನು ನಾವೇ ಮಾಡಬೇಕು. ಪರಾಗಸ್ಪರ್ಶ ಮಾಡುವುದಕ್ಕೆ ತರಬೇತಿಯ ಅವಶ್ಯಕತೆಯಿದೆ. ಪರಾಗಸ್ಪರ್ಶ ಸರಿಯಾದ ರೀತಿಯಲ್ಲಿ ಮಾಡಿದರೆ, ಒಂಬತ್ತರಿಂದ ಹತ್ತು ತಿಂಗಳಿನೊಳಗೆ ಕೋಡು ಬೆಳೆದು ಕಟಾವಿಗೆ ಸಿದ್ಧವಾಗುತ್ತದೆ. ಕೋಡಿನ ಗುಣಮಟ್ಟದ ಮೇಲೆ ದರ ನಿಗದಿಯಾಗುತ್ತದೆ. ವೆನಿಲ್ಲಾ ಬೆಳೆಸಲು ಶುರುಮಾಡಿದ ದಿನಗಳಲ್ಲಿ ಕಿಲೋ ಒಂದಕ್ಕೆ ೨೫,೦೦೦–೩೦,೦೦೦ ರೂಪಾಯಿವರೆಗೂ ಬೆಲೆ ಇತ್ತು. ಆದರೆ ನಂತರ ಎಲ್ಲ ರೈತರೂ ವೆನಿಲ್ಲಾ ಬೆಳೆಯಲು ಆರಂಭಿಸಿದ್ದರಿಂದ ಬೆಲೆ ಕುಸಿತವಾಗಿದೆ. ವೆನಿಲ್ಲಾ ವಾಣಿಜ್ಯ ಬೆಳೆಯಾಗಿ, ಲಾಭದಾಯಕ ಬೆಳೆಯಾಗಿ ಮುಂದುವರಿಯುವ ಎಲ್ಲ ಲಕ್ಷಣಗಳಿವೆ. ಆದರೆ ಇದನ್ನು ಇತರ ಬೆಳೆಗಳೊಂದಿಗೆ ಒಂದು ನಿರ್ದಿಷ್ಟ ಪ್ರಮಾಣದಲ್ಲಿ ಬೆಳೆಯುವುದು ಉತ್ತಮ. ವಿವರಗಳಿಗೆ ಕೋಷ್ಟಕ ೫.೧೫ ನೋಡಿ.

**ಕೋಷ್ಟಕ ೫.೧೫ : ಜಿಲ್ಲೆಯಲ್ಲಿ ಬೆಳೆದ ವೆನಿಲ್ಲಾ ಬೆಳೆಯ ವಿವರ**

| ಕ್ರ. ಸಂ. | ತಾಲೂಕು | ಫಲಾನುಭವಿಗಳ ಸಂಖ್ಯೆ | ವಿಸ್ತೀರ್ಣ (ಎಕರೆ) | ಪ್ರಮಾಣ ಹಸಿ ಬೀನ್ಸ್ (ಕೆ.ಜಿ) | ದರ (ರೂ.ಗಳಲ್ಲಿ) ಹಸಿಬೀನ್ಸ್‌ಗೆ (೧ ಕೆ.ಜಿ.ಗೆ) | ಸಂಸ್ಕರಿಸಿದ ವೆನಿಲ್ಲಾ |
|---|---|---|---|---|---|---|
| | | | ೨೦೦೦–೦೧ | | | |
| ೧. | ಉಡುಪಿ | ೫೦ | ೫೦.೦೦ | ೭೦೦ | ೩೫೦.೦೦ | ೫೦೦೦.೦೦ |
| ೨. | ಕುಂದಾಪುರ | ೪೦ | ೩೦೦೦ | ೪೦೦ | ೩೫೦.೦೦ | ೫೦೦೦.೦೦ |
| ೩. | ಕಾರ್ಕಳ | ೩೦ | ೨೦.೦೦ | ೩೦೦ | ೩೫೦.೦೦ | ೫೦೦೦.೦೦ |
| | ಒಟ್ಟು | ೧೨೦ | ೧೦೦.೦೦ | ೧೪೦೦ | – | – |
| | | | ೨೦೦೧–೦೨ | | | |
| ೧. | ಉಡುಪಿ | ೮೫ | ೭೦.೦೦ | ೧೫೪೪ | ೮೫೦.೦೦ | ೯೦೦೦.೦೦ |
| ೨. | ಕುಂದಾಪುರ | ೮೪ | ೬೦.೦೦ | ೧೩೨೦ | ೮೫೦.೦೦ | ೯೦೦೦.೦೦ |
| ೩. | ಕಾರ್ಕಳ | ೬೦ | ೪೦.೦೦ | ೮೮೦ | ೮೫೦.೦೦ | ೯೦೦೦.೦೦ |
| | ಒಟ್ಟು | ೨೨೯ | ೧೭೦.೦೦ | ೩೭೪೪ | – | – |
| | | | ೨೦೦೨–೦೩ | | | |
| ೧. | ಉಡುಪಿ | ೯೫ | ೯೦.೦೦ | ೨೯೫೦ | ೧೧೧೦.೦೦ | ೧೦,೦೦೦.೦೦ |
| ೨. | ಕುಂದಾಪುರ | ೧೧೦ | ೯೫.೦೦ | ೩೦೪೦ | ೧೧೧೦.೦೦ | ೧೦,೦೦೦.೦೦ |
| ೩. | ಕಾರ್ಕಳ | ೯೦ | ೧೨೦.೦೦ | ೩೮೪೦ | ೧೧೧೦.೦೦ | ೧೦,೦೦೦.೦೦ |
| | ಒಟ್ಟು | ೨೯೫ | ೩೦೫.೦೦ | ೯೮೩೦ | – | – |

*ಆಧಾರ : ಜಿಲ್ಲಾ ತೋಟಗಾರಿಕಾ ಇಲಾಖೆ, ಉಡುಪಿ*

***ಷರಾ:*** *ಕಳೆದ ಮೂರು ವರುಷದಲ್ಲಿ ಹಸಿ ಬೀನ್ಸ್‌ಗೆ ದರ ಬಹಳ ಕಡಿಮೆ ಇದ್ದ ಪ್ರಯುಕ್ತ ವೆನಿಲ್ಲಾ ಬಳ್ಳಿಯನ್ನು ಕಾಯಿ ಬರಲು ಬಿಡದೆ ಸಸಿ ಮಾಡಲು ಉಪಯೋಗಿಸಿರುತ್ತಾರೆ. ಆದುದರಿಂದ ಇಳುವರಿ ಪ್ರಮಾಣ ಕಡಿಮೆ ಇದೆ.*

## ಜೇನು ಸಾಕಣೆ

ಜಿಲ್ಲೆಯಲ್ಲಿ ಕೃಷಿಕರು, ಸಣ್ಣ ಹಿಡುವಳಿದಾರರು ಮತ್ತು ಗ್ರಾಮೀಣ ಭಾಗದ ಕೃಷಿ ಕಾರ್ಮಿಕರು ಜೇನುಸಾಕಣೆಯನ್ನು ಉಪ ಕಸುಬಾಗಿ ಮಾಡಿಕೊಂಡಿರುವುದು ಕಂಡುಬರುತ್ತದೆ. ಸರಕಾರದ ಪ್ರೋತ್ಸಾಹಕರ ಕ್ರಮಗಳಿಂದಾಗಿ ಜೇನುಸಾಕಣೆಯು ಬಹಳಷ್ಟು ಮಂದಿಗೆ ಆದಾಯ ಹೆಚ್ಚಿಸುವ ಮೂಲಕ ಅವರ ಆರ್ಥಿಕ, ಸಾಮಾಜಿಕ ಸ್ಥಾನಮಾನಗಳನ್ನು ವೃದ್ಧಿಸಿದೆ. ಖಾದಿ ಮತ್ತು ಗ್ರಾಮೀಣ ಕೈಗಾರಿಕಾ ಆಯೋಗ, ಜಿಲ್ಲಾ ಪಂಚಾಯತ್ ಮತ್ತು ಜಿಲ್ಲಾ ಕೈಗಾರಿಕಾ ಕೇಂದ್ರಗಳು ಜೇನು ಸಾಕಣೆಗೆ ಪ್ರೋತ್ಸಾಹ ನೀಡುತ್ತಾ ಬಂದಿವೆ.

ಉಡುಪಿ ಜಿಲ್ಲೆಯಲ್ಲಿ ಒಟ್ಟು ೩೫೦೦ ಕುಟುಂಬಗಳು ಜೇನು ಸಾಕಣೆಯಲ್ಲಿ ತೊಡಗಿವೆ. ೨೦೦೬–೦೭ನೇ ಸಾಲಿನಲ್ಲಿ ೨೫,೦೦೦ ಕಿ.ಗ್ರಾಂ. ಜೇನು ಸಾಕಣೆದಾರರ ಸಹಕಾರಿ ಸಂಘದ ಮೂಲಕ ಮಾರಾಟ ಮಾಡಲಾಗಿದೆ. ಜಿಲ್ಲೆಯ ಕಾರ್ಕಳದಲ್ಲಿ ಜೇನು ಉತ್ಪಾದಕರ ಸಹಕಾರಿ ಸಂಘವಿದೆ. ಪುತ್ತೂರು ಜೇನು ಉತ್ಪಾದಕ ಸಂಘದ ಶಾಖೆಯೊಂದು ಉಡುಪಿಯಲ್ಲಿದೆ. ಉತ್ಪಾದಕ ಸಂಘಗಳು ಜೇನು ಸಾಕಣೆದಾರರಿಗೆ ಅಗತ್ಯ ಮಾಹಿತಿ ಮತ್ತು ಸೌಲಭ್ಯಗಳ ಬಗ್ಗೆಯೂ ಮಾರ್ಗದರ್ಶನ ನೀಡುತ್ತವೆ. ಸರಕಾರದ ನೀತಿಯನ್ವಯ ಜಿಲ್ಲೆಯ ಮೂರು ತಾಲೂಕುಗಳಿಂದ ತಲಾ ೫೦ ಜನರನ್ನು ಆಯ್ದು ಅವರಿಗೆ ಜೇನುಕೃಷಿಯಲ್ಲಿ ತರಬೇತಿಯನ್ನು ನೀಡಲಾಗುತ್ತಿದೆ. ೨೦೦೬–೦೭ನೇ ಸಾಲಿನಲ್ಲಿಯೂ ೧೫೦ ಜನರಿಗೆ ತರಬೇತಿ ನೀಡಲಾಗಿದ್ದು, ಅವರಿಗೆ ಜೇನುಪೆಟ್ಟಿಗೆಯನ್ನು ರಿಯಾಯಿತಿ ದರದಲ್ಲಿ ನೀಡಲಾಗಿದೆ.

## ಕೈಮಗ್ಗ

ಜವಳಿ ಬೇಡಿಕೆಯ ಬಹುಪಾಲನ್ನು ಹಿಂದೆ ಜಿಲ್ಲೆಯಲ್ಲಿರುವ ಕೈಮಗ್ಗಗಳ ಮೂಲಕ ನೇಯಲಾದ ಬಟ್ಟೆಗಳಿಂದ ಪೂರೈಸಲಾಗುತ್ತಿತ್ತು. ಆದರೆ, ಆಧುನಿಕ ವಲಯದಲ್ಲಾದ ಬೆಳವಣಿಗೆಯಿಂದಾಗಿ ಕೂಲಿ ಕಾರ್ಮಿಕರ ವೇತನದಲ್ಲಿ ಹೆಚ್ಚಳವುಂಟಾಗಿದ್ದು, ಪಾರಂಪರಿಕ ವಲಯದ ಆರ್ಥಿಕ ಚಟುವಟಿಕೆಗಳು ಇಂದು ಲಾಭದಾಯಕವಾಗಿ ಉಳಿದಿಲ್ಲ. ಆ ಕಾರಣ ಯುವಜನಾಂಗ ಅನಿವಾರ್ಯವಾಗಿ ಅಧಿಕ ಆದಾಯ ತರುವ ಕಸಬುಗಳತ್ತ ಮುಖ ಮಾಡಿರುವುದು ಸಹಜವೇ. ಈ ಕಾರಣದಿಂದಾಗಿ ಜಿಲ್ಲೆಯಲ್ಲಿ ಕೈಮಗ್ಗಗಳ ಸಂಖ್ಯೆಯಲ್ಲಿ ಗಣನೀಯ ಇಳಿತ ಕಂಡುಬಂದಿರುತ್ತದೆ. ಬಸರೂರು, ಬ್ರಹ್ಮಾವರ, ಉಡುಪಿ, ಶಿವಳ್ಳಿ, ಮಲ್ಪೆ, ಪೆರ್ಡೂರು ಮುಂತಾದೆಡೆ ಇತ್ತೀಚಿನವರೆಗೂ ಲಟಪಟ ಶಬ್ದ ಮಾಡುತ್ತಿದ್ದ ಬಹುತೇಕ ಮಗ್ಗಗಳು ಇಂದು ವಿಶ್ರಾಂತಿ ಸ್ಥಿತಿಗೆ ಹೋಗಿವೆ. ಈ ಮೂಲಕ ಪಾರಂಪರಿಕವಾಗಿ ಮುಂದುವರೆದುಕೊಂಡು ಬಂದಿದ್ದ ಒಂದು ಕಸುಬು ಆರ್ಥಿಕವಾಗಿ ಲಾಭದಾಯಕವಾಗಿಲ್ಲದ್ದರಿಂದ ವಿನಾಶದ ಅಂಚಿಗೆ ಬಂದು ನಿಂತಿದೆ.

ಪದ್ಮಸಾಲಿ ಅಥವಾ ಶೆಟ್ಟಿಗಾರರೆಂದು ಕರೆಯಲ್ಪಡುವ ಜನಾಂಗ ಹಿಂದಿನಿಂದಲೂ ಕೈಮಗ್ಗಗಳಲ್ಲಿ ದುಡಿಯುವುದನ್ನು ಗಮನಿಸಬಹುದು. ಬ್ರಹ್ಮಾವರ (ಸಾಲಿಕೇರಿ), ಬಸರೂರು, ಮಲ್ಪೆ, ಶಿವಳ್ಳಿ, ಪೆರ್ಡೂರು ಮುಂತಾದೆಡೆ ನೂರಾರು ಕೈಮಗ್ಗಗಳು ನಿರಂತರವಾಗಿ ದುಡಿಯುವ ಮೂಲಕ ಸ್ಥಳೀಯ ಜನರಿಗೆ ವಸ್ತ್ರ ಒದಗಿಸಿಕೊಡುತ್ತಿದ್ದವು. ಕೈಮಗ್ಗದಲ್ಲಿನ ಕೆಲಸದಲ್ಲಿ ಇಡೀ ಕುಟುಂಬವೇ ತೊಡಗಿಕೊಳ್ಳುತ್ತಿತ್ತು. ಇದು ಕೇವಲ ಉತ್ಪಾದನೆ ಮಾತ್ರವಲ್ಲದೇ ಅದಕ್ಕೊಂದು ಸಾಂಸ್ಕೃತಿಕ ಆಯಾಮವೂ ಇತ್ತು. ಮಕ್ಕಳು, ಮಹಿಳೆಯರು, ಪುರುಷರು ಬಟ್ಟೆ ನೇಯುವಿಕೆಗೆ ಸಂಬಂಧಿಸಿದ ವಿವಿಧ ಕೆಲಸಗಳನ್ನು ಮಾಡುತ್ತಿದ್ದರು. ಇತ್ತೀಚಿನ ದಿನಗಳಲ್ಲಿ ಮಕ್ಕಳು ವಿದ್ಯಾಭ್ಯಾಸ ಪಡೆದು ಹೆಚ್ಚಿನ ಆದಾಯ ತರುವ ಆಧುನಿಕ ವೃತ್ತಿ ಜೀವನವನ್ನು ಆರಿಸಿಕೊಂಡಿರುವುದು ಕಂಡುಬರುತ್ತಿದೆ. ಹಾಗಾಗಿ ಕೆಲಸವನ್ನು ಮುಂದುವರೆಸಿಕೊಂಡು ಹೋಗುವ ಜನವರ್ಗ ಕಾಣಸಿಗುವುದಿಲ್ಲ. ಈಗ ಕೈಮಗ್ಗಗಳಲ್ಲಿ ೪೦ ಅಥವಾ ೫೦ ವರ್ಷ ದಾಟಿದವರು ಮಾತ್ರ ದುಡಿಯುತ್ತಿದ್ದಾರೆ. ಅಂತಹ ದುಡಿತವು ಆರ್ಥಿಕವಾಗಿ ಆಕರ್ಷಕವಾಗಿ ಉಳಿದಿಲ್ಲ. ಯಾಕೆಂದರೆ ಬೆಳಿಗ್ಗೆಯಿಂದ ಸಂಜೆಯವರೆಗೆ ಮಗ್ಗದಲ್ಲಿ ನೇಯ್ದ ಒಂದು ಸೀರೆಗೆ ೮೦–೯೦ ರೂಪಾಯಿ ಮಜೂರಿ ದೊರೆತರೆ, ಸಾಮಾನ್ಯ ಕೂಲಿ ಕಾರ್ಮಿಕನಿಗೆ ೧೨೫–೧೫೦ ರೂಪಾಯಿ ದೊರೆಯುತ್ತಿದೆ ಮತ್ತು ಕೂಲಿ ಕೆಲಸ ನೇಯ್ಗೆಯಷ್ಟು ತ್ರಾಸದಾಯಕವಾಗಿಯೂ ಇರುವುದಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಯಾರು ತಾನೇ ಕೈಮಗ್ಗದಲ್ಲಿ ದುಡಿಯುವ ವೃತ್ತಿಯನ್ನು ಮುಂದುವರಿಸಿಕೊಂಡು ಹೋಗುತ್ತಾರೆ? ಹೀಗಾಗಿ ಬಹಳಷ್ಟು ಕುಟುಂಬಗಳು ವಲಸೆ ಹೋಗಿ ಬದುಕಿಗೆ ಪರ್ಯಾಯ ಮಾರ್ಗಗಳನ್ನು ಕಂಡುಕೊಂಡಿದ್ದಾರೆ. ಆಧುನಿಕ ಶಿಕ್ಷಣದಲ್ಲಿ ಈ ಜನಾಂಗದ ಬಹಳಷ್ಟು ಯುವಕ–ಯುವತಿಯವರು ಉತ್ತಮ ಸಾಧನೆ ಮಾಡಿರುವುದೂ ಕಂಡು ಬರುತ್ತದೆ. ಹತ್ತಿಯ ನೂಲು ಖರೀದಿ, ಬಣ್ಣ ಹಾಕುವಿಕೆ, ನೇಯುವಿಕೆ ಇಂತಹ ಎಲ್ಲ ಪರಿಶ್ರಮದ ಹಂತಗಳನ್ನು ದಾಟಿ ಸಿದ್ಧವಾಗುವ ೪೦ ಎಣಿಕೆಯ ಸೀರೆಗೆ ರೂ. ೧೫೦ ಲಭಿಸಿದರೆ, ೬೦ ಎಣಿಕೆಯ ಸೀರೆಗೆ ರೂ. ೧೮೦ ದೊರೆಯುತ್ತದೆ. ಆದರೆ, ಆಧುನಿಕ ಗಿರಣಿಯಲ್ಲಿ ಸಿದ್ಧವಾದ ನೂಲಿನ ಸೀರೆ ಇದಕ್ಕಿಂತ ಕಡಿಮೆ ಬೆಲೆಗೆ ಸಿಗುವಾಗ ಮಗ್ಗದಲ್ಲಿ

ನೇಯ್ದ ಸೀರೆಯನ್ನು ಯಾರು ತಾನೆ ಕೊಳ್ಳಲು ಮುಂದೆ ಬರುತ್ತಾರೆ? ಮಾತ್ರವಲ್ಲ ಗಿರಣಿಯಲ್ಲಿ ತಯಾರಾಗುವ ಸೀರೆಯಲ್ಲಿ ವಿವಿಧ ಮಾದರಿಗಳನ್ನು ನೀಡುವುದು ಸುಲಭ. ಆದರೆ, ಮಗ್ಗದ ಸೀರೆಗಳಲ್ಲಿ ಅಂತಹ ವಿನ್ಯಾಸಗಳನ್ನು ಮಾಡಲು ಸಾಧ್ಯವಿಲ್ಲ. ವಿನ್ಯಾಸ ಬದಲಾವಣೆ ಮಾಡಬೇಕಿದ್ದರೆ ಅಧಿಕ ಬಂಡವಾಳ ಬೇಕು. ಅಧಿಕ ಬಂಡವಾಳ ವಿನಿಯೋಗಿಸಿದರೆ ಉತ್ಪಾದನಾ ವೆಚ್ಚದಲ್ಲಿ ಏರಿಕೆಯಾಗಿ, ಉತ್ಪನ್ನದ ಬೆಲೆ ಮತ್ತಷ್ಟು ಹೆಚ್ಚುವ ಸಂಭವವಿದೆ. ಹಾಗಾಗಿ ವಿನ್ಯಾಸ ಬದಲಾವಣೆ ಅಥವಾ ಹೆಚ್ಚಳಕ್ಕೆ ತುಂಬಾ ಇತಿಮಿತಿಗಳಿವೆ. ಒಂದೊಮ್ಮೆ ಅಂತಹ ಒಂದು ಸವಾಲನ್ನು ಸ್ವೀಕರಿಸಿ ಸ್ಪರ್ಧೆಗಿಳಿದರೂ, ಹೊಸ ವಿನ್ಯಾಸವು ಒಂದು–ಒಂದೂವರೆ ವರ್ಷಕ್ಕಿಂತ ಹೆಚ್ಚು ಕಾಲ ಚಲಾವಣೆಯಲ್ಲಿರುವುದಿಲ್ಲ, ಇಂದಿನ ಫ್ಯಾಷನ್ ಯುಗದಲ್ಲಿ ನಿರಂತರವಾಗಿ ವಿನ್ಯಾಸ ಬದಲಾವಣೆ ಅನಿವಾರ್ಯವಾದರೂ ಕೈಮಗ್ಗಗಳು ಇಂತಹ ಅನಿವಾರ್ಯತೆಗೆ ಒಗ್ಗಿಕೊಳ್ಳುವ ಮಾದರಿಯಲ್ಲಿಲ್ಲ. ಆದರೆ ಗಿರಣಿಯ ಉತ್ಪಾದನೆ ಈ ರೀತಿಯ ಬದಲಾವಣೆಗಳಿಗೆ ಬಹಳ ಸುಲಭವಾಗಿ ಹೊಂದಿಕೊಳ್ಳುವ ಮಾದರಿಯಲ್ಲಿರುವುದರಿಂದ, ಕೈಮಗ್ಗಗಳಂತೂ ಗಿರಣಿಗಳೊಂದಿಗೆ ಸ್ಪರ್ಧೆಗಿಳಿಯುವುದು ಅಸಾಧ್ಯದ ಮಾತು. ಮೇಲಾಗಿ ಈಗ ಮಹಿಳೆಯರು, ಯುವತಿಯರು, ಪ್ಯಾಂಟ್, ಶರ್ಟ್, ಸಲ್ವಾರ್ ಕಮೀಜ್, ಮನೆಯಲ್ಲಿರುವಾಗ ನೈಟಿ.. ಇತ್ಯಾದಿ ಹೊಸ ಬಗೆಯ ಉಡುಪು ಧರಿಸಲು ಪ್ರಾರಂಭಿಸಿರುವುದು ಸೀರೆಗಳಿಗೆ ಸ್ವಾಭಾವಿಕವಾಗಿಯೇ ಬೇಡಿಕೆ ಕಡಿಮೆಯಾಗಿದೆ. ಕೈಮಗ್ಗದಲ್ಲಿ ಕೆಲಸ ಮಾಡುವ ಕುಶಲಕರ್ಮಿಗಳು ಇಂದು ಸಹಕಾರೀ ಸಂಘಗಳ ಸದಸ್ಯರಾಗಿದ್ದುಕೊಂಡು, ಸಹಕಾರಿ ಸಂಘಗಳ ಮೂಲಕ ಎಲ್ಲ ವ್ಯಾಪಾರ ವಹಿವಾಟುಗಳನ್ನು ನಡೆಸುತ್ತಿದ್ದಾರೆ. ಸರಕಾರದಿಂದ ಹಬ್ಬ–ಹರಿದಿನ ಕಾಲದಲ್ಲಿ ೧೦ ರಿಂದ ೨೦ ಶೇಕಡಾವರೆಗೆ ರಿಯಾಯಿತಿ ಘೋಷಣೆಯಾಗುತ್ತಿದೆಯಾದರೂ ಉಳಿದಂತೆ ಕೇವಲ ಶೇಕಡಾ ೪ರ ರಿಯಾಯಿತಿ ಮಾತ್ರ ದೊರೆಯುತ್ತಿದ್ದು, 'ಭೀಮನ ಹೊಟ್ಟೆಗೆ ಅರೆ ಕಾಸಿನ ಮಜ್ಜಿಗೆ' ಎಂಬಂತಾಗಿದೆ. ಮಾರುಕಟ್ಟೆಯಾಧಾರಿತ ಮುಕ್ತ ಅರ್ಥವ್ಯವಸ್ಥೆಯಂತೂ ಕೈಮಗ್ಗಗಳ ಅಂತ್ಯವನ್ನು ವೇಗಗೊಳಿಸಿದೆ. ಸಾಂಪ್ರದಾಯಿಕ ಕಸುಬಾಗಿರುವ ಕೈಮಗ್ಗಗಳನ್ನು ಜೀರ್ಣೋದ್ಧಾರಗೊಳಿಸುವ ಮಾರ್ಗೋಪಾಯಗಳನ್ನು ಸರಕಾರ, ವಸ್ತ್ರ ವಿನ್ಯಾಸಕಾರರು, ವೃತ್ತಿನಿರತರು ಕೈಗೊಳ್ಳುವುದು ಸೂಕ್ತವಾಗಿದೆ.

## ಗ್ರಾಮೀಣ ಅಭಿವೃದ್ಧಿ ಮತ್ತು ಸ್ವ–ಉದ್ಯೋಗ ತರಬೇತಿ ಸಂಸ್ಥೆ (ರುಡ್‌ಸೆಟ್)

ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಶಿಕ್ಷಣ ಟ್ರಸ್ಟ್, ಕೆನರಾ ಬ್ಯಾಂಕ್, ಸಿಂಡಿಕೇಟ್ ಬ್ಯಾಂಕ್, ಸಾರ್ಡ್ ಪ್ರತಿಷ್ಠಾನ ಮತ್ತು ಸಿ.ಬಿ.ಸಿ.ಆರ್.ಡಿ.ಸಿ. ಇವುಗಳ ಜಂಟಿ ಪ್ರಾಯೋಜಕತ್ವದಲ್ಲಿ ಪ್ರಾರಂಭವಾದ ಒಂದು ವಿಶಿಷ್ಟ ತರಬೇತಿ ಸಂಸ್ಥೆ. ದೇಶಾದ್ಯಂತ ೨೦ ಶಾಖೆಗಳನ್ನು ಹೊಂದಿದೆ. ಕರ್ನಾಟಕ ರಾಜ್ಯದಲ್ಲಿಯೇ ಇದರ ಏಳು ಶಾಖೆಗಳಿವೆ. ಉಡುಪಿ ಜಿಲ್ಲೆಯಲ್ಲಿ ರುಡ್‌ಸೆಟ್ ೧೯೮೮ರಲ್ಲಿ ಮಣಿಪಾಲ ಸಮೀಪದ ಶಿವಳ್ಳಿಯಲ್ಲಿ ಪ್ರಾರಂಭವಾಗಿದ್ದು, ೨೦೦೪ರಲ್ಲಿ ಬ್ರಹ್ಮಾವರ ಸಮೀಪದ ಹೇರೂರಿಗೆ ಸ್ಥಳಾಂತರಗೊಂಡಿದೆ.

ಈ ಸಂಸ್ಥೆಯಲ್ಲಿ ತರಬೇತಿ ಪಡೆಯಲು ಯಾವುದೇ ಶೈಕ್ಷಣಿಕ ಅರ್ಹತೆ ಅಗತ್ಯವಿಲ್ಲ. ಬೋಧನೆಗಿಂತ ಪ್ರಾತ್ಯಕ್ಷಿತೆ ಮತ್ತು ವಾಸ್ತವಿಕ ನೆಲೆಯಲ್ಲಿ ತರಬೇತಿಯನ್ನು ಆಯೋಜಿಸಿರುವುದರಿಂದ ಉಪಯುಕ್ತವಾದ ಕೌಶಲ್ಯಗಳನ್ನು ಅಭ್ಯರ್ಥಿಗಳು ಪಡೆಯುತ್ತಿದ್ದಾರೆ. ವ್ಯಕ್ತಿತ್ವ ವಿಕಸನ, ಆತ್ಮಸ್ಥೈರ್ಯ, ವ್ಯವಹಾರಿಕ ಜಾಣ್ಮೆ, ಲೆಕ್ಕಪತ್ರ ನಿರ್ವಹಣೆ ಯೋಜನಾ ವರದಿ ತಯಾರಿಕೆ ಮುಂತಾದ ವಿಷಯಗಳಲ್ಲಿ ಉತ್ತಮ ತರಬೇತಿ ನೀಡಲಾಗುತ್ತಿದೆ.

ಈ ಸಂಸ್ಥೆಯ ಶಾಖೆಗಳು ಸ್ಥಳೀಯ ಸಂಪನ್ಮೂಲ, ಅವಶ್ಯಕತೆಗಳನ್ನು ಆಧರಿಸಿ, ಅಭ್ಯರ್ಥಿಗಳಿಗೆ ಅಗತ್ಯವಿರುವ ತರಬೇತಿಯನ್ನು ನೀಡುತ್ತವೆ. ಈ ಸಂಸ್ಥೆಯ ಪ್ರತಿ ಶಾಖೆಯಲ್ಲಿ ಪ್ರವರ್ತಕ ಸಂಸ್ಥೆಯ ಅಧಿಕಾರಿಗಳು, ಸರ್ಕಾರಿ ಅಧಿಕಾರಿಗಳು ಮತ್ತು ಸಮಾಜದ ಗಣ್ಯರನ್ನೊಳಗೊಂಡ ಸಲಹಾ ಸಮಿತಿ ಇರುತ್ತದೆ. ಈ ಸಮಿತಿ ಕಾಲಕಾಲಕ್ಕೆ ಸಂಸ್ಥೆಯ ಕಾರ್ಯವೈಖರಿಯನ್ನೂ, ಪ್ರಗತಿಯನ್ನೂ ಗಮನಿಸಿ ಸಲಹೆ ಸೂಚನೆಗಳನ್ನು ನೀಡುತ್ತದೆ. ಸಂಸ್ಥೆಯ ಕಾರ್ಯಕ್ರಮದಂತೆ ೨೦೦೬–೦೭ನೇ ಸಾಲಿನಲ್ಲಿ ತರಬೇತಿ ಪಡೆದವರ ವಿವರವನ್ನು ಇಲ್ಲಿ ನೀಡಲಾಗಿದೆ.

**೨೦೦೬-೦೭ನೇ ಸಾಲಿನಲ್ಲಿ ತರಬೇತಿ ಪಡೆದವರ ವಿವರ**

| ಕ್ರಸಂ. | ತರಬೇತಿ ವಿವರ | ಕಾರ್ಯಕ್ರಮಗಳು | ಹಾಜರಾದ ಅಭ್ಯರ್ಥಿಗಳು(ಸಂಖ್ಯೆಯಲ್ಲಿ) |
|---|---|---|---|
| ೧ | ಸ್ವ -ಉದ್ಯೋಗ | ೩೦ | ೯೨೪ |
| ೨ | ಗ್ರಾಮೀಣ ಅಭಿವೃದ್ಧಿ | ೦೧ | ೯೦ |
| ೩ | ಉದ್ಯಮಶೀಲತೆ ಅಭಿವೃದ್ಧಿ | ೧೫ | ೫೬೨ |
| ೪ | ಕೌಶಲ್ಯ ಅಭಿವೃದ್ಧಿ | ೦೧ | ೨೬ |
| ೫ | ಮಾನವ ಸಂಪನ್ಮೂಲ ಅಭಿವೃದ್ಧಿ | ೦೫ | ೧೮೩ |
| | **ಒಟ್ಟು** | **೫೨** | **೧,೭೮೫** |

| ಕ್ರಸಂ. | ಉದ್ದಿಮೆ ಸ್ಥಾಪಿಸಿದವರ ವಿವರ | ಸಂಖ್ಯೆ |
|---|---|---|
| ೧. | ಬ್ಯಾಂಕ್ ಸಾಲದ ಸಹಾಯದಿಂದ | ೨೮೨ |
| ೨. | ಬ್ಯಾಂಕ್ ಸಾಲದ ಸಹಾಯವಿಲ್ಲದೆ | ೧೬೦ |
| | **ಒಟ್ಟು** | **೪೪೨** |

## ಉದ್ಯಮಶೀಲತೆ ಅಭಿವೃದ್ಧಿ

ಜಿಲ್ಲೆಯಲ್ಲಿ ಉದ್ಯಮಶೀಲತೆಯ ಅಭಿವೃದ್ಧಿ ಕುರಿತಂತೆ ಮಾರ್ಗದರ್ಶನ ಮತ್ತು ತರಬೇತಿ ನೀಡುವ ಸಂಸ್ಥೆಗಳು ಕಾರ್ಯನಿರತವಾಗಿವೆ. ಇಂತಹ ಸಂಸ್ಥೆಗಳ ಸಹಾಯದಿಂದ ಹಲವಾರು ನಿರುದ್ಯೋಗಿಗಳು ತರಬೇತಿ ಪಡೆದು ಅತಿಸಣ್ಣ ಉದ್ಯಮ ಹಾಗೂ ಸಣ್ಣ ಉದ್ಯಮಗಳನ್ನು ಪ್ರಾರಂಭಿಸುವ ಮೂಲಕ ಜಿಲ್ಲೆಯ ಅಭಿವೃದ್ಧಿಗೆ ಕಾರಣಕರ್ತರಾಗಿದ್ದಾರೆ.

ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಶಿಕ್ಷಣ ಪ್ರತಿಷ್ಠಾನ, ಸಿಂಡಿಕೇಟ್ ಬ್ಯಾಂಕ್ ಹಾಗೂ ಕೆನರಾ ಬ್ಯಾಂಕ್‌ಗಳು ಜಂಟಿಯಾಗಿ ಸ್ಥಾಪಿಸಿದ ಗ್ರಾಮೀಣ ಅಭಿವೃದ್ಧಿ ಮತ್ತು ಸ್ವಉದ್ಯೋಗ ತರಬೇತಿ ಸಂಸ್ಥೆಯು ಬ್ರಹ್ಮಾವರ ಸಮೀಪದ ಹೇರೂರಿನಲ್ಲಿ ಕಾರ್ಯನಿರ್ವಹಿಸುತ್ತಿದೆ. ದೇಶಾದ್ಯಂತ ಸುಮಾರು ೨೦ ಇಂತಹ ತರಬೇತಿ ಸಂಸ್ಥೆಗಳಿದ್ದು, ಕರ್ನಾಟಕ ರಾಜ್ಯದಲ್ಲಿ ಏಳು ತರಬೇತಿ ಕೇಂದ್ರಗಳಿವೆ. ಜಿಲ್ಲೆಯಲ್ಲಿರುವ ಈ ತರಬೇತಿ ಸಂಸ್ಥೆಯಲ್ಲಿ ಈ ಕೆಳಗೆ ಸೂಚಿಸಿದ ಕಾರ್ಯಕ್ರಮಗಳನ್ನು ನಡೆಸಲಾಗಿದೆ.

- ಉದ್ಯಮಶೀಲತಾ ಅಭಿವೃದ್ಧಿಯಲ್ಲಿ ತರಬೇತಿ
- ಕೌಶಲ್ಯ ವರ್ಧನೆಯ ಬಗ್ಗೆ ತರಬೇತಿ
- ಉದ್ಯಮ ಅಭಿವೃದ್ಧಿಯ ಬಗ್ಗೆ ತರಬೇತಿ
- ತಂತ್ರಜ್ಞಾನ ವರ್ಗಾವಣೆ ಕುರಿತಂತೆ ತರಬೇತಿ
- ಮಾನವ ಸಂಪನ್ಮೂಲ ವರ್ಧನೆಯ ಬಗ್ಗೆ ತರಬೇತಿ
- ತರಬೇತುದಾರರಿಗೆ ತರಬೇತಿ ಕಾರ್ಯಕ್ರಮ
- ಹಣಕಾಸು ಸಂಸ್ಥೆ ಮತ್ತು ಸರಕಾರೇತರ ಸಂಸ್ಥೆಗಳ ನಡುವಿನ ಸಂಬಂಧ ಕುರಿತಂತೆ ತರಬೇತಿ
- ರುಡ್‌ಸೆಟ್ ಬಜಾರ್

## ಸಿಂಡಿಕೇಟ್ ಗ್ರಾಮೀಣ ಉದ್ಯಮಶೀಲತಾ ಅಭಿವೃದ್ಧಿ ಸಂಸ್ಥೆ

ಈ ಸಂಸ್ಥೆಯು ಮಣಿಪಾಲದಲ್ಲಿದ್ದು, ಸ್ವ–ಉದ್ಯೋಗ ಹಾಗೂ ಸ್ವಂತ ಉದ್ಯಮ ಸ್ಥಾಪಿಸುವ ಯುವಕ–ಯುವತಿಯರಿಗೆ ತರಬೇತಿ ಹಾಗೂ ಮಾರ್ಗದರ್ಶನ ನೀಡುತ್ತಿದೆ. ಸರಕಾರದ ವಿವಿಧ ಯೋಜನೆಯಡಿ ಫಲಾನುಭವಿಗಳಿಗೆ ಅಗತ್ಯವಿರುವ ತರಬೇತಿಯನ್ನು ನೀಡುವ ಮೂಲಕ ಆಸಕ್ತರು ಮತ್ತು ದುರ್ಬಲ ವರ್ಗದ ಜನರಿಗೆ ಸಹಾಯ ಹಸ್ತ ನೀಡುತ್ತಿದೆ. ಇಷ್ಟು ಮಾತ್ರವಲ್ಲದೆ ರಾಜ್ಯ ಮತ್ತು ಕೇಂದ್ರ ಸರಕಾರದ ವಿವಿಧ ಯೋಜನೆಯಡಿ, ಹಲವಾರು ಇಲಾಖೆಗಳಿಂದ ದೊರೆಯುವ ಸವಲತ್ತುಗಳ ಬಗ್ಗೆ ಮಾಹಿತಿ, ಸ್ವಂತ ಉದ್ದಿಮೆ ನಿರ್ಮಿಸಲು ಅಗತ್ಯವಿರುವ ತರಬೇತಿ, ಉದ್ಯೋಗ ಸ್ಥಾಪಿಸಲು ಹಣಕಾಸು ಸಂಸ್ಥೆಗಳಿಂದ ಬಂಡವಾಳ ಪಡೆದುಕೊಳ್ಳುವ ಬಗ್ಗೆ ಮಾಹಿತಿ ಮತ್ತು ಮಾರ್ಗದರ್ಶನ ಒದಗಿಸಿಕೊಡುತ್ತದೆ.

೨೦೦೬–೦೭ನೇ ಸಾಲಿನಲ್ಲಿ ಸುಮಾರು ೧೨೫ ಜನರಿಗೆ ತರಬೇತಿ ನೀಡಲಾಗಿದ್ದು, ಅವರಲ್ಲಿ ೧೦೪ ಮಂದಿ ಮಹಿಳೆಯರಾಗಿದ್ದಾರೆ. ಸಂಸ್ಥೆ ಪ್ರಾರಂಭವಾದಂದಿನಿಂದ ೨೮೨ ತಂಡಗಳಲ್ಲಿ ೧೪,೫೬೮ ಜನರಿಗೆ ತರಬೇತಿ ನೀಡಲಾಗಿದ್ದು, ಅವರಲ್ಲಿ ೯,೦೪೫ ಮಂದಿ ಮಹಿಳೆಯರಾಗಿರುತ್ತಾರೆ. ಈ ಸಂಸ್ಥೆಯಲ್ಲಿ ಬಹುಪಾಲು ಮಹಿಳೆಯರೇ ತರಬೇತಿ ಪಡೆಯುತ್ತಿರುವ ಅಂಶ ಉಲ್ಲೇಖಾರ್ಹ.

## ಸಾಫ್ಟ್‌ವೇರ್ ಟೆಕ್ನಾಲಜಿ ಪಾರ್ಕ್ ಆಫ್ ಇಂಡಿಯಾ (ಎಸ್.ಟಿ.ಪಿ.ಐ.)

ಮಾಹಿತಿ ತಂತ್ರಜ್ಞಾನ ರಂಗದ ಉದ್ದಿಮೆಗಳು ಯಶಸ್ವಿಯಾಗಿ ಕಾರ್ಯವೆಸಗಲು ಮೂಲಭೂತ ಸೌಕರ್ಯ ಒದಗಿಸುವ ನಿಟ್ಟಿನಲ್ಲಿ ಅಂತರ್ಜಾಲ ಸಂಪರ್ಕ ಒದಗಿಸುವ ಭೂ–ಕೇಂದ್ರವನ್ನು ಮಣಿಪಾಲದಲ್ಲಿ ಸ್ಥಾಪಿಸಲಾಗಿದೆ. ಕೇಂದ್ರ ಸರಕಾರದ ಸಂಪರ್ಕ ಸಚಿವಾಲಯದ ನಿಯಂತ್ರಣದಲ್ಲಿರುವ ಈ ಭೂ–ಕೇಂದ್ರದ ಸ್ಥಾಪನೆಯಾದ ನಂತರ ಮಾಹಿತಿ ತಂತ್ರಜ್ಞಾನ ಆಧಾರಿತ ಉದ್ದಿಮೆಗಳಿಗೆ ಪ್ರೋತ್ಸಾಹ ದೊರೆತಿದ್ದು, ಈಗಾಗಲೇ ೫ ಉದ್ದಿಮೆಗಳು ಕಾರ್ಯನಿರ್ವಹಿಸುತ್ತಿವೆ. ಮುಂದಿನ ದಿನಗಳಲ್ಲಿ ಈ ಭೂ ಕೇಂದ್ರದ ಸಾಮರ್ಥ್ಯವನ್ನು ಇನ್ನಷ್ಟು ಹೆಚ್ಚಿಸಿ ಶಿಕ್ಷಣ ಸಂಸ್ಥೆಗಳಿಗೆ ಹಾಗೂ ಉದ್ಯಮ ವಲಯಕ್ಕೆ ಇದರ ಪ್ರಯೋಜನ ಒದಗಿಸಿಕೊಡುವ ಯೋಜನೆಗಳಿವೆ.

# ಕುಕ್ಕುಟೋದ್ಯಮ

ಕೋಳಿ ಪಾಲನೆ ಅಥವಾ ಕುಕ್ಕುಟೋದ್ಯಮ ಇಂದು ಜಿಲ್ಲೆಯಲ್ಲಿ ದೊಡ್ಡ ಉದ್ಯಮವಾಗಿ ಬೆಳೆದಿದೆ. ಉಡುಪಿ ಮತ್ತು ಕುಂದಾಪುರ ತಾಲೂಕುಗಳು ಈ ಉದ್ಯಮದಲ್ಲಿ ಉತ್ತಮ ಸಾಧನೆ ಮಾಡಿದ್ದರೆ ಕಾರ್ಕಳ ತಾಲೂಕಿನಲ್ಲಿ ಈ ಉದ್ಯಮವಿನ್ನೂ ಬೆಳೆಯುವ ಹಂತದಲ್ಲಿದೆ.

ಇತ್ತೀಚೆಗೆ ಕೋಳಿ ಸಾಕಣೆ ಜಿಲ್ಲೆಯಲ್ಲಿ ಹೆಚ್ಚು ಪ್ರಾಮುಖ್ಯತೆಯನ್ನು ಪಡೆಯುತ್ತಿದೆಯಾದರೂ, ಜಿಲ್ಲೆಯ ಅವಶ್ಯಕತೆಯನ್ನು ಪೂರೈಸುವಷ್ಟು ಉತ್ಪಾದನೆ ಆಗುತ್ತಿಲ್ಲ. ಹೀಗಾಗಿ ಹೊರಪ್ರದೇಶಗಳಿಂದ ಕೋಳಿ ಮಾಂಸ ಮತ್ತು ಮೊಟ್ಟೆ ಪೂರೈಕೆಯಾಗುತ್ತಿದೆ. ಹೈಬ್ರೀಡ್ ತಳಿಗಳ ಅಭಿವೃದ್ಧಿ, ಉತ್ತಮ ನಿರ್ವಹಣೆಯ ವಿಧಾನಗಳು, ಕೋಳಿಗಳಿಗೆ ಬರುವ ರೋಗಗಳನ್ನು ನಿಗ್ರಹಿಸಲು ಸೂಕ್ತ ಔಷಧೋಪಚಾರಗಳ ಬಗ್ಗೆ ಸೂಕ್ತ ಮಾಹಿತಿ ಮತ್ತು ತರಬೇತಿ ಲಭ್ಯವಿರುವುದರಿಂದ ಈ ಉದ್ಯಮವನ್ನು ಲಾಭದಾಯಕವಾಗಿ ನಡೆಸಿಕೊಂಡು ಹೋಗಬಹುದು. ಜಿಲ್ಲೆಯ ಕೋಳಿ ಸಾಕಣೆಯಲ್ಲಿ ಪ್ರಮುಖವಾಗಿ ಎರಡು ವಿಧದ ಉದ್ಯಮಗಳಿವೆ. ೧) ಮಾಂಸದ (ಬ್ರಾಯ್ಲರ್) ಕೋಳಿ ಪಾಲನೆ ೨) ಮೊಟ್ಟೆ ಇಡುವ ಕೋಳಿಗಳ ಪಾಲನೆ.

ಕುಕ್ಕುಟೋದ್ಯಮ ಪ್ರಸ್ತುತ ಒಂದು ಸ್ಥಳೀಯ ಸಂಪನ್ಮೂಲವನ್ನವಲಂಬಿಸಿ ನಡೆಯುತ್ತಿರುವ ಉದ್ಯಮವಾಗಿಲ್ಲ. ಈ ಹಿಂದೆ ನಡೆಯುತ್ತಿದ್ದಂತೆ ಕುಕ್ಕುಟ ಪಾಲಕರೇ ಸಂಪೂರ್ಣವಾಗಿ ಈ ಉದ್ಯಮವನ್ನು ನಿಯಂತ್ರಿಸುತ್ತಿಲ್ಲ. ಪಾಲಕರು ಗುತ್ತಿಗೆ ಆಧಾರದ ಮೇಲೆ ಮರಿಗಳನ್ನು ಸಾಕಿ ದೊಡ್ಡದು ಮಾಡಿ ಕಂಪನಿಗಳಿಗೆ ಕೊಡುವ ಕೆಲಸವನ್ನು ಮಾತ್ರ ಮಾಡುತ್ತಿದ್ದಾರೆ. ಮರಿಗಳನ್ನು ಒದಗಿಸುವುದು, ಆಹಾರ, ಔಷಧಿ ಇತ್ಯಾದಿಗಳಿಗೆ

ಸಂಬಂಧಿಸಿದಂತೆ ಎಲ್ಲಾ ಜವಾಬ್ದಾರಿ ಇರುವುದು ಖಾಸಗೀ ವಲಯದ ಕಂಪನಿಗಳ ಕೈಯಲ್ಲಿ. ಸಾಮಾನ್ಯ ಸಾಕಣೆ ಕೇಂದ್ರದಲ್ಲಿ ನಡೆಯುವ ಚಟುವಟಿಕೆಗಿಂತ ಮೊದಲು ಅಥವಾ ನಂತರದ ಹಂತಗಳಲ್ಲಿ ನಡೆಯುವ ಚಟುವಟಿಕೆಗಳನ್ನು ಗಮನಿಸಿದರೆ ಕುಕ್ಕುಟೋದ್ಯಮ ನಿಧಾನವಾಗಿ ಬೃಹತ್ ಬಂಡವಾಳ ಬಯಸುವ ಉದ್ಯಮವಾಗುತ್ತಿದೆ ಎಂದು ತಿಳಿದುಬರುತ್ತದೆ.

ಸಾಕಣೆದಾರರಿಗೆ ದೊರಕುವ ಮರಿಗಳನ್ನು ಖಾಸಗಿ ವಲಯದ ಕಂಪನಿಗಳು ಸಲಹುವ ಕೋಳಿಗಳಿಂದ ಬರುತ್ತದೆ. ಅಂತಹ ಕೋಳಿಗಳನ್ನು ಗ್ರಾಂಡ್ ಪೇರೆಂಟ್ಸ್ ಎಂದು ಕರೆಯುತ್ತಾರೆ. ಇಂತಹ ಗ್ರಾಂಡ್ ಪೇರೆಂಟ್ ತಳಿಯ ಕೋಳಿಗಳನ್ನು ಬಹುರಾಷ್ಟ್ರೀಯ ಕಂಪನಿಗಳಿಂದ ಪಡೆಯಲಾಗುತ್ತದೆ. ವಿಶ್ವದಾದ್ಯಂತ ಲಭ್ಯವಿರುವ ಕೋಳಿಗಳ ಅಮೂಲಾಗ್ರ ಅಧ್ಯಯನ ನಡೆಸಿ ಅವುಗಳಲ್ಲಿರುವ ಉತ್ತಮ ಅಂಶಗಳನ್ನು ಸಂಶೋಧನೆಯ ಮೂಲಕ ಹೊಸ ತಲೆಮಾರಿನ ಕೋಳಿಗಳಿಗೆ ವರ್ಗಾಯಿಸಿ ಅತ್ಯಂತ ನಿಖರವಾಗಿ, ರೋಗವಿಲ್ಲದ, ಅಧಿಕ ಮಾಂಸ ಲಭ್ಯವಾಗುವ ರೀತಿಯ ಗ್ರಾಂಡ್ ಪೇರೆಂಟ್‌ಗಳನ್ನು ಪಡೆಯಲಾಗುತ್ತದೆ. ಗ್ರಾಂಡ್ ಪೇರೆಂಟ್‌ಗಳನ್ನು ಕೋಳಿಸಾಕಲು ಮನಸ್ಸಿರುವ ಸಾಕಣೆದಾರರಿಗೆ ಪೂರೈಸಲಾಗುತ್ತದೆ. ಮರಿಗಳಿಗೆ ಆಹಾರ, ಔಷಧ ನೀಡಿ ಬೆಳೆದ ಮೇಲೆ ಅವುಗಳನ್ನು ಪೂರೈಸಿದ ಕಂಪನಿಗಳೇ ಖರೀದಿಸುತ್ತವೆ. ಖರೀದಿಸಿದ ಮರಿಗಳಿಂದ ಮಾಂಸವನ್ನು ಸಂಗ್ರಹಿಸಿ, ಹಾಗೆಯೇ ಶೀತಲೀಕರಿಸಿ ಮಾರಾಟ ಮಾಡಲಾಗುತ್ತದೆ. ಸಾಕಣೆದಾರರಿಗೆ ಬೆಳೆಸಲಾದ ಮರಿಯೊಂದರ ಮೇಲೆ ಪೂರ್ವ ನಿಗಧಿತ ದರ ನೀಡಲಾಗುತ್ತದೆ. ಇಂತಹ ಗುತ್ತಿಗೆ ಆಧಾರದ ಮೇಲೆ ಕ್ರಿಯೆಯನ್ನು ಇಂಟಿಗ್ರೇಷನ್ ಎಂದು ಕರೆಯುತ್ತಾರೆ. ಜಿಲ್ಲೆಯಲ್ಲಿ ಕುಕ್ಕುಟೋದ್ಯಮ ಇಂಟಿಗ್ರೇಷನ್ ಆಧಾರದ ಮೇಲೆ ನಡೆಯುತ್ತಿದೆ. ಸುಮಾರು ೬೦೦ರಷ್ಟು ಜನ ಈ ಉದ್ಯಮದಲ್ಲಿ ಸಕ್ರಿಯರಾಗಿದ್ದು, ಇವರ ಸಂಖ್ಯೆ ಇಳಿಮುಖವಾಗುತ್ತದೆ. ಜಿಲ್ಲೆಯಲ್ಲಿ ಅಗತ್ಯದಲ್ಲಿ ಶೇ. ೬೦ರಷ್ಟು ಮಾತ್ರ ಸ್ಥಳೀಯವಾಗಿ ಪೂರೈಕೆ ಮಾಡಲಾಗುತ್ತಿದ್ದು, ಮಿಕ್ಕುಳಿದ ಶೇ.೪೦ ಭಾಗ ಕೋಳಿಮಾಂಸ ಹೊರ ಪ್ರದೇಶಗಳಿಂದ ಬರುತ್ತಿದೆ. ಹೀಗಾಗಿ ಈ ಉದ್ಯಮವನ್ನು ಅಭಿವೃದ್ಧಿಪಡಿಸಲು ಉತ್ತಮ ಅವಕಾಶವಿದೆ. ಜಿಲ್ಲೆಯಲ್ಲಿ ೨೦೦೨ರ ಜಾನುವಾರು ಗಣತಿಯಂತೆ ೭,೪೮,೬೯೯ ಕೋಳಿಗಳಿದ್ದು, ಉಡುಪಿಯ ತಾಲೂಕಿನಲ್ಲಿ ಅತಿ ಹೆಚ್ಚು ೩,೪೩,೧೨೭ ಕಾರ್ಕಳದಲ್ಲಿ ಅತಿ ಕಡಿಮೆ ೧,೧೬,೭೫೩ ಹಾಗೂ ಕುಂದಾಪುರದಲ್ಲಿ ೨,೮೮,೮೯೧ ಕೋಳಿಗಳಿದ್ದ ಅಂಶ ಉಲ್ಲೇಖಾರ್ಹವಾಗಿದೆ.

## ಹೈನು ಉದ್ಯಮ

ಜಿಲ್ಲೆಯ ರೈತರ ಜೀವ ನಾಡಿಯಾಗಿರುವ ಹೈನುಗಾರಿಕೆಯು "ಕ್ಷೀರ ಕ್ರಾಂತಿಯ" ಮೂಲಕ ಜನರ ಆರ್ಥಿಕ–ಸಾಮಾಜಿಕ ಸ್ಥಾನಮಾನಗಳನ್ನು ಉನ್ನತೀಕರಿಸಿ, ಉತ್ತಮ ಜೀವನ ನಿರ್ವಹಣೆಗೆ ನಾಂದಿ ಹಾಡಿದೆ. ಹಾಲಿನಲ್ಲಿರುವ ಜೀವಾಣುಗಳ ಶಕ್ತಿಗುಂದಿಸಲು ಹಾಲನ್ನು ಪ್ಯಾಶ್ಚರ್ ಸಂಸ್ಕಾರಕ್ಕೆ ಒಳಪಡಿಸಲಾಗುತ್ತದೆ. (ಪ್ಯಾಶ್ಚರೈಸೇಷನ್) ಇದು ಹಾಲಿನಲ್ಲಿರುವ ಜಿಡ್ಡನ್ನು ಒಂದು ನಿಶ್ಚಿತ ಮಟ್ಟಕ್ಕೆ ತಂದು ಪಾಲಿಥೀನ್ ಚೀಲಗಳಲ್ಲಿ ತುಂಬಿ ಮಾರಾಟ ಮಾಡಲಾಗುತ್ತದೆ. ಹಾಲಿನ ಉಪ ಉತ್ಪನ್ನಗಳಾದ ಬೆಣ್ಣೆ, ಗಿಣ್ಣು, ತುಪ್ಪ, ಮಸಾಲೆಮಜ್ಜಿಗೆ ಹಾಗೂ ಶೈತೀಕರಣದ ಅವಶ್ಯಕತೆಯಿಲ್ಲದೆ ೪೫ ದಿವಸಗಳವರೆಗೆ ಇಡಬಹುದಾದ 'ಗುಡ್‌ಲೈಫ್' ಹೆಸರಿನ ಹಾಲು, 'ಅಮೂಲ್' ಹೆಸರಿನಲ್ಲಿ ಪ್ಲಾಸ್ಟಿಕ್ ಡಬ್ಬಿಗಳಲ್ಲಿ ಭರ್ತಿ ಮಾಡಿದ ಮೊಸರು, ಪಾಲಿಥೀನ್ ಚೀಲಗಳಲ್ಲಿ ತುಂಬಿದ ಮೊಸರು ಇತ್ಯಾದಿ ವಸ್ತುಗಳನ್ನು ತಯಾರಿಸಿ ಒಕ್ಕೂಟವು ಮಾರಾಟ ಮಾಡುತ್ತಿದೆ. ಎಲ್ಲಾ ಬಗೆಯ ಹಾಲಿನ ಉತ್ಪನ್ನಗಳ ವಸ್ತುಗಳ ಚೀಲಗಳ ಮೇಲೆ 'ನಂದಿನಿ' ಎಂಬ ಟ್ರೇಡ್‌ಮಾರ್ಕ್ ಇರುತ್ತದೆ. ದಕ್ಷಿಣ ಕನ್ನಡ ಜಿಲ್ಲಾ ಸಹಕಾರಿ ಉತ್ಪಾದಕರ ಸಂಘಗಳ ಒಕ್ಕೂಟ (ನಿ) ಕರ್ನಾಟಕ ರಾಜ್ಯ ಹಾಲು ಉತ್ಪಾದಕರ ಮಹಾಮಂಡಳಿಯ ಒಕ್ಕೂಟದ ಸದಸ್ಯ ಸಂಸ್ಥೆಯಾಗಿದೆ. ೧೯೮೬ರಲ್ಲಿ ನೋಂದಾಯಿತವಾದ ಈ ಸಂಸ್ಥೆ ಇಪ್ಪತ್ತು ವರ್ಷಗಳ ಅವಧಿಯಲ್ಲಿ ಉತ್ತಮ ಸಾಧನೆಯನ್ನು ಮಾಡಿದೆ. ಉಡುಪಿ ಜಿಲ್ಲೆಯಲ್ಲಿ ೨೦೦೬ರ ಜೂನ್ ಅಂತ್ಯಕ್ಕೆ ೨೪೨ ಹಾಲು ಉತ್ಪಾದಕರ ಸಹಕಾರ ಸಂಘಗಳಿವೆ. ಒಟ್ಟು ೪೦,೦೦೦ ಸದಸ್ಯರಿದ್ದು, ಇವರಲ್ಲಿ ಸುಮಾರು ೧೬,೫೦೦ ಜನ ಸಕ್ರಿಯ ಸದಸ್ಯರು ಅಂದರೆ ದನ–ಹಸು ಸಾಕಿ ಸಂಘಕ್ಕೆ

ಹಾಲು ಮಾರಾಟ ಮಾಡುತ್ತಿದ್ದಾರೆ. ದಿನವೊಂದಕ್ಕೆ ೭೯,೮೦೦ ಲೀಟರ್ ಹಾಲು ಸಂಗ್ರಹಿಸಲಾಗುತ್ತಿದ್ದು, ಮಾರುಕಟ್ಟೆ ಬೇಡಿಕೆಯ ಸುಮಾರು ಶೇ. ೮೫ರಷ್ಟು ಹಾಲನ್ನು ಉತ್ಪಾದಕರ ಸಂಘವು ಪೂರೈಸುತ್ತಿದೆ. ಜಿಲ್ಲೆಯಲ್ಲಿ ೨೦೦೩–೦೪ರಲ್ಲಿ ಹಾಲು ಉತ್ಪಾದಕರ ಸಂಘಗಳ ಸಂಖ್ಯೆ ೨೦೮ ಆಗಿದ್ದರೆ, ೨೦೦೪–೦೫ರಲ್ಲಿ ೨೪೦ ಹಾಗೂ ೨೦೦೫–೦೬ರಲ್ಲಿ ೨೬೧ ಆಗಿದ್ದವು. ಈ ಅವಧಿಗಳಲ್ಲಿ ಸದಸ್ಯತ್ವದ ಸಂಖ್ಯೆ ಕ್ರಮವಾಗಿ ೫೨,೦೦೦, ೬೦,೦೦೦ ಹಾಗೂ ೬೭,೮೬೦ ಆಗಿದ್ದರೆ, ಹಾಲು ಶೇಖರಣೆ (ದಿನವಹಿ ಲೀಟರ್‌ಗಳಲ್ಲಿ) ೬೯,೯೯೬, ೭೦,೦೮೭ ಹಾಗೂ ೭೨,೮೩೫ ಆಗಿತ್ತು. ಸದಸ್ಯರು ಸಾಕುವ ಹಸುಗಳಿಗೆ ಅಗತ್ಯವಿರುವ ಪಶುವೈದ್ಯಕೀಯ ಸೌಲಭ್ಯ ಒದಗಿಸಲಾಗುತ್ತದೆ. ಸದಸ್ಯರು ಜೆರ್ಸಿ, ಹಾಸ್ಟಿನ್ ಫ್ರಿಸಿಯನ್, ಮಲ್ನಾಡ್ ಗಿಡ್ಡ ಮತ್ತು ಸ್ಥಳೀಯ ಜಾತಿಯ ಹಸುಗಳನ್ನು ಸಾಕುತ್ತಾರೆ. ಈ ಹಸುಗಳಿಗೆ ನಿರಂತರ ವೈದ್ಯಕೀಯ ಸೌಲಭ್ಯದ ಅಗತ್ಯವಿರುತ್ತದೆ. ಇಂತಹ ಅಗತ್ಯ ಸೌಲಭ್ಯಗಳು ಸೂಕ್ತ ಸಮಯದಲ್ಲಿ ದೊರಕುವುದರಿಂದ ಜಾನುವಾರುಗಳು ಆರೋಗ್ಯಪೂರ್ಣವಾಗಿದ್ದು ಉತ್ಪಾದನೆಯ ಪ್ರಮಾಣದಲ್ಲಿ ಸ್ಥಿರತೆ ಮತ್ತು ಪ್ರಗತಿ ಸಾಧ್ಯ. ಜಿಲ್ಲೆಯಲ್ಲಿ ಮಾರ್ಚ್ ೨೦೦೫ರ ಅಂತ್ಯಕ್ಕೆ ಏಳು ಪಶುವೈದ್ಯ ಆಸ್ಪತ್ರೆಗಳು, ೨೮ ಪಶು ವೈದ್ಯ ಚಿಕಿತ್ಸಾಲಯಗಳು, ೪೬ ಪ್ರಾಥಮಿಕ ಪಶುವೈದ್ಯ ಕೇಂದ್ರಗಳು, ಐದು ಕೃತಕ ಗರ್ಭಧಾರಣಾ ಕೇಂದ್ರಗಳು, ಮೂರು ಸಂಚಾರಿ ಗರ್ಭಧಾರಣಾ ಕೇಂದ್ರಗಳಿದ್ದು, ೧,೪೨,೦೮೯ ಜಾನುವಾರುಗಳಿಗೆ ಚಿಕಿತ್ಸೆ ನೀಡಲಾಗಿದೆ. ೪೭,೭೬೯ ಜಾನುವಾರುಗಳಿಗೆ ಕೃತಕ ಗರ್ಭಧಾರಣೆ ಮಾಡಲಾಗಿದೆ. ಸದಸ್ಯರ ಜಾನುವಾರುಗಳಿಗೆ ಅಗತ್ಯವಿರುವ ಪಶು ಆಹಾರವನ್ನು ಸಂಘಗಳ ಮೂಲಕ ಪೂರೈಸಲಾಗುತ್ತದೆ. ಅಲ್ಲದೆ ಪೌಷ್ಟಿಕಾಂಶವಿರುವ ಉತ್ತಮ ಜಾತಿಯ ಮೇವು ಬೆಳೆಸಲು ಸಹಕಾರ ನೀಡಲಾಗುತ್ತದೆ. ಖರೀದಿಸಿದ ಹಾಲಿನ ಗುಣಮಟ್ಟ ರಕ್ಷಿಸುವ ದಿಸೆಯಲ್ಲಿ ಜಿಲ್ಲೆಯ ಬಸರೂರು, ನಡಗುಡ್ಡೆ, ಮದರಂಗಡಿ, ಉಳಿಯಾರ ಗೋಳಿಗಳಲ್ಲಿ ಹಾಲು ಶೀತಲೀಕರಣ ಕೇಂದ್ರಗಳಿವೆ. ಹಾಲಿನ ಉತ್ಪನ್ನಗಳಾದ ಬೆಣ್ಣೆ, ತುಪ್ಪ, ಪೇಡ, ಮೈಸೂರುಪಾಕ್, ಮೊಸರು, ಲಸ್ಸಿ, ಗಿಣ್ಣು, ಐಸ್‌ಕ್ರೀಂ ಮಿಕ್ಸ್‌ಗಳನ್ನೂ ತಯಾರಿಸಿ ಮಾರಾಟ ಮಾಡುವ ಮೂಲಕ ಗರಿಷ್ಟ ಉತ್ಪಾದನೆಯ ಮತ್ತು ಮೂಲಭೂತ ಸೌಲಭ್ಯಗಳ ಪ್ರಯೋಜನ ಪಡೆಯಲಾಗುತ್ತಿದೆ. ಹಾಲಿನ ಉಪ ಉತ್ಪನ್ನಗಳಾದ ಮೊಸರು, ಮಜ್ಜಿಗೆ, ಪೇಡಾ ಇತ್ಯಾದಿಗಳು ಉಡುಪಿ ಜಿಲ್ಲೆಯ ಮಣಿಪಾಲ ಘಟಕದಲ್ಲಿ ಸಂಸ್ಕರಣೆಯಾಗುತ್ತಿಲ್ಲ (ದಕ್ಷಿಣ ಕನ್ನಡ ಮುಖ್ಯ ಘಟಕ ಕುಲಶೇಖರ (ಮಂಗಳೂರು) ದಲ್ಲಿ ಸಂಸ್ಕರಣೆಯಾಗುತ್ತಿದೆ ಮಣಿಪಾಲದಲ್ಲಿರುವ ಶೀತಲೀಕರಣ ಮತ್ತು ಪ್ಯಾಕೇಜಿಂಗ್ ಕೇಂದ್ರ ವಿಸ್ತರಣೆ ಹೊಂದಿದ್ದು, ದಿನಕ್ಕೆ ೫೦,೦೦೦ ಲೀಟರ್ ಸಾಮರ್ಥ್ಯ ಹೊಂದಿದೆ. ಜಿಲ್ಲೆಯಲ್ಲಿನ ಹಾಲಿನ ಉತ್ಪನ್ನಗಳ ವಿವರವನ್ನು ಕೋಷ್ಟಕ ೫.೧೬ರಲ್ಲಿ ನೀಡಿದೆ.

**ಕೋಷ್ಟಕ ೫.೧೬ : ಹಾಲು ಉತ್ಪನ್ನ ಮತ್ತು ಮಾರಾಟದ ವಿವರ**

| ಕ್ರ. ಸಂ. | ವಿವರ | | ವಾರ್ಷಿಕ ಮಾರಾಟ (೨೦೦೫–೦೬) |
|---|---|---|---|
| ೧ | ಹಾಲು | (ದಿನವಹೀ ಲೀಟರ್‌ಗಳಲ್ಲಿ) | ೪೫,೦೭೭.೫೦ |
| ೨ | ಮಜ್ಜಿಗೆ | (ದಿನವಹೀ ಲೀಟರ್‌ಗಳಲ್ಲಿ) | ೨೨೯.೫೦ |
| ೩ | ತುಪ್ಪ | (ಟನ್‌ಗಳಲ್ಲಿ) | ೬,೪೭೧೫ |
| ೪ | ಲಸ್ಸಿ | (ದಿನವಹೀ ಲೀಟರ್‌ಗಳಲ್ಲಿ) | ೩೭೮.೧೦ |
| ೫ | ಖೋವಾ | (ಕೆ.ಜಿ.ಗಳಲ್ಲಿ) | ೪೨೩ |
| ೬ | ಪೇಡಾ | (ಟನ್‌ಗಳಲ್ಲಿ) | ೫,೭೬೦ |
| ೭ | ಮೈಸೂರು ಪಾಕ್ | (ಟನ್‌ಗಳಲ್ಲಿ) | ೪,೪೫೩ |
| ೮ | ಬೆಣ್ಣೆ | (ಕೆ.ಜಿ.ಗಳಲ್ಲಿ) | ೫,೬೨೫ |
| ೯ | ಬಾದಾಮ್ ಪೌಡರ್ | (ಕೆ. ಜಿ.ಗಳಲ್ಲಿ) | ೧,೪೪೨ |
| ೧೦ | ಮೊಸರು | (ದಿನವಹಿ ಲೀಟರ್‌ಗಳಲ್ಲಿ) | ೩೭೮೧,೭೫ |
| ೧೧ | ಸುವಾಸಿತ ಹಾಲು | (ಲೀಟರ್‌ಗಳಲ್ಲಿ) | ೧೭,೮೮೫ |
| ೧೨ | ಹಾಲಿನ ಕೆನೆ | (ಕೆ. ಜಿ. ಗಳಲ್ಲಿ) | ೧೨,೬೬೬ |

***ಆಧಾರ:*** *ದಕ್ಷಿಣ ಕನ್ನಡ ಹಾಲು ಉತ್ಪಾದಕರ ಒಕ್ಕೂಟ ನಿಯಮಿತ, ಮಣಿಪಾಲ ಘಟಕ ಉಡುಪಿ*

## ರೇಷ್ಮೆ ಉದ್ಯಮ

ರೇಷ್ಮೆಯು ರಾಜ್ಯದ ಗೃಹ ಕೈಗಾರಿಕೆಗಳಲ್ಲಿ ಬಂದಾಗಿರುವುದಲ್ಲದೆ, ವ್ಯವಸಾಯಕ್ಕೆ ಪೂರಕವಾಗಿದೆ. ಟಿಪ್ಪುಸುಲ್ತಾನ್ ತನ್ನ ರಾಜ್ಯದ ದಕ್ಷಿಣ ಭಾಗದಲ್ಲಿ ರೇಷ್ಮೆ ಹುಳುಗಳ ಸಾಕಾಣಿಕೆ ಘಟಕವನ್ನು ಸ್ಥಾಪಿಸಿ, ಚೀನಾದಿಂದ ರೇಷ್ಮೆ ಮೊಟ್ಟೆಗಳನ್ನು ತರಿಸಿ, ಮೈಸೂರು ಸಂಸ್ಥಾನದಲ್ಲಿ ಈ ಕೈಗಾರಿಕೆಯನ್ನು ಬೆಳೆಸಿದ್ದು, ಒಂದು ಐತಿಹಾಸಿಕ ಸಂಗತಿಯಾಗಿದೆ. ಮೈಸೂರು ರಾಜ್ಯವನ್ನು ಪ್ರಪಂಚದ ರೇಷ್ಮೆ ಉತ್ಪಾದಿಸುವ ರಾಜ್ಯಗಳಲ್ಲಿ ಒಂದನ್ನಾಗಿ ಮಾಡುವುದು ಟಿಪ್ಪುವಿನ ಮಹದಾಕಾಂಕ್ಷೆಯಾಗಿತ್ತು. ೧೯೧೪ರಲ್ಲಿ ಹನ್ನೆರಡು ಜಾತಿಯ ರೇಷ್ಮೆ ತಳಿಗಳನ್ನು ಇಟಲಿಯಿಂದ ತರಿಸಿ ಅಭಿವೃದ್ಧಿಪಡಿಸಲಾಯಿತು. ೧೯೧೫ರಲ್ಲಿ ಮೈಸೂರು ತಳಿ ಹಾಗೂ ಇಟಲಿ ತಳಿಯನ್ನು ಸೇರಿಸಿ ಮಿಶ್ರತಳಿಯನ್ನು ಪಡೆಯಲಾಯಿತು. ಪ್ರತಿಫಲವಾಗಿ ಇಂದು ಕರ್ನಾಟಕ ರಾಜ್ಯದ್ಯಂತ ರೇಷ್ಮೆ ಕೃಷಿಯು ವಿಸ್ತರಿಸಿದೆ. ಅಲ್ಲದೆ ಗ್ರಾಮೀಣ ಪ್ರದೇಶದ ರೈತರಿಗೆ ವ್ಯವಸಾಯದ ಜೊತೆಗೆ ಉಪ ಕಸುಬಾಗಿದ್ದು, ರೈತರ ಆರ್ಥಿಕ ಸ್ಥಾನಮಾನವನ್ನು ವೃದ್ಧಿಸಿದೆ. ಕರಾವಳಿ ಪ್ರದೇಶವಾದ ಉಡುಪಿ ಜಿಲ್ಲೆಯು ಸಹ ಕೃಷಿ ಉತ್ಪಾದನೆಯಲ್ಲಿ ತೊಡಗಿದ್ದರೂ, ಅಧಿಕ ಮಳೆ ಹಾಗೂ ಮಾರುಕಟ್ಟೆಯ ಸಮಸ್ಯೆಯಿಂದಾಗಿ ನಿರೀಕ್ಷಿತ ಪ್ರಮಾಣದಲ್ಲಿ ರೇಷ್ಮೆ ಕೃಷಿಯಲ್ಲಿ ಯಶಸ್ವಿಯಾಗಲಿಲ್ಲ. ೧೯೯೭–೯೮ರಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಿಂದ ಉಡುಪಿ ಜಿಲ್ಲೆಯು ಪ್ರತ್ಯೇಕಗೊಂಡಿತು. ಆಗ ೧೦೧.೭೮ ಹೆಕ್ಟೇರು ಪ್ರದೇಶಗಳಲ್ಲಿ ಹಿಪ್ಪು ನೇರಳೆ ಬೆಳೆಯಲಾಗುತ್ತಿದ್ದು, ೧೮.೮೬೮ಟನ್ ರೇಷ್ಮೆ ಗೂಡು ಉತ್ಪಾದಿಸಲಾಗಿತ್ತು. ಜಿಲ್ಲೆಯಲ್ಲಿ ಆರು ರೇಷ್ಮೆ ಹುಳು ಸಾಕಾಣಿಕಾ ಕೇಂದ್ರಗಳು, ಎರಡು ತಾಂತ್ರಿಕ ಸೇವಾ ಕೇಂದ್ರಗಳಿದ್ದವು. ೩೬೪ ರೈತರು ಈ ಕೃಷಿಯಲ್ಲಿ ತೊಡಗಿಸಿಕೊಂಡಿದ್ದರು. ಆದರೆ ೨೦೦೫–೦೬ರಲ್ಲಿ ಹಿಪ್ಪು ನೇರಳೆ ಕ್ಷೇತ್ರ ೪೮.೬೦ ಹೆಕ್ಟೇರುಗಳಿಗೆ ಕುಸಿದಿದೆ. ೧೬೫ ಟನ್ ಗೂಡಿನ ಉತ್ಪಾದನೆಯಾಗಿತ್ತು. ಮೌಲ್ಯ ರೂ. ೩.೯೭ ಲಕ್ಷಗಳಾಗಿತ್ತು. ಮೂರು ರೇಷ್ಮೆ ಹುಳು ಸಾಕಾಣಿಕಾ ಕೇಂದ್ರಗಳು, ಎರಡು ತಾಂತ್ರಿಕ ಸೇವಾ ಕೇಂದ್ರಗಳಿದ್ದವು. ೧೬೩ ಮಂದಿ ರೈತರು ಈ ಕಸುಬಿನಲ್ಲಿ ಪಾಲ್ಗೊಂಡಿದ್ದರು. ಜಿಲ್ಲೆಯಲ್ಲಿ ರೇಷ್ಮೆ ಫಲಾನುಭವಿಗಳಿಗೆ ವಿತರಿಸಲಾದ ರೋಗರಹಿತ ರೇಷ್ಮೆ ಮರಿಗಳ ವಿವರ ಹಾಗೂ ಪಡೆಯಲಾದ ಇಳುವರಿಯ ವಿವರಗಳನ್ನು ಕೋಷ್ಟಕ ೫.೧೭ ರಲ್ಲಿ ನೀಡಿದೆ.

**ಕೋಷ್ಟಕ ೫.೧೭ : ಜಿಲ್ಲೆಯಲ್ಲಿ ವಿತರಿಸಲಾದ ರೋಗರಹಿತ ರೇಷ್ಮೆ ಮರಿ ಮತ್ತು ರೇಷ್ಮೆಗೂಡಿನ ಇಳುವರಿಯ ಪ್ರಮಾಣ.**

| ವಿವರ | | ೧೯೯೭–೯೮ | | | ೨೦೦೫–೦೬ | | |
|---|---|---|---|---|---|---|---|
| | | ಉಡುಪಿ | ಕುಂದಾಪುರ | ಕಾರ್ಕಳ | ಉಡುಪಿ | ಕುಂದಾಪುರ | ಕಾರ್ಕಳ |
| ಮೊಟ್ಟೆಗಳ ಚಾಕಿ (ಸಂಖ್ಯೆಗಳಲ್ಲಿ) | ಸಿ.ಬಿ. | ೫೪೨೫ | ೧೨೬೫೦ | ೧೫೧೭೦ | ೫೦೦ | ೬೦೦ | ೫೩೦ |
| | ಬಿ.ವಿ. | ೧೩೫೦ | ೩೭೧೦ | ೫೦೪೮ | ೯೨೫ | ೧೫೦ | ೨೪೨೭ |
| | ಒಟ್ಟು | ೬೭೫೫ | ೧೬೩೬೦ | ೨೦೨೧೮ | ೧೪೨೫ | ೭೫೦ | ೨೯೫೭ |
| ಗೂಡಿನ ಉತ್ಪಾದನೆ (ಮೆ.ಟನ್‌ಗಳಲ್ಲಿ) | ಸಿ.ಬಿ. | ೨.೧೨೮ | ೫.೪೪೦ | ೬.೫೨೩ | ೦.೧೩೩ | ೦.೧೬೭ | ೦.೩೭೭ |
| | ಬಿ.ವಿ. | ೦.೬೬೩ | ೧.೬೩೨ | ೧.೮೩೩ | ೦.೨೦೧ | ೦.೦೮೦ | ೧.೧೪೬ |
| | ಒಟ್ಟು | ೨.೭೯೧ | ೭.೦೭೨ | ೮.೩೫೬ | ೦.೩೩೪ | ೦.೨೪೭ | ೧.೫೨೩ |
| ಸರಾಸರಿ ಇಳುವರಿ (ಕೆ.ಜಿ.ಗಳಲ್ಲಿ) | | ೪೧.೬೦ | ೪೩.೦೦ | ೪೧.೨೦ | ೪೦.೬೦ | ೩೩.೦೦ | ೪೫.೭೮ |

## ಖಾದಿ ಮತ್ತು ಗ್ರಾಮೋದ್ಯೋಗ

ಗ್ರಾಮೀಣ ಪ್ರದೇಶಗಳಲ್ಲಿ ಈ ಹಿಂದೆ ಅಸ್ತಿತ್ವದಲ್ಲಿದ್ದ ಗೃಹ ಮತ್ತು ಗುಡಿ ಕೈಗಾರಿಕೆಗಳನ್ನು ಪುನರುಜ್ಜೀವನಗೊಳಿಸುವ ಮೂಲಕ ಬದಲಾದ ಆರ್ಥಿಕ ಸನ್ನಿವೇಶದಲ್ಲಿ ಪಾರಂಪರಿಕ ಉತ್ಪಾದನಾ ವಿಧಾನವನ್ನು ಉಳಿಸುವುದಷ್ಟೇ ಅಲ್ಲ ಅವುಗಳನ್ನು ಪ್ರತಿಸ್ಪರ್ಧಾತ್ಮಕವಾಗಿಯೂ ಮಾಡಬಹುದಾಗಿದೆ. ಇದು ಕಷ್ಟಕರವಾದರೂ ಅಸಾಧ್ಯವಾದಂತಹ ಕೆಲಸವೇನಲ್ಲ. ಇಂತಹ ಕೆಲಸ ಸಾಧ್ಯವಾದರೆ ಗ್ರಾಮೀಣ ಪ್ರದೇಶದ ಜನ ಉದ್ಯೋಗ ಅರಸಿ ನಗರ ಪ್ರದೇಶಗಳಿಗೆ ಹೋಗುವುದನ್ನು ತಡೆಯಬಹುದಾಗಿದೆ. ಗ್ರಾಮೀಣ ಪ್ರದೇಶದಲ್ಲಿ

ಉದ್ಯೋಗ ಮತ್ತು ಉತ್ಪಾದನೆ ಹೆಚ್ಚು ಮಾಡಿದಾಗ ಜನರ ಜೀವನಮಟ್ಟದಲ್ಲಿ ಸುಧಾರಣೆ ಸಾಧ್ಯವಾಗುತ್ತದೆ. ಸ್ಥಳೀಯ ಸಂಪನ್ಮೂಲ ಬಳಕೆ ಮಾಡಿಕೊಂಡು ಉದ್ಯಮ ಆರಂಭಿಸುವಂತಹ ಕೆಲಸಗಳಿಗೆ ಹೆಚ್ಚಿನ ಪ್ರೋತ್ಸಾಹ ದೊರೆಯುವ ಅವಶ್ಯಕತೆ ಇದೆ. ಈ ದಿಸೆಯಲ್ಲಿ ಸರಕಾರದ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ ಉತ್ತಮ ಕೆಲಸ ಮಾಡುತ್ತಿದೆ. ವ್ಯವಸಾಯವನ್ನವಲಂಭಿಸಿರುವ ಕೈಗಾರಿಕೆಗಳು ಅಥವಾ ಉದ್ಯಮಗಳನ್ನು ಉತ್ತೇಜಿಸುವ ಮೂಲಕ ಗ್ರಾಮೀಣ ಪ್ರದೇಶಗಳಲ್ಲಿ ಆರ್ಥಿಕ ಚಟುವಟಿಕೆಗಳನ್ನು ಪ್ರೋತ್ಸಾಹಿಸಲಾಗಿದೆ. ವಿವಿಧ ರೀತಿಯ ಉದ್ಯಮಶೀಲತೆ ಮತ್ತು ಉತ್ಪಾದಕ ಚಟುವಟಿಕೆಗಳನ್ನು ಗುರುತಿಸಿ ಸೂಕ್ತ ರೀತಿಯಲ್ಲಿ ಯೋಜನೆಗಳನ್ನು ರೂಪಿಸಲಾಗಿದ್ದು, ಆ ಬಗೆಗಿನ ವಿವರಗಳನ್ನು ಇಲ್ಲಿ ನೀಡಲಾಗಿದೆ. ಜಿಲ್ಲೆಯಲ್ಲಿ ಖಾದ್ಯ ತೈಲ, ಏಕದಳ, ದ್ವಿದಳ ಧಾನ್ಯಗಳ ಸಂಸ್ಕರಣೆ, ಕುಂಬಾರಿಕೆ, ಚರ್ಮೋದ್ಯಮ, ಮರಗೆಲಸ, ಕೆತ್ತನೆ, ಶಿಲ್ಪಕಲೆ, ಆಹಾರ ಉತ್ಪನ್ನಗಳು, ಟೈಲರಿಂಗ್, ಖಂಡಸಾರಿ, ಪುಷ್ಪಕೃಷಿ, ಔಷಧಿ ತಯಾರಿಕೆ, ಜೇನುಸಾಕಣೆ, ಗೋಬರ್‌ಗ್ಯಾಸ್ ಪ್ಲಾಂಟ್, ಎಣ್ಣೆ ಸಂಸ್ಕರಣೆ, ಗೋಡಂಬಿ, ಬಿದಿರು ಮತ್ತು ಬೆತ್ತ, ಸೇವಾಧಾರಿತ ಉದ್ದಿಮೆ ಇತ್ಯಾದಿ ಚಟುವಟಿಕೆಗಳನ್ನು ಪ್ರೋತ್ಸಾಹಿಸಲಾಗಿದೆ. ಸಮೂಹಬ್ಯಾಂಕ್ ಯೋಜನೆ, ಧನಸಹಾಯ ಯೋಜನೆ, ಮಾರ್ಜಿನ್–ಹಣ ಯೋಜನೆಯಂತೆ ಮಂಜೂರಾದ ಉದ್ದಿಮೆಗಳು, ಮಾರ್ಜಿನ್–ಹಣ ಬಿಡುಗಡೆ ಮಾಡಲಾದ ಉದ್ಯಮಗಳ ಮತ್ತಿತರ ವಿವರಗಳನ್ನು ಕೋಷ್ಟಕ ೫.೧೮ರಿಂದ ಕೋಷ್ಟಕ ೫.೨೩ರಲ್ಲಿ ನೀಡಲಾಗಿದೆ.

**ಕುಶಲಕರ್ಮಿಗಳು**

ಸ್ವಾವಲಂಬಿ ಗ್ರಾಮಸ್ವರಾಜ್ಯ ವ್ಯವಸ್ಥೆಯನ್ನು ಹೋಲುತ್ತಿದ್ದ ಪಾರಂಪರಿಕ ವ್ಯವಸ್ಥೆಯಲ್ಲಿ ಕೃಷಿ, ವ್ಯಾಪಾರ, ಉತ್ಪಾದನೆ ಮತ್ತು ಇತರ ದಿನನಿತ್ಯ ಉಪಯೋಗಿಸುವ ವಸ್ತುಗಳನ್ನು ಸ್ಥಳೀಯ ಸಂಪನ್ಮೂಲ ಹಾಗೂ ದೇಶೀಯ ತಂತ್ರಜ್ಞಾನ ಬಳಸಿ ಉತ್ಪಾದಿಸುವ ಪರಿಸ್ಥಿತಿ ಈ ಪ್ರದೇಶದಲ್ಲಿಯೂ ಇತ್ತು. ಆಧುನಿಕ ಕೈಗಾರಿಕೆಗಳು ಬೆಳೆಯುತ್ತಾ ಬಂದಂತೆ ಸಾಂಪ್ರದಾಯಿಕ ಸೊಗಡಿರುವ ಪಾರಂಪರಿಕ ಉತ್ಪಾದಕ ವ್ಯವಸ್ಥೆ ಸಡಿಲಗೊಂಡು ಮೂಲೆಗುಂಪಾಗುತ್ತಾ ಬಂತು. ಇಂತಹ ಬೆಳವಣಿಗೆಯ ಹೊರತಾಗಿಯೂ ಆಧುನಿಕತೆಯ ಭರಾಟೆಯನ್ನು ಎದುರಿಸಿ ಮತ್ತು ಆಧುನಿಕ ವ್ಯವಸ್ಥೆಯಲ್ಲಿ ಸರಿಹೊಂದದೆ ಹಿಂದಿನ ದಾರಿಯಲ್ಲಿಯೇ ಮುನ್ನಡೆಯುತ್ತಿರುವ ಒಂದು ವರ್ಗವು ಜಿಲ್ಲೆಯಲ್ಲಿದೆ. ಪರಿಸ್ಥಿತಿಯೊಂದಿಗೆ ಹೊಂದಿಕೊಂಡು, ಪರಂಪರಾಗತವಾಗಿ ಲಭ್ಯವಿರುವ ಜ್ಞಾನವನ್ನು ಉಪಯೋಗಿಸಿಕೊಂಡು ಜೀವನ ನಡೆಸುವ ಕುಶಲಕರ್ಮಿಗಳು ಜಿಲ್ಲೆಯ ಅರ್ಥವ್ಯವಸ್ಥೆಗೆ ತಮ್ಮ ಕಾಣಿಕೆ ನೀಡುತ್ತಿದ್ದಾರೆ. ಇವರಲ್ಲಿ ಪಟ್ಟಣದ ಸಂಪರ್ಕಕ್ಕೆ ಬಂದವರು ಮತ್ತು ಆಧುನಿಕ ಉತ್ಪಾದನಾ ಕಾರ್ಯದ ಪರಿಚಯವಿರುವವರು, ಪರಂಪರಾಗತ ಜ್ಞಾನ ಅನುಭವಗಳನ್ನು ಬದಲಾದ ಸನ್ನಿವೇಶದಲ್ಲಿ, ಬದಲಾಗುತ್ತಿರುವ ಉತ್ಪಾದನಾ ವಿಧಾನಕ್ಕೆ ಅಳವಡಿಸಿಕೊಂಡಿರುವ ಉದಾಹರಣೆಗಳು ಸಿಗುತ್ತವೆ. ಜಿಲ್ಲೆಯಲ್ಲಿರುವ ಕುಶಲಕರ್ಮಿಗಳ ಬಗೆಗಿನ ವಿವರಗಳನ್ನು ಕೋಷ್ಟಕ ೫.೨೪ ನೀಡಲಾಗಿದೆ.

## ಹೊಟೇಲ್ ಉದ್ಯಮ

ಹೊಟೇಲ್ ಉದ್ಯಮವನ್ನು ಮೊದಲು ಆರಂಭಿಸಿದವರು ಬ್ರಾಹ್ಮಣರು ಮತ್ತು ಗೌಡ ಸಾರಸ್ವತ ಬ್ರಾಹ್ಮಣರು. ನಂತರದ ದಿನಗಳಲ್ಲಿ ಬಂಟರು ಮತ್ತು ಬಿಲ್ಲವರು ವಲಸೆ ಹೋದ ಮುಂಬಯಿ, ಮದ್ರಾಸ್‌ನಂತಹ ನಗರಗಳಲ್ಲಿ ಹೊಟೇಲ್ ಉದ್ಯಮದಲ್ಲಿ ತೊಡಗಿಕೊಂಡಿದ್ದನ್ನು ಗಮನಿಸಬಹುದು. ಕರಾವಳಿ ಜಿಲ್ಲೆಯ ಹೊಟೇಲುಗಳ ಹುಟ್ಟು ಮತ್ತು ಬೆಳವಣಿಗೆಯನ್ನು ಸರಿಯಾಗಿ ಗಮನಿಸಿದರೆ ಜಿಲ್ಲೆಯಲ್ಲಿ ಆಧುನೀಕರಣ ಮತ್ತು ಅಭಿವೃದ್ಧಿಯ ಹಲವು ಅವಶ್ಯಕತೆಗಳಲ್ಲಿ ಒಂದಾಗಿರುವ ಸೂಕ್ತ ಆಹಾರ ಪೂರೈಕೆಯನ್ನು ಮಾರುಕಟ್ಟೆಯ ವ್ಯವಸ್ಥೆಯೊಳಗಡೆ ವಿತರಿಸುವ ಹೊಸ ವ್ಯವಸ್ಥೆಯನ್ನೇ ನಾವು ಹೊಟೇಲ್‌ಗಳೆಂದು ತಿಳಿಯಬಹುದಾಗಿದೆ. ಉಡುಪಿ ಬ್ರಾಹ್ಮಣರ ಹೊಟೇಲ್ ಎನ್ನುವುದು ಇಂದು ವಿಶ್ವವ್ಯಾಪಿಯಾಗಿ ಪ್ರಚಲಿತವಿರುವ ಸಂಗತಿಯಾಗಿದೆ. ಉಡುಪಿಯ ಜನ ಅಥವಾ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆ ಜನ ಹೋದಲ್ಲೆಲ್ಲಾ ಉಡುಪಿ ಹೊಟೇಲ್‌ಗಳು ಹುಟ್ಟಿಕೊಂಡಿವೆ. ಉಡುಪಿ ಕೃಷ್ಣಮಠದ ಸಮೀಪವಿರುವ ರಾಘವೇಂದ್ರ ಭವನಕ್ಕೆ ದೇಶದಲ್ಲೇ ಮೊದಲ ಬಾರಿಗೆ ಮಸಾಲ ದೋಸೆಯನ್ನು ಪರಿಚಯ ಮಾಡಿಸಿದ್ದೆಂಬ ಹೆಗ್ಗಳಿಕೆಯಿದೆ.

**ಕೋಷ್ಟಕ ೫.೧೮ : ಧನ ಸಹಾಯ ಯೋಜನೆಯಡಿ ತಾಲೂಕುವಾರು ಉದ್ದಿಮೆವಾರು ಘಟಕಗಳ ಮಂಜೂರಾತಿ ವಿವರ**

| ಉದ್ದಿಮೆಯ ಹೆಸರು | ಘಟಕಗಳ ಸಂಖ್ಯೆ | | | |
|---|---|---|---|---|
| | ಉಡುಪಿ | ಕುಂದಾಪುರ | ಕಾರ್ಕಳ | ಒಟ್ಟು |
| ಖಾದಿ | ೦ | ೦೧ | ೦ | ೦೧ |
| ಖನಿಜಾಧಾರಿತ ಉದ್ದಿಮೆಗಳು | ೯೩ | ೫೪ | ೨೨ | ೧೬೯ |
| ಅರಣ್ಯಾಧಾರಿತ ಉದ್ದಿಮೆಗಳು | ೧೫ | ೦೭ | ೧೫ | ೩೭ |
| ಕೃಷಿ ಆಧಾರಿತ ಉದ್ದಿಮೆಗಳು | ೧೬೫ | ೭೦ | ೩೧ | ೨೬೬ |
| ಪಾಲಿಮಾರ್ ಮತ್ತು ಕೆಮಿಕಲ್ ಉದ್ದಿಮೆಗಳು | ೩೦ | ೦೪ | ೧೧ | ೪೫ |
| ಇಂಜಿನಿಯರಿಂಗ್ ಹಾಗೂ ಅಸಂಪ್ರದಾಯಿಕ ಶಕ್ತಿ ಉದ್ದಿಮೆಗಳು | ೩೬ | ೦೯ | ೧೨ | ೫೭ |
| ವಸ್ತ್ರೋದ್ಯಮ | ೧೩ | ೦೭ | ೧೫ | ೩೫ |
| ಸೇವಾ ಉದ್ದಿಮೆಗಳು | ೧೫ | ೦ | ೦೨ | ೧೭ |
| **ಒಟ್ಟು** | **೩೬೭** | **೧೫೨** | **೧೦೮** | **೮೨೭** |

**ಕೋಷ್ಟಕ ೫.೧೯**

| ಉದ್ದಿಮೆಯ ಹೆಸರು | ಘಟಕಗಳ ಸಂಖ್ಯೆ | | | |
|---|---|---|---|---|
| | ಉಡುಪಿ | ಕುಂದಾಪುರ | ಕಾರ್ಕಳ | ಒಟ್ಟು |
| **ಖನಿಜಾಧಾರಿತ ಉದ್ದಿಮೆಗಳು** | | | | |
| ಖನಿಜಾಧಾರಿತ | ೩ | ೦ | ೦ | ೩ |
| ಕುಂಬಾರಿಕೆ | ೨ | ೦ | ೦ | ೨ |
| **ಅರಣ್ಯಾಧರಿತ ಉದ್ದಿಮೆಗಳು** | | | | |
| ಅರಣ್ಯ ಗಿಡಮೂಲಿಕೆ ಸಂಗ್ರಹಣೆ | ೨ | ೧ | ೦ | ೩ |
| **ಕೃಷಿ ಆಧಾರಿತ ಉದ್ದಿಮೆಗಳು** | | | | |
| ಹಣ್ಣು ಪರಿಷ್ಕರಣೆ. | ೬ | ೪ | ೧ | ೧೧ |
| ಏಕದಳ ಮತ್ತು ದ್ವಿದಳ ಧಾನ್ಯ ಪರಿಷ್ಕರಣೆ | ೭ | ೨ | ೦ | ೯ |
| ಗ್ರಾಮೀಣ ಎಣ್ಣೆ | ೧ | ೦ | ೦ | ೧ |
| **ಪಾಲಿಮರ ಮತ್ತು ಕೆಮಿಕಲ್ ಉದ್ದಿಮೆಗಳು** | | | | |
| ಪಾಲಿಮರ ಮತ್ತು ಕೆಮಿಕಲ್ | ೧ | ೦ | ೦ | ೧ |
| **ಇಂಜಿನಿಯರಿಂಗ್ ಹಾಗೂ ಅಸಂಪ್ರದಾಯಿಕ ಶಕ್ತಿ ಉದ್ಯಮಗಳು** | | | | |
| ಬಡಗಿತನ ಮತ್ತು ಕಮ್ಮಾರಿಕೆ | ೧ | ೦ | ೧ | ೨ |
| **ವಸ್ತ್ರೋದ್ಯಮ** | | | | |
| ಟೈಲರಿಂಗ್ | ೦ | ೧ | ೦ | ೧ |
| **ಒಟ್ಟು** | **೨೩** | **೮** | **೨** | **೩೩** |

**ಕೋಷ್ಟಕ ೫.೨೦ : ಮಾರ್ಜಿನ್ ಮನಿ ಯೋಜನೆಯಡಿ ತಾಲೂಕುವಾರು, ಉದ್ದಿಮೆವಾರು ಘಟಕಗಳ ವಿವರ**

| ಉದ್ದಿಮೆಯ ಹೆಸರು | ಘಟಕಗಳ ಸಂಖ್ಯೆ | | | |
|---|---|---|---|---|
| | ಉಡುಪಿ | ಕುಂದಾಪುರ | ಕಾರ್ಕಳ | ಒಟ್ಟು |
| ಕೃಷಿ ಆಧಾರಿತ ಹಾಗೂ ಆಹಾರ ಉದ್ದಿಮೆಗಳು | ೧೫ | ೨೮ | ೧೬ | ೫೯ |
| ಇಂಜಿನಿಯರಿಂಗ್ ಹಾಗೂ ಅಸಂಪ್ರದಾಯಿಕ ಶಕ್ತಿ ಉದ್ದಿಮೆಗಳು | ೦೫ | ೧೬ | ೦೭ | ೨೮ |
| ಖನಿಜಾಧಾರಿತ ಉದ್ದಿಮೆಗಳು | ೦೬ | ೧೪ | ೦೮ | ೨೮ |
| ಅರಣ್ಯಾಧಾರಿತ ಉದ್ದಿಮೆಗಳು | ೦೧ | ೦೩ | ೦೧ | ೦೫ |
| ಪಾಲಿಮರ್ ಮತ್ತು ರಾಸಾಯನಿಕ ಆಧಾರಿತ ಉದ್ದಿಮೆಗಳು | ೦೨ | ೨೯ | ೦೧ | ೩೨ |
| ಸೇವಾ ಉದ್ದಿಮೆಗಳು | ೩೯ | ೭೯ | ೧೭ | ೧೩೫ |
| ಮಾರಾಟ ಉದ್ದಿಮೆಗಳು | ೦೧ | ೦ | – | ೦೧ |
| **ಒಟ್ಟು** | **೬೯** | **೧೬೯** | **೫೦** | **೨೮೮** |

**ಕೋಷ್ಟಕ ೫.೨೧ : ಧನಸಹಾಯ ಯೋಜನೆಯಡಿ ಸಾಲ ಮಂಜೂರಾತಿ ಹಾಗೂ ಬಿಡುಗಡೆ ವಿವರ:**

ರೂ. ಲಕ್ಷಗಳಲ್ಲಿ

| ಉದ್ದಿಮೆ | ಘಟಕಗಳ ಸಂಖ್ಯೆ | ಮೊತ್ತ |
|---|---|---|
| ಖನಿಜಾಧಾರಿತ ಉದ್ದಿಮೆಗಳು | ೧೬೯ | ೫೭.೦೯ |
| ಅರಣ್ಯಾಧಾರಿತ ಉದ್ದಿಮೆಗಳು | ೪೦ | ೪೩.೩೯ |
| ಕೃಷಿ ಆಧಾರಿತ ಹಾಗೂ ಆಹಾರ ಉದ್ದಿಮೆಗಳು | ೨೬೩ | ೧೮೯.೭೧ |
| ಪಾಲಿಮರ್ ಮತ್ತು ರಾಸಾಯನಿಕ ಆಧಾರಿತ ಉದ್ದಿಮೆಗಳು | ೪೫ | ೨೬.೧೯ |
| ಇಂಜನಿಯರಿಂಗ್ ಹಾಗೂ ಅಸಂಪ್ರದಾಯಿಕ ಶಕ್ತಿ ಉದ್ದಿಮೆಗಳು | ೫೯ | ೪೯.೭೪ |
| ವಸ್ತ್ರೋದ್ಯಮ | ೩೫ | ೫.೯೫ |
| ಸೇವಾ ಉದ್ದಿಮೆಗಳು | ೧೧ | ೧.೩೬ |
| ಮಾರಾಟ ಮಳಿಗೆ | ೦೪ | ೨.೦೫ |
| ಖಾದಿ | ೦೧ | ೦.೦೨ |
| ಒಟ್ಟು | ೬೨೭ | ೩೭೬.೬೦ |

**ಕೋಷ್ಟಕ ೫.೨೨ : ಸಮೂಹ ಬ್ಯಾಂಕ್ ಯೋಜನೆಯಡಿ ಸಾಲ ಮಂಜೂರಾತಿ ಹಾಗೂ ಬಿಡುಗಡೆ ವಿವರ**

ರೂ.ಲಕ್ಷಗಳಲ್ಲಿ

| ಉದ್ದಿಮೆ | ಘಟಕಗಳ ಸಂಖ್ಯೆ | ಆರ್ಥಿಕ ನೆರವು/ಸಾಲ |
|---|---|---|
| ಹಣ್ಣು ಪರಿಷ್ಕರಣೆ | ೧೧ | ೧೨೪.೫೬ |
| ಖನಿಜಾಧಾರಿತ | ೦೩ | ೧೫.೯೫ |
| ಆಯುರ್ವೇದಿಕ್ ಔಷಧಿ ತಯಾರಿಕೆ | ೦೩ | ೪೧.೮೩ |
| ಪಾಲಿಮರ್ ಮತ್ತು ರಾಸಾಯನಿಕ ಆಧಾರಿತ | ೦೧ | ೧೬.೯೦ |
| ಇಂಜನಿಯರಿಂಗ್ ಹಾಗೂ ಅಸಂಪ್ರದಾಯಿಕ ಶಕ್ತಿ | ೦೨ | ೮.೮೭ |
| ವಸ್ತ್ರೋದ್ಯಮ | ೦೧ | ೩.೧೯ |
| ಗ್ರಾಮೀಣ ಎಣ್ಣೆ | ೦೧ | ೬.೬೭ |
| ಕುಂಬಾರಿಕೆ | ೦೨ | ೧೨.೮೮ |
| ಪಿ.ಸಿ.ಪಿ.ಐ. (ಅಕ್ಕಿ ಗಿರಣಿ) | ೦೯ | ೧೧೯.೨೮ |
| ಒಟ್ಟು | ೩೩ | ೩೫೦.೧೩ |

ಘಟಕಗಳ ಸಂಖ್ಯೆ



**ಕೋಷ್ಟಕ ೫.೨೩ : ಮಾರ್ಜಿನ್–ಮನಿ ಯೋಜನೆಯಡಿ ತಾಲೂಕುವಾರು–ಉದ್ದಿಮೆವಾರು ವಿವರ**

| ಉದ್ದಿಮೆ (೧) | ಘಟಕಗಳ ಸಂಖ್ಯೆ (೨) | ಯೋಜನಾ ವೆಚ್ಚ (೩) | ಬ್ಯಾಂಕ್ ಸಾಲ (೪) | ಮಾರ್ಜಿನ್ ಮನಿ (೫) |
|---|---|---|---|---|
| | **೨೦೦೧–೦೨** | | | |
| ಕೃಷಿ ಆಧಾರಿತ ಹಾಗೂ ಆಹಾರ ಉದ್ದಿಮೆಗಳು | ೦೧ | ೧೦.೦೦ | ೯.೦೦ | ೨.೫೦ |
| ಇಂಜಿನಿಯರಿಂಗ್ ಹಾಗೂ ಅಸಂಪ್ರದಾಯಿಕ ಶಕ್ತಿ ಉದ್ದಿಮೆಗಳು | ೦೧ | ೧೦.೦೦ | ೯.೫೦ | ೩.೦೦ |
| **ಒಟ್ಟು** | **೦೨** | **೨೦.೦೦** | **೧೮.೫೦** | **೫.೫೦** |
| | **೨೦೦೨–೦೩** | | | |
| ಖನಿಜಾಧಾರಿತ ಉದ್ದಿಮೆಗಳು | ೦೬ | ೩೨.೦೦ | ೨೭.೩೫ | ೯.೨೩ |
| ಅರಣ್ಯಾಧಾರಿತ ಉದ್ದಿಮೆಗಳು | ೦೧ | ೧೦.೦೦ | ೯.೫೦ | ೩.೦೦ |
| ಕೃಷಿ ಆಧಾರಿತ ಹಾಗೂ ಆಹಾರ ಉದ್ದಿಮೆಗಳು | ೧೫ | ೩೪.೨೦ | ೨೭.೨೭ | ೮.೯೯ |
| ಪಾಲಿಮರ್ ಮತ್ತು ರಾಸಾಯನಿಕ ಆಧಾರಿತ ಉದ್ದಿಮೆಗಳು | ೧೮ | ೪೦.೯೦ | ೩೫.೨೫ | ೧೨.೮ |
| ಇಂಜನಿಯರಿಂಗ್ ಹಾಗೂ ಅಸಂಪ್ರದಾಯಿಕ ಶಕ್ತಿ ಉದ್ದಿಮೆಗಳು | ೧೩ | ೬೨.೮೭ | ೪೦.೨೭ | ೧೩.೬೩ |
| ಸೇವಾ ಉದ್ದಿಮೆಗಳು | ೪೯ | ೮೪.೦೨ | ೬೭.೮೨ | ೨೨.೩೬ |
| **ಒಟ್ಟು** | **೧೦೨** | **೨೫೩.೫೪** | **೨೦೮.೪೦** | **೬೯.೪೯** |
| | **೨೦೦೩–೨೦೦೪** | | | |
| ಖನಿಜಾಧಾರಿತ ಉದ್ದಿಮೆಗಳು | ೦೧ | ೧೦.೬೦ | ೧೦.೦೦ | ೨.೫೮ |
| ಅರಣ್ಯಾಧಾರಿತ ಉದ್ದಿಮೆಗಳು | ೦೧ | ೧.೦೦ | ೦.೭೫ | ೦.೩೫ |
| ಕೃಷಿ ಆಧಾರಿತ ಹಾಗೂ ಆಹಾರ ಉದ್ದಿಮೆಗಳು | ೧೨ | ೬೮.೦೧ | ೪೮.೪೧ | ೧೭.೩೪ |
| ಪಾಲಿಮರ್ ಮತ್ತು ರಾಸಾಯನಿಕ ಆಧಾರಿತ ಉದ್ದಿಮೆಗಳು | ೧೨ | ೧೪.೬೯ | ೧೦.೬೫ | ೪.೧೧ |
| ಇಂಜನಿಯರಿಂಗ್ ಹಾಗೂ ಅಸಂಪ್ರದಾಯಿಕ ಶಕ್ತಿ ಉದ್ದಿಮೆಗಳು | ೧೨ | ೬೦.೦೪ | ೩೬.೨೦ | ೧೩.೭೬ |
| ಸೇವಾ ಉದ್ದಿಮೆಗಳು | ೪೦ | ೫೬.೬೩ | ೪೪.೧೬ | ೧೬.೧೯ |
| **ಒಟ್ಟು** | **೭೮** | **೨೦೦.೦೭** | **೧೫೦.೧೭** | **೬೪.೩೨** |

| | | | | |
|---|---|---|---|---|
| | ೨೦೦೪-೦೫ | | | |
| ಕೃಷಿ ಆಧಾರಿತ ಹಾಗೂ ಆಹಾರ ಉದ್ದಿಮೆಗಳು | ೧೧ | ೧೦೬.೪೪ | ೭೧.೪೪ | ೨೨.೬೧ |
| ಪಾಲಿಮರ್ ಮತ್ತು ರಾಸಾಯನಿಕ ಆಧಾರಿತ ಉದ್ದಿಮೆಗಳು | ೦೧ | ೦.೮೦ | ೦.೫೦ | ೦.೧೬ |
| ಸೇವಾ ಉದ್ದಿಮೆಗಳು | ೨೩ | ೭೫.೫೮ | ೬೫.೦೧ | ೧೮.೦೫ |
| ಅರಣ್ಯಾಧಾರಿತ ಉದ್ದಿಮೆಗಳು | ೦೧ | ೩.೬೯ | ೩.೫೦ | ೧.೧೧ |
| ಮಾರಾಟ ವ್ಯವಸ್ಥೆಗೆ | ೦೧ | ೧೧.೧೨ | ೧೦.೦೦ | ೩.೦೦ |
| ಇಂಜನಿಯರಿಂಗ್ ಹಾಗೂ ಅಸಂಪ್ರದಾಯಿಕ ಶಕ್ತಿ ಉದ್ದಿಮೆಗಳು | ೦೪ | ೨೮.೦೦ | ೨೬.೦೦ | ೭.೭೭ |
| ಖನಿಜಾಧಾರಿತ ಉದ್ದಿಮೆಗಳು | ೦೪ | ೫೨.೭೨ | ೩೬.೨೯ | ೧೦.೧೩ |
| **ಒಟ್ಟು** | **೪೫** | **೨೭೮.೩೫** | **೨೧೨.೭೪** | **೬೨.೮೩** |
| | ೨೦೦೫-೨೦೦೬ | | | |
| ಕೃಷಿ ಆಧಾರಿತ ಹಾಗೂ ಆಹಾರ ಉದ್ದಿಮೆಗಳು | ೨೦ | ೧೪೩.೯೯ | ೧೨೦.೬೪ | ೩೩.೫೫ |
| ಪಾಲಿಮರ್ ಮತ್ತು ರಾಸಾಯನಿಕ ಆಧಾರಿತ ಉದ್ದಿಮೆಗಳು | ೦೩ | ೩೬.೬೨ | ೨೯.೫೫ | ೬.೬೫ |
| ಸೇವಾ ಉದ್ದಿಮೆಗಳು | ೨೦ | ೭೭.೧೬ | ೬೭.೦೩ | ೨೧.೦೨ |
| (೧) | (೨) | (೩) | (೪) | (೫) |
| ಇಂಜನಿಯರಿಂಗ್ ಹಾಗೂ ಅಸಂಪ್ರದಾಯಿಕ ಶಕ್ತಿ ಉದ್ದಿಮೆಗಳು | ೦೫ | ೨೮.೮೨ | ೨೨.೯೭ | ೭.೨೦ |
| ಖನಿಜಾಧಾರಿತ ಉದ್ದಿಮೆಗಳು | ೧೨ | ೯೩.೬೭ | ೮೧.೫೭ | ೨೪.೮೮ |
| ಅರಣ್ಯಾಧಾರಿತ ಉದ್ದಿಮೆಗಳು | ೦೧ | ೨೨.೯೮ | ೧೬.೫೦ | ೩.೦೦ |
| **ಒಟ್ಟು** | **೬೧** | **೪೦೧.೨೪** | **೩೩೮.೨೦** | **೯೬.೩೦** |

ಕಳೆದ ಶತಮಾನದ ಅಂತ್ಯದವರೆಗೂ ಹೊಟೇಲ್‌ಗಳು ಕೇವಲ ನಗರ-ಪಟ್ಟಣಗಳಲ್ಲಿ ಹೊರ ಪ್ರದೇಶದಿಂದ ಬರುವ ಜನರ/ಪ್ರಯಾಣಿಕರ ಬಳಕೆಗಾಗಿ ಮಾತ್ರ ಸೀಮಿತವಾಗಿದ್ದುವು. ನಂತರದ ದಿನಗಳಲ್ಲಿ ನಗರೀಕರಣ, ವ್ಯಾಪಾರೀಕರಣ ಬೆಳೆಯುತ್ತಾ ಬಂದಂತೆ ಪ್ರಮುಖ ಸ್ಥಳಗಳಲ್ಲಿ ಹೋಟೆಲ್‌ಗಳು ಹುಟ್ಟಿಕೊಂಡವು. ಅತಿಥಿ ಸತ್ಕಾರಕ್ಕೆ ಹೆಸರಾದ ಕರಾವಳಿಯ ಉಡುಪಿ ಜಿಲ್ಲೆ, ಹೊಟೇಲುಗಳ ತವರೂರು ಎಂದರೂ ಆಶ್ಚರ್ಯವಿಲ್ಲ. ಉಡುಪಿಯ ಉದ್ಯಮಶೀಲ ಜನ ಈ ಉದ್ಯಮದ ಮೂಲಕ ತಮ್ಮನ್ನು ಗುರುತಿಸಿಕೊಂಡಿರುವುದು ಒಂದು ಸಾಧನೆಯೇ ಸರಿ. ಆರಂಭದ ದಿನಗಳಲ್ಲಿ ಹೊಟೇಲುಗಳು ಸಾಧಾರಣ ಕಟ್ಟಡಗಳಲ್ಲಿ ಬೆಂಚು ಮೇಜುಗಳನ್ನು ಹೊಂದಿದ್ದು, ತಿಂಡಿ, ತಿನಿಸುಗಳಿಗೆ ಪ್ರಾಧಾನ್ಯವಿರುತ್ತಿತ್ತು. ಹಿತ್ತಾಳೆ ಅಥವಾ ಗಾಜಿನ ಲೋಟಗಳನ್ನು ಬಳಸಲಾಗುತ್ತಿದ್ದು, ಕೇವಲ ಪೇಟೆಯಲ್ಲಿ ಮಾತ್ರ ಕಪ್-ಸಾಸರ್‌ಗಳನ್ನು ಉಪಯೋಗಿಸಲಾಗುತ್ತಿತ್ತು. ಊಟ ಬಡಿಸಲು ಬಾಳೆ ಎಲೆಯನ್ನು ಬಳಸಲಾಗುತ್ತಿತ್ತು.

ಎರಡನೇ ಮಹಾಯುದ್ಧ ಕಾಲದಲ್ಲಿ ಹೊಟೇಲ್ ಉದ್ಯಮ ವೇಗವಾಗಿ ಬೆಳೆಯಿತು. ದೇಶದಲ್ಲಿ ಆಹಾರ ವಸ್ತುಗಳ ಅಭಾವದಿಂದಾಗಿ ದೇಶದಲ್ಲಿ ಪದಾರ್ಥಗಳ 'ಪಡಿತರವ್ಯವಸ್ಥೆ' ಜಾರಿಗೆ ಬಂದು, ಜನರಿಗೆ ಊಟ ತಿಂಡಿಗೂ ತೊಂದರೆಯಾಯಿತು. ಇಂತಹ ಸಮಯದಲ್ಲಿ ಜನರಲ್ಲಿ ಹೊಟೇಲ್‌ಗೆ ಶರಣಾಗುವ ಪ್ರವೃತ್ತಿ ಬೆಳೆಯತೊಡಗಿತು. ವ್ಯಾಪಾರವು ನಗದಾಗಿಯೇ ನಡೆದು ವ್ಯಾಪಾರದ ಪ್ರಮಾಣವೂ ಅಧಿಕವಾಗಿದ್ದುದರಿಂದ ಹೊಟೇಲ್ ಲಾಭದಾಯಕ ಉದ್ಯಮವಾಯಿತು. ತದನಂತರ ಉತ್ತಮ ಕಟ್ಟಡ, ಆಧುನಿಕ ರೀತಿಯ ಪೀಠೋಪಕರಣಗಳು, ಹೊಸ ರೀತಿಯ ಪಾತ್ರೆ-ಪರಿಕರಗಳು ಹೊಟೇಲ್ ಉದ್ಯಮವನ್ನು

**ಕೋಷ್ಟಕ ೫.೨೪ : ಜಿಲ್ಲೆಯ ಕುಶಲಕರ್ಮಿಗಳ ತಾಲೂಕುವಾರು ವಿವರ**

| ಕ್ರ.ಸಂ. | ವೃತ್ತಿ | ಉಡುಪಿ | ಕುಂದಾಪುರ | ಕಾರ್ಕಳ | ಒಟ್ಟು ಕುಟುಂಬಗಳ ಸಂಖ್ಯೆ |
|---|---|---|---|---|---|
| ೧ | ಬಡಗಿ | ೧,೨೭೧ | ೧,೨೨೯ | ೩೭೩ | ೨,೮೭೩ |
| ೨ | ಅಕ್ಕಸಾಲಿಗ | ೨೧೨ | ೬೯ | ೧೩೨ | ೪೧೩ |
| ೩ | ಕಮ್ಮಾರಿಕೆ | ೮೭ | ೧೦೦ | ೪೯ | ೨೩೬ |
| ೪ | ಕುಂಬಾರಿಕೆ | ೪೭ | ೧೧೮ | ೩೧ | ೧೯೬ |
| ೫ | ಕಲ್ಲಿನ ಕೆತ್ತನೆ | ೧೦ | ೨೪ | ೨೬ | ೬೦ |
| ೬ | ಮರದ ಕೆತ್ತನೆ | ೦೧ | ೩೨ | ೦೯ | ೪೨ |
| ೭ | ಕಲ್ಲು ಒಡೆಯುವುದು | ೨೮ | ೮೫ | ೪೫ | ೧೫೮ |
| ೮ | ಗಾರೆ ಕೆಲಸ | ೨೧೪ | ೫೧೩ | ೩೧೭ | ೧,೧೪೪ |
| ೯ | ಚಾಪೆ ಹೆಣಿಗೆ | ೪೪ | ೬೬ | ೩೧ | ೧೪೧ |
| ೧೦ | ಬುಟ್ಟಿ ಹೆಣಿಗೆ | ೨೬೬ | ೨೬೬ | ೧೧೪ | ೬೪೬ |
| ೧೧ | ಬಲೆ ನೇಯ್ಗೆ | ೧೮ | – | – | ೧೮ |
| ೧೨ | ದರ್ಜಿ | ೪೭ | ೪೬ | ೦೫ | ೯೮ |
| ೧೩ | ಚರ್ಮಗಾರಿಕೆ | ೧೦ | ೦೩ | ೦೩ | ೧೬ |
| ೧೪ | ಸುಣ್ಣ ಸುಡುವಿಕೆ | ೧೧ | ೧೭ | ೦೩ | ೩೧ |
| ೧೫ | ನೇಕಾರಿಕೆ | ೫೨ | ೧೪ | ೦೬ | ೭೨ |
| ೧೬ | ನಾರು ತಯಾರಿಕೆ | ೧೧ | ೪೫ | ೩೦ | ೮೬ |
| ೧೭ | ಕ್ಷೌರಿಕ | ೧೫ | ೬೬ | ೦೨ | ೮೩ |
| ೧೮ | ದೋಬಿ | ೨೩ | ೨೭ | ೩೮ | ೮೮ |
| ೧೯ | ಬೆತ್ತ / ಬಿದಿರು | ೦೫ | ೦೭ | ೪೩ | ೫೫ |
| ೨೦ | ಇತರೆ | ೩೮ | ೪೦ | ೦೭ | ೮೫ |

ಪ್ರವೇಶಿಸಿದವು. ಹೊಟೇಲ್‌ಗೆ ಹೋಗಿ ತಿನ್ನುವುದು 'ನಮ್ಮ ಸಂಸ್ಕೃತಿ'ಯಲ್ಲ ಎನ್ನುವ ಜನಸಾಮಾನ್ಯರ ತಿಳುವಳಿಕೆಯಲ್ಲಿ ಬದಲಾವಣೆಯಾಗಿ ಹೊಟೇಲ್‌ಗೆ ಭೇಟಿ ನೀಡುವುದು ಒಂದು ರೀತಿಯಲ್ಲಿ ಆಧುನಿಕ ಮನೋಭಾವದ ಪ್ರತೀಕ ಎನ್ನುವ ಭಾವನೆಯುಂಟಾಯಿತು.

ಜಿಲ್ಲೆಯ ಜನ ಬೇರೆ ಬೇರೆ ಕಡೆ ವಲಸೆ ಹೋಗಿದ್ದು, ಅಂತಹ ಕಡೆಗಳಲ್ಲಿ ಉಡುಪಿ ಹೊಟೇಲ್‌ಗಳು ತಲೆಯೆತ್ತಿದ್ದುವು. ೧೯೭೭ ಇಸವಿಯಲ್ಲಿ ಡಾ.ಟಿ.ಎಂ.ಎ. ಪೈ ಅಭಿನಂದನಾ ಗ್ರಂಥ 'ಸುದರ್ಶನ'ದಲ್ಲಿ ಐ.ವಿ. ರಾಮರಾವ್ ತಮ್ಮ 'ಜಿಲ್ಲೆಯಲ್ಲಿ ಹೊಟೇಲ್ ಉದ್ಯಮ ಬೆಳೆದು ಬಂದ ಬಗೆ' ಲೇಖನದಲ್ಲಿ ಹೊರ ನಗರಗಳಲ್ಲಿ ಹೊಟೇಲ್ ಉದ್ಯಮ ಸ್ಥಾಪಿಸಿರುವ ಬಗ್ಗೆ ಹೀಗೆ ಉಲ್ಲೇಖಿಸುತ್ತಾರೆ. 'ಜಾರ್ಜ್ ಚಕ್ರವರ್ತಿಯ ದೆಹಲಿ ದರ್ಬಾರಿಗೆ ಹೋಗಿದ್ದ ಕಾಣೆಮಾರ್ ವೆಂಕಪ್ಪಯ್ಯ ಮುಂಬಯಿಯಲ್ಲಿ ದಕ್ಷಿಣ ಭಾರತದ ತಿಂಡಿ ತಿನಿಸುಗಳನ್ನು ಪೂರೈಸುವ ಹೊಟೇಲಿನ ಅಗತ್ಯವನ್ನು ಮನಗಂಡರು. ೧೯೧೨–೧೩ರ ವೇಳೆಗೆ ಅವರು ಭಾರತದ ಮೊಟ್ಟ ಮೊದಲ ದಕ್ಷಿಣ ಭಾರತೀಯ ಹೊಟೇಲನ್ನು ಮುಂಬಯಿಯಲ್ಲಿ ಪ್ರಾರಂಭಿಸಿದರು. ಅದು ವೆಲ್‌ಕಮ್ ಹೊಟೇಲ್. ಮುಂದೆ ವೆಂಕಟರಾಯರ ಕೋಮಲ ವಿಲಾಸ್, ಹೆಬ್ಬಾರರ 'ಮಾಡರ್ನ್ ಹಿಂದೂ ಹೊಟೇಲ್' ಹಾಗೂ ರೆಸ್ಟೋರೆಂಟ್‌ಗಳು ಪ್ರಾರಂಭವಾದವು. ಉಡುಪಿ ಬೋರ್ಡಿಂಗ್ ಎಂಬಿತ್ಯಾದಿ

ದಕ್ಷಿಣ ಕನ್ನಡದ ಹೊಟೇಲ್‌ಗಳಿಗೆ ಉಡುಪಿ ಹೆಸರನ್ನು ತಗುಲಿಸಿ ದಕ್ಷಿಣ ಕನ್ನಡದ ತಿಂಡಿ–ತಿನಿಸು ಒದಗಿಸಿದವರಲ್ಲಿ ರಾಮನಾಯಕರು ಪ್ರಮುಖರು (೧೯೩೫–೩೬ರ ವೇಳೆಗೆ). ಎರಡನೇ ಮಹಾಯುದ್ಧದ ವೇಳೆಗೆ ಇಂತಹ ರೆಸ್ಟೋರೆಂಟ್‌ಗಳ ಸಂಖ್ಯೆ ಹೆಚ್ಚಾಯಿತು. ಮದ್ರಾಸಿಗೆ ಹೋಗಿ ಹೊಟೇಲ್ ಉದ್ದಿಮೆಯಲ್ಲಿ ಹೆಸರಾದವರು 'ಮಾಡರ್ನ್ ಕೆಫೆ ಮತ್ತು ದಾಸಪ್ರಕಾಶಗಳ ಸ್ಥಾಪಕ ಕೆ. ಸೀತಾರಾಮರಾವ್, ವುಡ್‌ಲ್ಯಾಂಡ್ಸ್ ಸ್ಥಾಪಕ ಕೆ. ಕೃಷ್ಣರಾವ್ ಮೊದಲಾದವರು. ವುಡ್‌ಲ್ಯಾಂಡ್ಸ್ ಹೊಟೇಲ್ ನ್ಯೂಯಾರ್ಕ್ ಅನ್ನು (೧೯೭೬) ತಲುಪಿದೆ. ಬೆಂಗಳೂರಿನ ಮಾವಳ್ಳಿ ಟಿಫಿನ್‌ರೂಮ್ (೧೯೨೪) ಯಜ್ಞನಾರಾಯಣ ಮಯ್ಯರಿಂದ ಸ್ಥಾಪಿಸಲ್ಪಟ್ಟು ಗುಣಮಟ್ಟಕ್ಕೆ ಅನೇಕ ವರ್ಷಗಳಿಂದ ಹೆಸರಾಗಿದೆ.

'ಬ್ಯಾಂಕುಗಳ ತವರೂರು' ಎಂದೇ ಖ್ಯಾತವಾಗಿರುವ ಉಡುಪಿ ಜಿಲ್ಲೆಯು ಹೊಟೇಲ್ ಉದ್ಯಮದಲ್ಲೂ ತನ್ನ ಛಾಪು ಮೂಡಿಸಿದೆ. ಜಿಲ್ಲೆಯಲ್ಲಿ ಶ್ರೀ ಕೃಷ್ಣ ಕ್ಷೇತ್ರ–ಉಡುಪಿ; ಮೂಕಾಂಬಿಕಾ ದೇವಸ್ಥಾನ–ಕೊಲ್ಲೂರು; ಜೈನ ಬಸದಿ–ಕಾರ್ಕಳ; ಸೈಂಟ್ ಲಾರೆನ್ಸ್ ಚರ್ಚ್–ಅತ್ತೂರು; ಮಹಾ ಗುಣಪತಿ ದೇವಸ್ಥಾನ–ಆನೆಗುಡ್ಡೆ ಮತ್ತಿತರ ಪುಣ್ಯಕ್ಷೇತ್ರಗಳು; ಮಲ್ಪೆ, ಸೆಂಟ್ ಮೇರೀಸ್ ಐಲ್ಯಾಂಡ್, ಕಾಪು ಮರವಂತೆ, ಬೈಂದೂರು ಮತ್ತಿತರ ಬೀಚ್‌ಗಳು, ಮಣಿಪಾಲ್ ಅಕೆಡಮಿ ಆಫ್ ಹೈಯರ್ ಎಜ್ಯುಕೇಷನ್ Manipal Academy of Higher Education (MAHE) (ಇದೊಂದು ಸ್ವಾಯತ್ತ ವಿಶ್ವವಿದ್ಯಾಲಯ), ಎರಡು ಮೆಡಿಕಲ್ ಕಾಲೇಜುಗಳು, ಒಂದು ದಂತ ವೈದ್ಯಕೀಯ ಕಾಲೇಜು, ಮೂರು ಎಂಜಿನಿಯರಿಂಗ್ ಕಾಲೇಜುಗಳು, ನಾಲ್ಕು ಪಾಲಿಟೆಕ್ನಿಕ್ ಕಾಲೇಜುಗಳು, ಆಸ್ಪತ್ರೆಗಳು, ಆಯುರ್ವೇದ ಆಸ್ಪತ್ರೆಗಳು, ನರ್ಸಿಂಗ್ ಹೋಂಗಳು, ೧೪ ಮಧ್ಯಮ ಪ್ರಮಾಣದ ಕೈಗಾರಿಕೆಗಳಿದ್ದು, ಭಕ್ತಾದಿಗಳನ್ನು, ಪ್ರವಾಸಿಗರನ್ನು ಉದ್ಯೋಗಾಕಾಂಕ್ಷಿಗಳನ್ನು, ವಿದ್ಯಾರ್ಥಿಗಳನ್ನು, ಸೂಜಿಗಲ್ಲಿನಂತೆ ಜಿಲ್ಲೆಯು ಆಕರ್ಷಿಸುತ್ತಿದೆ. ಹೊಟೇಲ್ ಶಾರದ ಇಂಟರ್‌ನ್ಯಾಷನಲ್, ಹೊಟೇಲ್ ಶ್ರೀರಾಮಕೃಷ್ಣ, ಹೊಟೇಲ್ ದುರ್ಗಾ ಇಂಟರ್‌ನ್ಯಾಷನಲ್, ಹೊಟೇಲ್ ಸ್ವದೇಶಿ ಹೆರಿಟೇಜ್, ಹೊಟೇಲ್ ಉಡುಪಿ ರೆಸಿಡೆನ್ಸಿ, ಹೊಟೇಲ್ ರುಕ್ಮಿಣಿ ರೆಸಿಡೆನ್ಸಿ, ಹೊಟೇಲ್ ರಾಯಲ್ ಇಂಟರ್‌ನ್ಯಾಷನಲ್, ಹೊಟೇಲ್ ಕಿದಿಯೂರು, ಹೊಟೇಲ್ ಬಿಗ್‌ಬಾಸ್, ಹೊಟೇಲ್ ಭವಾನಿ, ಸುಷ್ಮಾ ಲಾಡ್ಜಿಂಗ್, ಹೊಟೇಲ್ ಶಾಂತಲ, ಹೊಟೇಲ್ ಜನಾರ್ದನ, ಹೊಟೇಲ್ ಕರಾವಳಿ ಎಲ್ಲವೂ ಉಡುಪಿಯಲ್ಲಿವೆ. ಪ್ಯಾರಡೈಸ್ ಹೈಲ್ಯಾಂಡ್ (ಮಲ್ಪೆ), ಹೊಟೇಲ್ ವ್ಯಾಲಿ ವ್ಯೂ ಇಂಟರ್‌ನ್ಯಾಷನಲ್ (ಮಣಿಪಾಲ್), ಹೊಟೇಲ್ ಗ್ರೀನ್ ಪಾರ್ಕ್ (ಮಣಿಪಾಲ್), ಮದರ್ ಪ್ಯಾಲೇಸ್ (ಬ್ರಹ್ಮಾವರ), ಹೊಟೇಲ್ ಆಶ್ರಯ (ಬ್ರಹ್ಮಾವರ), ಹೊಟೇಲ್ ಅಮರ್ ಕಂಪೋರ್ಟ್ (ಪಡುಬಿದ್ರಿ), ಹೊಟೇಲ್ ಸ್ವಾಗತ್ (ಕಾರ್ಕಳ), ಹೊಟೇಲ್ ಸುಹಾಗ್ (ಕಾರ್ಕಳ), ಹೊಟೇಲ್ ಕಿಂಗ್ಸ್ ಕೋರ್ಟ್ (ಕುಂದಾಪುರ), ಹೊಟೇಲ್ ಶಶಿಧರ (ಕುಂದಾಪುರ), ಹೊಟೇಲ್ ಜೆ. ಕೆ. ರೆಸಿಡೆನ್ಸಿ (ಕಾರ್ಕಳ), ಹೊಟೇಲ್ ಶರೂನ್ (ಕುಂದಾಪುರ) ಮೊದಲಾದ ಹೊಟೇಲ್ ಹಾಗೂ ರೆಸಾರ್ಟ್ಸ್‌ಗಳಿದ್ದು, ಉಪಾಹಾರ, ಊಟ ಮತ್ತು ವಸತಿ ಸೌಲಭ್ಯಗಳನ್ನು ಒದಗಿಸುತ್ತಿವೆ.

* * * * *